ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog : janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 23 ಜೂನ್ 05, 2011 ರೂ. 5/- ಪುಟ 16



ಕೂಗು ಮಾರಿ ಬಿಜೆಪಿ ಅಧಿಕಾರದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿ

ಎತ್ತಣ ಆಹಾರ ಭದ್ರತೆ ! ಎತ್ತಣ ಯು.ಪಿ.ಎ. ಸರ್ಕಾರ ?



▶ 2

ಆಧುನಿಕ ಭಾರತದ ವಿಕಾಸ ಎಡಶಕ್ತಿಗಳ ಕೊಡುಗೆ



▶ 8

ಪಶ್ಚಿಮ ಬಂಗಾಳ : ಆರಂಭವಾಗಿದೆ ಆಳುವ ವರ್ಗಗಳ ದಾಳಿ



ಸರ್ಕಾರದ ಭೂ ಕಬಳಿಕೆ ಬಗರ್‌ಹುಕುಂ ಸಾಗುವಳಿದಾರರು ಹೋರಾಟದ ಕಣಕ್ಕೆ



▶ 5

ಎರಡು ವರ್ಷಗಳು ಮುಗಿದು ಹೋದರೂ, ಆಹಾರ ಭದ್ರತೆಯ ಕಾನೂನು ಎಂಬುದು ನಮ್ಮ ದೇಶದಲ್ಲಿ ಬಡತನದ ಪ್ರಮಾಣವೆಷ್ಟು ಎಂಬ ಒಣ ಚರ್ಚೆಯಲ್ಲಿಯೇ ಮುಳುಗಿ ಹೋಗಿದೆ. ಜನತೆಯನ್ನು ವಂಚಿಸುವ ಉದ್ದೇಶವುಳ್ಳ ಏನೇನೋ ಕಸರತ್ತುಗಳನ್ನು ನಡೆಸುವ ಬದಲು, ಯುಪಿಎ-2 ಸರಕಾರ ಒಂದು ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ತರುವುದು ಒಳ್ಳೆಯದು. ಇದಕ್ಕೆ ಅಗತ್ಯವಾದ ಸಂಪನ್ಮೂಲಗಳು ಭಾರತದ ಬಳಿ ಇಲ್ಲ ಎನ್ನುವ ತರ್ಕವೂ ಕೂಡ ಅಷ್ಟೇ ಮೋಸದ್ದು. ಕೇವಲ 2ಜಿ ಹಗರಣವೊಂದರಲ್ಲಿ ಲೂಟಿ ಮಾಡಿದ ಹಣವೇ ನಮ್ಮ ಜನತೆಗೆ ಒಂದು ಅರ್ಥಪೂರ್ಣ ಆಹಾರ ಭದ್ರತೆಯನ್ನು ಒದಗಿಸಲು ಬೇಕಾದಷ್ಟಾಗುತ್ತದೆ.

ಎತ್ತಣ ಆಹಾರ ಭದ್ರತೆ ? ಎತ್ತಣ ಯುಪಿಎ ಸರ್ಕಾರ ?

ಯುಪಿಎ ಸರಕಾರ ಒಂದು ರಾಷ್ಟ್ರೀಯ ಆಹಾರ ಭದ್ರತಾ ಕಾನೂನು ತರುತ್ತೇವೆ ಎಂದು ಪ್ರಕಟಿಸಿ ಎರಡು ವರ್ಷಗಳೇ ಉರುಳಿ ಹೋಗಿವೆ. 15ನೇ ಲೋಕಸಭಾ ಚುನಾವಣೆಗಳ ನಂತರ ನಡೆದ ಸಂಸತ್ತಿನ ಮೊದಲ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತ ಭಾರತದ ರಾಷ್ಟ್ರಪತಿಗಳು 'ತಮ್ಮ ಸರಕಾರ' ಮೊದಲ ನೂರು ದಿನಗಳ ಒಳಗೆ ಇಂತಹ ಒಂದು ಶಾಸನ ತರುವುದಾಗಿ ಪ್ರಕಟಿಸಿದ್ದರು. ನಮ್ಮ ದೇಶದಲ್ಲಿ ಬಡತನದ ಪ್ರಮಾಣ ಎಷ್ಟು ಎಂಬ ಮುಗಿಯದ ಚರ್ಚೆಯ ನೆಪವೊಡ್ಡಿ ಈ ಭರವಸೆಯ ಈಡೇರಿಕೆ ವಿಳಂಬಗೊಳ್ಳುತ್ತಲೇ ಇದೆ.

ಸುಪ್ರಿಂ ಕೋರ್ಟಿನ ಎದುರು ಇರುವ ಒಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ಕಲಾಪಗಳಲ್ಲಿ ಯೋಜನಾ ಆಯೋಗ, ತಮ್ಮ ಜೀವನದ ಆವಶ್ಯಕ ಅಗತ್ಯಗಳಿಗೆ ನಗರ ಪ್ರದೇಶಗಳಲ್ಲಿ ದಿನಕ್ಕೆ 20 ರೂ. ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 15 ರೂ. ಖರ್ಚು ಮಾಡುತ್ತಿದ್ದರೆ ಸಾಕು, ಅಂತವರು ಬಡತನದಿಂದ ಪಾರಾಗಿರುತ್ತಾರೆ ಎಂದು ಹೇಳಿದೆ. ಅಂದರೆ, ಇದಕ್ಕಿಂತ ಹೆಚ್ಚು ಆದಾಯ ಉಳ್ಳವರು ಈ ಪ್ರಸ್ತಾವಿತ ಕಾನೂನು ಒದಗಿಸುವ ಭದ್ರತಾ ಚೌಕಟ್ಟಿನ ಒಳಗೆ ಬರುವುದಿಲ್ಲ ಎಂಬುದು ಇದರರ್ಥ.

ಅಸಂಬದ್ಧ ಲೆಕ್ಕಾಚಾರ

ನಗರಪ್ರದೇಶಗಳಲ್ಲಿ ದಿನಕ್ಕೆ 20ರೂ.ಗಳ ಈ ಬಡತನದ ರೇಖೆಯ ಲೆಕ್ಕ ಬಂದಿರುವುದು, ತಿಂಗಳಿಗೆ 578ರೂ.ಗಳಿಗಿಂತ ಹೆಚ್ಚು ಆದಾಯದ ಯಾರನ್ನೇ ಆಗಲಿ ಬಡವರು ಎಂದು ಪರಿಗಣಿಸಲಾಗದು ಎಂಬ ಯೋಜನಾ ಆಯೋಗದ ಅಭಿಪ್ರಾಯದ ಆಧಾರದಲ್ಲಿ. ಅದರ ವರದಿಯ ಪ್ರಕಾರ ಇದರಲ್ಲಿ ತಿಂಗಳಿಗೆ ಬಾಡಿಗೆ ಮತ್ತು ಓಡಾಟಕ್ಕೆ 31ರೂ., ಶಿಕ್ಷಣಕ್ಕೆ 18ರೂ., ಔಷಧಿಗಳಿಗೆ 25ರೂ. ಮತ್ತು ತರಕಾರಿಗಳಿಗೆ 36.50ರೂ. ಸೇರಿರುತ್ತದೆ. ಇದು ತಮಾಷೆಯೋ! . ಮೋಸವೋ! ನಿಜಸಂಗತಿಯೆಂದರೆ, ಇದೊಂದು ತಮಾಷೆಯೂ ಹೌದು, ಮೋಸವೂ ಹೌದು.

ಅದೇ ಯೋಜನಾ ಆಯೋಗ ಒಬ್ಬ ವ್ಯಕ್ತಿ ಬದುಕುಳಿಯಲು ಕನಿಷ್ಟ 2400 ಕ್ಯಾಲರಿ ಆಹಾರ ಸೇವಿಸಬೇಕಾಗುತ್ತದೆ ಎಂದಿದೆ; ಇದಕ್ಕೆ ಕನಿಷ್ಟ ದಿನಕ್ಕೆ 44 ರೂ. ಗಳಾದರೂ ಬೇಕು. ಇದು ಕೇವಲ ಆಹಾರಕ್ಕೆ. ತಲೆಯ ಮೇಲಿನ ಸೂರು, ಹೊದೆಯಲು ಬಟ್ಟೆ, ಶಿಕ್ಷಣ, ಓಡಾಟದ ಖರ್ಚುಗಳು ಪ್ರತ್ಯೇಕ. ಯೋಜನಾ ಆಯೋಗದ ಲೆಕ್ಕಾಚಾರ ಎಷ್ಟು ಅಸಂಬದ್ಧ ಎಂಬುದನ್ನು ಇದೇ ತೋರಿಸುತ್ತದೆ.

ಇಂತಹ ತರ್ಕದ ಆಧಾರದಲ್ಲಿಯೇ ಯೋಜನಾ ಆಯೋಗ ನಮ್ಮ ಜನಸಂಖ್ಯೆಯ 33ಶೇ ಬಡವರು ಎಂದು ಲೆಕ್ಕ ಹಾಕಿದೆ. ರಾಷ್ಟ್ರೀಯ ಸಲಹಾ ಮಂಡಳಿ(ಎನ್‌ಎಸಿ) ಇದು 46ಶೇ ಇರಬೇಕು ಎಂದು ಸೂಚಿಸಿದೆ. ದಿವಂಗತ ಅರ್ಜುನ್ ಸೆನ್‌ಗುಪ್ತರವರು ದಿನಕ್ಕೆ 20ರೂ.ಗಿಂತ ಕಡಿಮೆ ಆದಾಯದದಲ್ಲಿ ಬದುಕುಳಿದವರ ಈಗಿನ ಪ್ರಮಾಣ 77ಶೇ ಎಂದು ಅಂದಾಜು ಮಾಡಿದ್ದರು. ಅಂದರೆ ಉಳಿದೆರಡೂ ಅವರ ಅಂದಾಜಿಗಿಂತ ಎಷ್ಟೋ ಕಡಿಮೆ ಮಟ್ಟದಲ್ಲಿವೆ.

ಮುಖವಾಡವಷ್ಟೇ

ಇಂತಹ ಕಪಟ ಕಸರತ್ತುಗಳು ನಮ್ಮ ದೇಶದಲ್ಲಿ ಆಹಾರ ಭದ್ರತೆಯನ್ನು ಒದಗಿಸುವ ವಚನದ



ಅಪಹಾಸ್ಯ ಮಾತ್ರವೇ ಅಲ್ಲ. ವಾಸ್ತವವಾಗಿ, ಇವು ನವ-ಉದಾರವಾದಿ ಆರ್ಥಿಕ ಧೋರಣೆಗಳನ್ನು ಉಗ್ರವಾಗಿ ಅನುಸರಿಸುವ ನಿಜವಾದ ಆಶಯಕ್ಕೆ ಹಾಕುತ್ತಿರುವ ಮುಖವಾಡ. ಎರಡು ಭಾರತಗಳ ನಡುವಿನ ಕಂದರವನ್ನು ಇನ್ನಷ್ಟು ಹೆಚ್ಚಿಸಿ ನಮ್ಮ ಜನಗಳ ಬದುಕನ್ನು ಇನ್ನಷ್ಟು ನರಕಗೊಳಿಸುತ್ತಲೇ ಇರುವ ಧೋರಣೆಗಳವು.

ಈ ನಡುವೆ, ಕೇಂದ್ರ ಸಂಪುಟ ಕಳೆದ ವಾರ ಸಮಸ್ತ ಜನಸಂಖ್ಯೆಯ ಆರ್ಥಿಕ, ಜಾತಿ ಮತ್ತು ಧಾರ್ಮಿಕ ಹಿನ್ನೆಲೆಗಳನ್ನು ಒಟ್ಟೊಟ್ಟಿಗೇ ವಿವರವಾಗಿ ಕಲೆ ಹಾಕುವ ಒಂದು ರಾಷ್ಟ್ರವ್ಯಾಪಿ ಸರ್ವೆಯನ್ನು ನಡೆಸಲು ಮಂಜೂರಾತಿ ಕೊಟ್ಟಿದೆ. ಭಾರತದ ರಿಜಿಸ್ಟ್ರಾರ್ ಜನರಲ್(ಮಹಾ ನೋಂದಣಾಧಿಕಾರಿ) ರವರಿಗೆ ಜಾತಿ ಮತ್ತು ಧಾರ್ಮಿಕ ಹಿನ್ನೆಲೆಗಳ ಗಣತಿಯನ್ನು ನಡೆಸುವ ಕೆಲಸವನ್ನು ಒಪ್ಪಿಸಿದ್ದರೆ, ಗ್ರಾಮೀಣಾಭಿವೃದ್ಧಿ ಹಾಗೂ ವಸತಿ ಮತ್ತು ನಗರಪ್ರದೇಶ ಬಡತನ ನಿವಾರಣೆ ಇಲಾಖೆಗಳು 'ಬಡತನದ ರೇಖೆಯ ಕೆಳಗಿನ'(ಬಿಪಿಎಲ್) ಜನಗಣನೆಯನ್ನು ಮಾಡಲಿವೆ.

ಗ್ರಾಮೀಣ ಪ್ರದೇಶಗಳಲ್ಲಿ ಈ ಹಿಂದೆ ಬಿಪಿಎಲ್ ಜನಗಣತಿ ನಡೆದದ್ದು 2002ರಲ್ಲಿ. ಈ ಬಾರಿಯ ಬಿಪಿಎಲ್ ಜನಗಣತಿಯಲ್ಲಿ ನಗರಪ್ರದೇಶಗಳೂ ಸೇರಿರುತ್ತವೆ. ನಗರಗಳಲ್ಲಿ ಬಿಪಿಎಲ್ ಕುಟುಂಬಗಳನ್ನು ಒಂದು 'ಒಳಗೊಳ್ಳುವ ಮಾನದಂಡ'ದ ಮೂಲಕ ಗುರುತಿಸಲಾಗುವುದಂತೆ. ಈ ಮಾನದಂಡ ವಸತಿ ಸ್ಥಳ, ಸಾಮಾಜಿಕ 'ಭೇದ್ಯತೆ'(ಅನಕ್ಷರತೆ, ದೀರ್ಘಕಾಲದ ವಿಕಲತೆ, ಮಹಿಳೆ ಮುಖ್ಯಸ್ಥೆಯಾಗಿರುವ ಕುಟುಂಬ ಇತ್ಯಾದಿ) ಮತ್ತು ವೃತ್ತಿ 'ಭೇದ್ಯತೆ'(ಅಸಂಘಟಿತ, ಅನೌಪಚಾರಿಕ, ಅತಿ ಕಡಿಮೆ ಪ್ರತಿಫಲದ ಉದ್ಯೋಗಗಳು ಇತ್ಯಾದಿ) ಈ ಮೂರು ಅಂಶಗಳನ್ನು ಆಧರಿಸಿರುತ್ತದಂತೆ.

ಗ್ರಾಮೀಣ ಪ್ರದೇಶಗಳಲ್ಲಿ ಇದಕ್ಕಿಂತ ಭಿನ್ನ ವಿಧಾನದಲ್ಲಿ ಬಿಪಿಎಲ್ ಕುಟುಂಬಗಳನ್ನು ಗುರುತಿಸಲಾಗುವುದು. ಇಲ್ಲಿ ಜನಸಂಖ್ಯೆಯನ್ನು ಮೂರು ವಿಧಗಳಾಗಿ ವಿಂಗಡಿಸಲಾಗುವುದು- ಉನ್ನತ ಶ್ರೀಮಂತ ಕುಟುಂಬಗಳನ್ನು (ಟೆಲಿಫೋನ್‌ಗಳು, ರೆಫ್ರಿಜರೇಟರುಗಳು, ವರ್ಷಕ್ಕೆ 50000ರೂ.ಗಳ ಸಾಲಾರ್ಹತೆ ಇರುವವರು ಇತ್ಯಾದಿಗಳನ್ನು) ಹೊರಗಿಡಲಾಗುವುದು. ಕೆಳತುದಿಯಲ್ಲಿ ಇರುವವರು(ಆದಿ ಬುಡಕಟ್ಟು ಗುಂಪುಗಳು, ನಿರ್ಗತಿಕರು, ಕೈಗಳಿಂದಲೇ ಸ್ವಚ್ಛಮಾಡುವ ಜಾಡಮಾಲಿಗಳು ಇತ್ಯಾದಿ) ತಂತಾನೇ ಇದರಲ್ಲಿ ಸೇರುತ್ತಾರೆ. ಈ ಎರಡು ವಿಧಗಳ ನಡುವೆ ಇರುವವರು ಬಿಪಿಎಲ್ ಸ್ಥಾನಮಾನ ಪಡೆಯಬೇಕಾದರೆ ಏಳು 'ಅಭಾವ ಸೂಚಕಗಳ'ನ್ನು ಹೊಂದಿರಬೇಕು. ಈ ಏಳು ಸೂಚಕಗಳ ಬಗ್ಗೆ ಸಾಕಷ್ಟು ಗೊಂದಲಗಳಿವೆ.

ವರದಿಗಳ ಪ್ರಕಾರ, ಕೇಂದ್ರ ಸಂಪುಟ ಮಂಜೂರು ಮಾಡಿದ ವಿಧಾನದಲ್ಲಿ ಐದು ದುಡಿಯುವ ಸದಸ್ಯರಿರುವ ಒಂದು ಕುಟುಂಬದ ವಾರ್ಷಿಕ ಆದಾಯ ರೂ.27,000ಕ್ಕಿಂತ ಹೆಚ್ಚಿದ್ದರೆ, ಅವರು ತಂತಾನೇ ಬಿಪಿಎಲ್ ಪಟ್ಟಿಗೆ ಸೇರುವುದಿಲ್ಲ. ತಲಾ ಮಾಸಿಕ ಆದಾಯ ರೂ.447ಕ್ಕಿಂತ ಹೆಚ್ಚಿದ್ದರೆ ಅದು ಒಬ್ಬ ವ್ಯಕ್ತಿ ಬಡವ ಅಲ್ಲ ಎಂದು ಪರಿಗಣಿಸಲು ಸಾಕು ಎಂಬ ಲೆಕ್ಕಾಚಾರವನ್ನು ಇದು ಆಧರಿಸಿದೆ. ಇದು, ಗ್ರಾಮೀಣ ಭಾರತದಲ್ಲಿ ಬಡತನದ ರೇಖೆಯ ಮೇಲೆ ಜೀವನ ನಡೆಸಲು ದಿನಕ್ಕೆ 15ರೂ. ಸಾಕಷ್ಟಾಗುತ್ತದೆ ಎಂಬ ಯೋಜನಾ ಆಯೋಗದ ಅಂದಾಜಿನೊಂದಿಗೆ ಹೊಂದಿಕೊಳ್ಳುತ್ತದೆ !

ಅದೇ ಅಣಕ-ಅದೇ ಮೋಸ

ಹೀಗೆ, ಕೇಂದ್ರ ಸಂಪುಟ ಬಿಪಿಎಲ್ ಜನಸಂಖ್ಯೆಯನ್ನು ಅಂದಾಜು ಮಾಡಲು ರೂಪಿಸಿರುವ ವಿವರವಾದ ವಿಧಾನ ಯೋಜನಾ ಆಯೋಗ ಮುಂದಿಟ್ಟಿರುವ ಅಣಕವನ್ನು ಮತ್ತು ಮೋಸವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದಷ್ಟೇ. ಕೇಂದ್ರ ಸರಕಾರ ಬಿಪಿಎಲ್ ಜನಗಣತಿಯನ್ನು ಪ್ರಕಟಿಸುತ್ತ, ಯಾವುದೇ ರಾಜ್ಯ ಸರಕಾರ ಈ ಗಣತಿಯ ಅಂಕಿ-ಅಂಶಗಳಿಗೆ ಸವಾಲು ಹಾಕುವುದಾದರೆ, ಅದನ್ನು ಯೋಜನಾ ಆಯೋಗದೊಂದಿಗೆ ಇತ್ಯರ್ಥ ಮಾಡಿಕೊಳ್ಳಬೇಕು ಎಂದು ಕೂಡ ಸ್ಪಷ್ಟಪಡಿಸಿದೆ. ಈ ಅಂಕಿ-ಅಂಶಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಕೇಂದ್ರದಿಂದ ಆಹಾರಧಾನ್ಯಗಳ ನೀಡಿಕೆಯಲ್ಲಿ, ಮತ್ತು ಆದರಿಂದಾಗಿ, ಪ್ರಸ್ತಾವಿತ ಆಹಾರ ಭದ್ರತಾ ಕಾನೂನಿನ ಅಡಿಯಲ್ಲಿ ಆಹಾರಧಾನ್ಯಗಳ ನೀಡಿಕೆಯಲ್ಲಿಯೂ ನಿರ್ಣಾಯಕವಾಗುವಂತವುಗಳು. ಈ ವಿಷಯದಲ್ಲಿ ಈಗಾಗಲೇ ರಾಜ್ಯಸರಕಾರಗಳು ಹೊಂದಿರುವ ದೂರುಗಳು ಮತ್ತು ಅಳಲುಗಳು ಮುಂದುವರೆಯುತ್ತವಷ್ಟೇ ಅಲ್ಲ, ಅವು ಇನ್ನಷ್ಟು ಜಟಿಲಗೊಳ್ಳುವ ಸಾಧ್ಯತೆಗಳಿವೆ.

ನಮ್ಮ ದೇಶದಲ್ಲಿ ಯಾವುದೇ ಅರ್ಥಪೂರ್ಣ ಆಹಾರ ಭದ್ರತೆ, ದೇಶದ ಪ್ರತಿಯೊಂದು ಕುಟುಂಬ(ಬಿಪಿಎಲ್ ಮತ್ತು ಎಪಿಎಲ್ ಎರಡೂ) ತಿಂಗಳಿಗೆ 35 ಕೆ.ಜಿ. ಆಹಾರಧಾನ್ಯಗಳನ್ನು 2ರೂ.ದರದಲ್ಲಿ ಪಡೆಯಲು ಸಾಧ್ಯವಾಗುವಂತಹ ಒಂದು ಸಾರ್ವತ್ರಿಕ ವಿತರಣಾ ವ್ಯವಸ್ಥೆಯ ಮೂಲಕ ಮಾತ್ರವೇ ಸಾಧ್ಯ. ಜನತೆಯನ್ನು ವಂಚಿಸುವ ಉದ್ದೇಶವುಳ್ಳ ಮೇಲೆ ಹೇಳಿದಂತಹ ವಿವರವಾದ ಕಸರತ್ತುಗಳನ್ನು ನಡೆಸುವ ಬದಲು, ಯುಪಿಎ-2 ಸರಕಾರ ಇಂತಹ ಒಂದು ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ತರುವುದು ಒಳ್ಳೆಯದು. ಇದಕ್ಕೆ ಅಗತ್ಯವಾದ ಸಂಪನ್ಮೂಲಗಳು ಭಾರತದ ಬಳಿ ಇಲ್ಲ ಎನ್ನುವ ತರ್ಕವೂ ಕೂಡ ಅಷ್ಟೇ ಮೋಸದ್ದು. ಉಳಿದೆಲ್ಲ ಹಗರಣಗಳನ್ನು ಬಿಡಿ, ಕೇವಲ 2ಜಿ ಹಗರಣವೊಂದರಲ್ಲಿ ಲೂಟಿ ಮಾಡಿದ ಹಣವೇ ನಮ್ಮ ಜನತೆಗೆ ಒಂದು ಅರ್ಥಪೂರ್ಣ ಆಹಾರ ಭದ್ರತೆಯನ್ನು ಒದಗಿಸಲು ಬೇಕಾದಷ್ಟಾಗುತ್ತದೆ.

ಯುಪಿಎ ಸರಕಾರದ ಮೇಲೆ, ಜನರ ಸಾರ್ವಜನಿಕ ಪ್ರತಿಭಟನೆಗಳ ಮೂಲಕ, ಈ ಅಗಾಧ ಲೂಟಿಗಳಲ್ಲಿ ಇರುವ ಅಪಾರ ಮೊತ್ತಗಳನ್ನು ವಶಪಡಿಸಿಕೊಂಡು ಅವನ್ನು ನಮ್ಮ ಜನತೆಯ ಜೀವನದ ಗುಣಮಟ್ಟವನ್ನು ಉತ್ತಮ ಪಡಿಸಲು ಬಳಸುವಂತೆ ಬಲವಾದ ಒತ್ತಡಗಳನ್ನು ಹೆಚ್ಚಿಸಬೇಕಾಗಿದೆ. ○

('ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮೇ 2011 ಸಂಪಾದಕೀಯ ಆಧರಿಸಿ)

ಸಂಪಾದಕೀಯ

ಸಂವಿಧಾನ ಪಾಲಿಸಲು ನಿರಾಕರಣೆ


ಕರ್ನಾಟಕದಲ್ಲಿ ಸುಪ್ರೀಂಕೋರ್ಟ್ ತೀರ್ಪನ್ನನುಸರಿಸಿ ಬಿಜೆಪಿ ಸರ್ಕಾರವನ್ನು ವಜಾಗೊಳಿಸುವ ಪ್ರಸ್ತಾಪನೆಯನ್ನು ಕೇಂದ್ರಸರ್ಕಾರ ಕೈಬಿಟ್ಟ ನಂತರ ರಾಜ್ಯ ಸರ್ಕಾರಕ್ಕೆ ಬರೆದಿರುವ 'ಸಲಹಾ ಪತ್ರ'ವು ಮಹತ್ವದ್ದಾಗಿದೆ. ಕೇಂದ್ರದ ಗೃಹ ಸಚಿವರು ಈ ಪತ್ರದಲ್ಲಿ ಈಗಾಗಲೇ ರಾಜ್ಯದಲ್ಲಿ ಖ್ಯಾತಿ-ಕುಖ್ಯಾತಿ ಗೀಡಾಗಿರುವ ದಾಖಲೆಗಳಿರುವ ಮಿತಿಮೀರಿದ ಭ್ರಷ್ಟಾಚಾರ, ಅಕ್ರಮ ಗಣಿಗಾರಿಕೆ ಸಂಬಂಧ ಲೋಕಾಯುಕ್ತರ ವರದಿ ಅನುಷ್ಠಾನ ಏಕಿಲ್ಲ. ಬಹುಮುಖ್ಯವಾಗಿ 16 ಶಾಸಕರ ಅರ್ಹತೆ ವಿಷಯದಲ್ಲಿ ಸುಪ್ರೀಂಕೋರ್ಟ್ ಸೂಚಿಸಿರುವ ನಿರ್ದೇಶನಗಳ ಪಾಲನೆ, ಮತ್ತು ರಾಜ್ಯದಲ್ಲಿ ಅಲ್ಪಸಂಖ್ಯಾತರ ಬದುಕು-ಹಕ್ಕುಗಳ ರಕ್ಷಣೆ ಸಂವಿಧಾನಾತ್ಮಕ ಚೌಕಟ್ಟಿನಲ್ಲಿ ಆಡಳಿತ ನಡೆಸಬೇಕೆಂಬ ಸ್ಪಷ್ಟ ಅಂಶಗಳನ್ನು ನೀಡಿರುವುದು ರಾಜ್ಯ ಸರ್ಕಾರಕ್ಕೆ ಬಿಸಿ ಮುಟ್ಟಿಸುವಂತಹದ್ದು. ಈ ಬಗೆಗಿನ ಮುಖ್ಯಮಂತ್ರಿಗಳ ಆಕ್ರೋಶ-ವಿರೋಧ ಅರ್ಥಹೀನ ಮಾತ್ರವಲ್ಲ ದುರುದ್ದೇಶದ್ದು. ಸಂವಿಧಾನದ 356(1)ನೇ ಕಲಮ್‌ನ್ನು ದುರ್ಬಳಕೆ ಮಾಡಬಾರದು ಎನ್ನುವಾಗಲೇ ಯಾವುದೇ ರಾಜ್ಯ ಸರ್ಕಾರಗಳು ಭಾರತದ ಸಂವಿಧಾನದಡಿ ಕಾರ್ಯ ನಿರ್ವಹಿಸಬೇಕಾದ ಜವಾಬ್ದಾರಿಯನ್ನು ಹೊಂದಿವೆ. ಇಂತಹ ರಾಜ್ಯ ಸರ್ಕಾರಗಳು ಸಂವಿಧಾನಾತ್ಮಕವಾಗಿ ಕೆಲಸ ನಿರ್ವಹಿಸುತ್ತಿವೆಯೇ, ನಿರ್ದೇಶನ ಪಾಲಿಸುತ್ತಿವೆಯೇ ಎಂದು ಪರಿಶೀಲಿಸುವುದು ಕೇಂದ್ರದ ವ್ಯಾಪ್ತಿಯಲ್ಲೇ ಇದೆ. ಅದನ್ನು ಗಮನಿಸುವುದು ಅದರ ಕರ್ತವ್ಯವೂ ಕೂಡ. ಕೇಂದ್ರದಲ್ಲಾಗಲೀ-ರಾಜ್ಯದಲ್ಲಾಗಲೀ ಯಾವುದೇ ಪಕ್ಷವು ಅಧಿಕಾರದಲ್ಲಿದ್ದರೂ ಇದರಲ್ಲಿ ವ್ಯತ್ಯಾಸ ಆಗಬೇಕಿಲ್ಲ. ಅದು ಪಾಲಿಸಬೇಕೆಂಬುದು ಸಂವಿಧಾನ ಬದ್ಧವಾದುದು.

ಆದ್ದರಿಂದ ಬೀದಿಯಲ್ಲಿ ನಿಂತು ಆಕ್ರೋಶ-ಅಸಹನೆ ವ್ಯಕ್ತಪಡಿಸುವುದರ ಬದಲು ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಬಿಜೆಪಿ ನಾಯಕರು ಆತ್ಮಾವಲೋಕನ ಮಾಡಿಕೊಂಡು ತಪ್ಪು ತಿದ್ದಿಕೊಂಡು ಹೋಗಬೇಕಿತ್ತು. ಆದರೆ ಸಂವಿಧಾನ, ಕಾನೂನುಬದ್ಧ ಆಡಳಿತವನ್ನೇ ಧಿಕ್ಕರಿಸಿ ಅಧಿಕಾರ ಉಳಿಸಿಕೊಳ್ಳಲು ಅನೈತಿಕ, ಅಕ್ರಮಗಳನ್ನು ನಡೆಸುತ್ತಿರುವ ರಾಜ್ಯದ ಬಿಜೆಪಿ ಸರ್ಕಾರದ ವರ್ತನೆ ಭಂಡತನದ್ದಾಗಿದೆ.

ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು, ವಿಶೇಷವಾಗಿ ಅಧಿಕಾರಕ್ಕೆ ಬಂದ ನಂತರ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ವಿರುದ್ಧವಾಗಿ ಸಂಘ ಪರಿವಾರ ನಡೆಸಿದ ಎಲ್ಲಾ ದಾಳಿಗಳನ್ನು ಸರ್ಕಾರ ಸಮರ್ಥಿಸಿತು. ದಾಳಿಗಾರರನ್ನು ಅವರನ್ನು ಕಾನೂನು ಪ್ರಕಾರ ದಂಡಿಸದೇ ಸಂರಕ್ಷಿಸಿತು. ಮಂಗಳೂರಿನಲ್ಲಿ ಹಾಗೂ ರಾಜ್ಯದ ಹಲವೆಡೆಗಳಲ್ಲಿ ಭಜರಂಗದಳ, ವಿಶ್ವಹಿಂದೂ ಪರಿಷತ್‌ಗಳಿಂದ ಚರ್ಚ್‌ಗಳ ಮೇಲೆ ನಡೆದ ದಾಳಿಗಳು, ಮೈಸೂರು,ದಾವಣಗೆರೆ, ಕೊಡಗು ಇತರೆಡೆಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ಕೋಮುಗಲಭೆಗಳು, ಬಾಬಾಬುಡನ್‌ಗಿರಿ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳ ಉಲ್ಲಂಘನೆ, ನಿಚ್ಚಳ ಕೆಲ ನಿದರ್ಶನಗಳು. ಮಾತ್ರವಲ್ಲ, ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ನಿರಂತರವಾಗಿ ತಾರತಮ್ಯ, ಅವರ ಭಾಷೆ, ಸಂಸ್ಕೃತಿ ಮೇಲೆ ಆಕ್ರಮಣಗಳನ್ನು ಕೂಡ ಇವೆ. ಭಾರತದ ಸಂವಿಧಾನದಲ್ಲಿ ಸೆಕ್ಯುಲರಿಸಂ ಮೂಲಭೂತ ತತ್ವವಾಗಿದ್ದು, (ಧರ್ಮ ನಿರಪೇಕ್ಷತೆ) ಈ ಆಧಾರದಲ್ಲಿದ್ದು ಇದರ ಉಲ್ಲಂಘನೆಯನ್ನು ಬಿಜೆಪಿ ಸರ್ಕಾರ ಮಾಡಿದೆ. ಹೀಗೆ ಸಂವಿಧಾನದ ಮೂಲಭೂತ ತತ್ವಗಳನ್ನೇ ಬಿಜೆಪಿ ಸರ್ಕಾರ ಉಲ್ಲಂಘಿಸುತ್ತಲೇ ಬಂದಿದೆ. ಅದೇ ರೀತಿ ಭೂ ಹಾಗೂ ಗಣಿ ಅಕ್ರಮಗಳನ್ನು ದಾಖಲೆ ಸಮೇತ ಹೊರಗಿಟ್ಟ ಲೋಕಾಯುಕ್ತರ ಮೇಲೆ. ಸರ್ಕಾರಕ್ಕೆ ಎಚ್ಚರಿಸಿದ ರಾಜ್ಯಪಾಲರು, ಮಾನವ ಹಕ್ಕುಗಳ ಆಯೋಗದಂತಹ ಸಂವಿಧಾನಾತ್ಮಕ ಸಂಸ್ಥೆಗಳ ಮೇಲೆ ನಿರಂತರ ದಾಳಿ ನಡೆಸುತ್ತಾ ಬಂದಿದೆ. ಭ್ರಷ್ಟಾಚಾರವನ್ನು ಅಧಿಕೃತವಾಗಿ ಮಾನ್ಯ ಮಾಡಿದೆ. ಹೀಗೆ ಇಷ್ಟೊಂದು ಉಲ್ಲಂಘನೆ ನಡೆದಿರುವಾಗ ತಿದ್ದಿಕೊಳ್ಳುವ ಗೋಜಿಗೆ ಹೋಗದೇ ಅದನ್ನೇ ಸಮರ್ಥಿಸುವುದು ಸಂವಿಧಾನ ವಿರೋಧಿಯಾಗುತ್ತದೆ.

ಆದರೆ ಜನತೆಗೆ ಉತ್ತಮ ಆಡಳಿತ ನೀಡುವ ಬಧಲು ಬಿಜೆಪಿಗೆ ಅಧಿಕಾರ ದಾಹ ಇವನ್ನು ಬಿಡಲೊಪ್ಪದ ಬಿಜೆಪಿ ಅಧಿಕಾರದಲ್ಲಿ ಉಳಿಯಲು ಹಲವಾರು ಅಡ್ಡಹಾದಿಗಳನ್ನು ಹಿಡಿಯುತ್ತಿದೆ. ಜನತೆ ನೀಡಿದ್ದ ಅಧಿಕಾರವನ್ನೇ ದುರುಪಯೋಗ ಮಾಡುತ್ತಿದೆ. ಈಗಲೂ ರಾಜ್ಯದ ಸಂಪನ್ಮೂಲಗಳ ಲೂಟಿ, ಹಿಂದುತ್ವ ಅಜೆಂಡಾ ಜಾರಿ ಇವೇ ಪ್ರಧಾನವಾದ ವಿಷಯಗಳಾಗಿವೆ. ಕೇಂದ್ರದ ಈ ಸಲಹಾ ಪತ್ರವನ್ನು ಕೇವಲ ರಾಜಕೀಯ ದುರುದ್ದೇಶಕ್ಕೆ ಬಳಸಿ ಅನುಕಂಪದಿಂದ ಮತ್ತೆ ಅಧಿಕಾರಕ್ಕೆ ಬರುವ ಹುನ್ನಾರ ಬಿಜೆಪಿಯದ್ದು. ಆದ್ದರಿಂದ ಜನತೆ ಇದಕ್ಕೆ ಮರುಳಾಗಬಾರದು, ಸಹಿಸಬಾರದು. ಇಲ್ಲಿ ಯಡಿಯೂರಪ್ಪನವರ ಸರ್ಕಾರದ ಆಡಳಿತಕ್ಕೆ ಆಧಾರವಾಗಬೇಕಿರುವುದು ಭಾರತ ಸಂವಿಧಾನವೇ ಹೊರತು 'ಕೇಶವ ಶಿಲ್ಪ'ದ ಆದೇಶಗಳಲ್ಲ. ಸಂವಿಧಾನ ಬದ್ಧ ಆಡಳಿತ ನಡೆಸಲು ನಿರಾಕರಿಸಿದಲ್ಲಿ ಆ ಸರ್ಕಾರ ಅಧಿಕಾರದಲ್ಲಿ ಮುಂದುವರಿಯುವಂತಿಲ್ಲ. ○

ಸತ್ಯದ ಹತ್ಯೆಯ ನಡುವಿನ ಸಂಭ್ರಮ!



ಗೆಲುವಿನ ಗತ್ತಿನಲ್ಲಿ ಬಿಜೆಪಿ ಬೀಗುತ್ತಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರು ವಿಜಯದ ಕೇಕೆ ಹಾಕುತ್ತಿದ್ದಾರೆ. ಸಾರ್ವತ್ರಿಕ ಚುನಾವಣೆಯಲ್ಲಿ ಭಾರೀ ಬಹುಮತ ಪಡೆದಂತೆ ಬಿಜೆಪಿ ಪಕ್ಷದ ಸಂಭ್ರಮಾಚರಣೆ, ಅರಚಾಟಗಳೇ ವಿಚಿತ್ರ! ಇಲ್ಲಿ ಗೆದ್ದವರಾರು? ಸೋತವರಾರು? ಜನರಿಗೆ ತಿಳಿಯದಾಗಿದೆ.

ಹಾದಿ ತಪ್ಪಿಸಲು

ಸುಪ್ರೀಂಕೋರ್ಟ್‌ನಿಂದ ತೀವ್ರ ಟೀಕೆಗೆ ಒಳಗಾಗಿ, ಛೀಮಾರಿ ಹಾಕಿಸಿಕೊಂಡ ಸಭಾಧ್ಯಕ್ಷರಾದ ಬೋಪಯ್ಯ ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪನವರು ಪ್ರಜಾಪ್ರಭುತ್ವದ ಹತ್ಯೆಯ ಪಾತಕದಲ್ಲಿ ಪೂರ್ಣ ಹೊಣೆಗಾರರು ಎಂದು ನಿರ್ದಿಷ್ಟವಾಗಿ ಬೊಟ್ಟು ಮಾಡಿದ ನಂತರವೂ ಅಧಿಕಾರದ ಕುರ್ಚಿ ಬಿಡದೇ ಗಟ್ಟಿಯಾಗಿ ಹಿಡಿದು ಕುಳಿತದದ್ದೇ ಅನೈತಿಕ. ಇಂತಹವರ ಮೇಲೆ ಕ್ರಮ ಜರುಗಿಸಲು ಸಂವಿಧಾನಾತ್ಮಕ ವಿಧಿವಿಧಾನ ಪ್ರಸ್ತಾಪಿಸಿ ರಾಜ್ಯಪಾಲರು ಕೇಂದ್ರಕ್ಕೆ ಕಳುಹಿಸಿದ ಪತ್ರದ ಶಿಫಾರಸ್ಸುಗಳ ಬಗ್ಗೆ ವಾದ-ವಿವಾದಗಳು ಏನೇ ಇರಲಿ, ಅದರ ಬಗ್ಗೆ ಖಚಿತವಾದ, ತಕ್ಷಣದ ನಿರ್ಧಾರ ಕೈಗೊಳ್ಳುವಲ್ಲಿ ಕೇಂದ್ರ ಸರ್ಕಾರ ಮಾಡಿದ ವಿಳಂಬವನ್ನೇ ಬಿಜೆಪಿ ಭರಪೂರವಾಗಿ ಜನರನ್ನು ಹಾದಿ ತಪ್ಪಿಸಲು ಬಳಸಿಕೊಂಡಿದೆ. ರಾಜ್ಯದಾದ್ಯಂತ ಪ್ರತಿಭಟನೆಗಳು, 'ರಾಜ್ಯಪಾಲ ಹಟಾವೋ' ಚಳುವಳಿಗಳು, ರಾಜಕೀಯ ಸಮಾವೇಶಗಳು ಸಿಹಿ ಹಂಚಿಕೆಗಳು ಇತ್ಯಾದಿ.

ಸಂವಿಧಾನದ ಮೇಲೆ ದಾಳಿ

ಹಿಂದೊಮ್ಮೆ ಸರ್ಕಾರದ ಅಕ್ರಮಗಳ ಬಗ್ಗೆ ಮಾತನಾಡಿದ ರಾಜ್ಯಪಾಲರ ಮೇಲೆ ಬಿಜೆಪಿ ನಾಯಕರು ಎಗರಿ ಬಿದ್ದಾಗ 'ಕಳ್ಳನೇ ಪೋಲೀಸ್‌ನನ್ನು ದಬಾಯಿಸಿದಂತೆ' ಎಂದು ಹೇಳಿದ್ದು ವಿವಾದಕ್ಕೆ ಕಾರಣವಾಗಿತ್ತು. ಈಗಲೂ ಅದೇ. ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡುವಂತಹ ಅಕ್ರಮಗಳಲ್ಲಿ ತೊಡಗಿ, ಸರ್ವೋಚ್ಚ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡ ಸರ್ಕಾರ, ಆಡಳಿತ ಪಕ್ಷದ ನಾಯಕರು ಅಪರಾಧಿಗಳಾಗಿದ್ದರೂ, ಅವರು ಸಂವಿಧಾನ, ಕಾನೂನಾತ್ಮಕ ಆಡಳಿತದ ವಿರುದ್ಧವಾಗಿ ಧಾಳಿ ಎಸಗತೊಡಗಿದ್ದಾರೆ. ಹೀಗೆ ತಮ್ಮ ಕ್ರಮವನ್ನೇ ಸಮರ್ಥಿಸಿ ಕೊಳ್ಳುತ್ತಿರುವುದು ನ್ಯಾಯಾಲಯದ ಆದೇಶದ ವಿರುದ್ಧವೇ ಆಗಿದೆ. ಇಂತಹವರು ತಾವೇ ಸಂವಿಧಾನ ಪ್ರಜಾಪ್ರಭುತ್ವದ ರಕ್ಷಕರೆಂದೂ, ನ್ಯಾಯ, ನೀತಿಯುಳ್ಳ ನಾಯಕರೆಂದೂ ಬೊಬ್ಬೆ ಹೊಡೆಯುತ್ತಿರುವುದೇ ವಿಚಿತ್ರ, ವಿಪರ್ಯಾಸ.


ಫ್ಯಾಸಿಸ್ಟ್ ಆಕ್ರಮಣ

ಇಲ್ಲಿ ಸಂವಿಧಾನಾತ್ಮಕ ಅಂಶಗಳು, ಮುಖ್ಯವಾಗಿ ನ್ಯಾಯಾಲಯದ ತೀರ್ಪಿನ ಮುಖ್ಯ ಸತ್ವ-ವಿವರಗಳನ್ನು ಅತ್ಯಂತ ನಾಜೂಕಿನಿಂದ ಮೂಲೆಗೊತ್ತಲಾಗಿದೆ. ಒಂದೆಡೆ ಸತ್ಯ... ಮುಖಕ್ಕೆ ಹೊಡೆದಂತೆ ಬಿಜೆಪಿ ಅಪಪ್ರಚಾರದ ಅಬ್ಬರ. ಇದ... ಕೆಲಸವನ್ನು ಅತ್ಯಂತ ಶಿರಸಾವಹಿಸಿ, ಪವಿತ್ರ... ಕರ್ತವ್ಯವೆಂಬಂತೆ ಮಾಡಿದ್ದು ಟಿ.ವಿ. ಮತ್ತು ಪೇಪರ್‌ಗಳು... ನಿಜವನ್ನು ಜನರೆದುರು ತೆರೆದಿಡಬೇಕಾದ ಮಾಧ್ಯಮಗಳ... ಜನರನ್ನು ವಂಚಿಸುವಲ್ಲಿ, ಬಿಜೆಪಿ ರಾಜಕಾರಣವನ್ನೆ... ಸರಿಯೆಂದು ಬಿಂಬಿಸುವಲ್ಲಿ ಅವು ನಡೆಸಿದ ಪೈಪೋಟಿಯು... ಅಕ್ಷಮ್ಯ. ಇಂತಹ ಫ್ಯಾಸಿಸ್ಟ್ ಮನೋಭಾವ, ಏಕಪಕ್ಷೀಯ... ಓತಪ್ರೋತ ಧಾಳಿ ನಡೆಸುತ್ತಿರುವುದು ಅಪಾಯದ ಸೂಚನೆ... ಮಾಧ್ಯಮಗಳ ಬಲವೊಂದಿದ್ದರೆ ಎಂತಹವನ್ನು... ಯಾವುದನ್ನೂ ದಕ್ಕಿಸಿಕೊಂಡು ಜನರನ್ನು... ಯಾಮಾರಿಸಬಹುದೆಂದು ಬಹುತೇಕ ಚಾನೆಲ್‌ಗಳ... ಒಡೆತನವನ್ನು ಗಳಿಸಲು ಯತ್ನಿಸಲಾಗಿದೆ. ಇಲ್ಲವೆ... ಮಾಧ್ಯಮಗಳ ಆಯಕಟ್ಟಿನ, ಜಾಗಗಳ... ಬಿಜೆಪಿ-ಆರ್.ಎಸ್. ಎಸ್.ನ ಕಟ್ಟಾಳುಗಳನ್ನು... ಕೂಡಿಸಲಾಗಿದೆ. 'ಧರ್ಮ ಸಂಸ್ಕೃತಿ'ಗಳ(?)... ಮಹಾ ಸಂಗಮವಾಗಿರುವ ಕೇಶವ ಶಿಲ್ಪವೆ... ಎಲ್ಲವನ್ನೂ ನಿರ್ದೇಶಿಸುತ್ತದೆ.

ಉತ್ತರವೆಲ್ಲಿ?

ಇದೀಗ 'ಆಪರೇಷನ್ ಕಮಲವನ್ನು... ನಿಲ್ಲಿಸಲಾಗುವುದು ಎಂದು ಮುಖ್ಯಮಂತ್ರಿಗಳೇನೊ... ಹೇಳಿದ್ದಾರೆ. ಇಂತಹ ಕ್ರಮಗಳ ವಿರುದ್ಧ ಕಾನೂನುಬ... ಆಡಳಿತ ನಡೆಸಬೇಕೆಂದು ಕೇಂದ್ರ ಸರ್ಕಾರ ಬರೆದ ಪತ್ರ... ಅಂಶಗಳನ್ನು ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ. ಈ ಮೂಲ... ಅವರು ತಮ್ಮ ಚಾಳಿಯನ್ನು ಬಿಡುವುದಿಲ್ಲ ಎಂದ... ಹೇಳಿದಂತಾಗಿದೆ. 'ಕೇಂದ್ರವೂ ತಾನೇನು ಸಾಚಾನೇ' ಎಂ... ಯಡಿಯೂರಪ್ಪನವರ ಪ್ರಶ್ನೆಗೆ ಕೇಂದ್ರ ಉತ್ತರಿಸುವ ಸ್ಥಿತಿಯ... ಇಲ್ಲ. ಈ ಶೈಲಿಯ ಪ್ರಶ್ನೆ ಮಾಡುವುದು ಅವರಿ... ಹೊಸದೇನಲ್ಲ. ಗಡುಸಾಗಿ, ನಿಷ್ಠುರವಾಗಿ ಉತ್ತರಿಸು... ಸ್ಥಿತಿಯಲ್ಲಿ ಕೇಂದ್ರವೂ ಇಲ್ಲ. 'ನಾನೊಬ್ಬನೇ ಅಲ್ಲ, ನೀ... ಮಾಡುತ್ತೀರಿ' ಎಂದು ಧಮಕಿ ಹಾಕಿ ಸಮರ್ಥಿಸಿಕೊಳ್ಳು... ಮುಖ್ಯಮಂತ್ರಿಯ ಪರಿಪಾಠಕ್ಕೆ ಕೇಂದ್ರದ ಉತ್ತರವೇನು? ○

ಕಾರ್ಟೂನ್ ಕಾರ್ನರ್



ಕೃಪೆ: ಪ್ರಜಾವಾಣಿ

ಕೃಷಿ ಉತ್ಪಾದನೆ ಮತ್ತು ಸಂಶೋಧನೆ

ಚೀನಾ ಮತ್ತು ಭಾರತಗಳ ತುಲನೆ

ಎಲ್ಲಕ್ಕಿಂತ ಮುಖ್ಯವಾಗಿ ಭಾರತ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಆರಿಸಿಕೊಂಡರೆ ಚೀಣಾ ಸಮಾಜವಾದಿ ದಾರಿಯನ್ನು ಹಿಡಿದಿದೆ. ಈ ಎರಡು ಆರ್ಥಿಕ ವ್ಯವಸ್ಥೆಗಳು ನೀಡಿರುವ ಬೆಳವಣಿಗೆಗಳು ಇವು ಎಂಬುದನ್ನು ನಾವು ಮರೆಯಲಾಗದು.


ಜಿ.ಎಸ್.ಮಣಿ

ಚೀನಾ ಜಗತ್ತಿನ ಎರಡನೆ ಅತಿ ದೊಡ್ಡ ಆರ್ಥಿಕವಾಗಿ ಹೊರಹೊಮ್ಮಿದೆ. ಅದೇ ರೀತಿ ಅದು ಜಗತ್ತಿನ ಅತಿ ದೊಡ್ಡ ಉತ್ಪಾದನಾ ಆರ್ಥಿಕ ವಾಗಿಯೂ ಬೆಳೆದಿದೆ.

ಭಾರತವನ್ನು ಚೀನಾದೊಂದಿಗೆ ಹೋಲಿಸಿಕೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ. ಮುಂಬಯಿ ಭಾರತದ ಶಾಂಘಾಯಿಯಾಗುವ ಕನಸು ಕಂಡರೆ ದೆಹಲಿ ಚೀನಾ ಒಲಂಪಿಕ್ಸ್ ಆಟಗಳಿಂದ ಪಡೆದ ಲಾಭವನ್ನು ತಾನು ಕಾಮನ್ವೆಲ್ತ್ ಆಟಗಳಿಂದ ಪಡೆಯಬೇಕೆಂದು ಹೊರಟು ಏನಾಯಿತೆಂಬುದನ್ನು ಯಾರೂ ನೆನಪಿಸಿಕೊಳ್ಳುತ್ತಿಲ್ಲವಾದರೂ ಏನಾಯಿತೆಂದು ನಮಗೆಲ್ಲ ಗೊತ್ತಿದೆ. ಆದರೆ ಸಮಾಜವಾದಿ ಚೀನಾದ ಸಾಧನೆಗಳಿಗೆ ಭಾರತದ ಸಾಧನೆಗಳನ್ನು ಹೋಲಿಸಿಕೊಳ್ಳುವುದು ಭಾರತ ಮುಂದೊಂದು ದಿನ ಚೀನಾವನ್ನೂ ಹಿಂದಕ್ಕೆ ಹಾಕುತ್ತದೆಂಬ ಬೊಬ್ಬೆ ಹಾಕುವುದು ಅತಿಯೆನಿಸದೆ ಇರದು. ಇಂತಹ ಹೋಲಿಕೆಗಳನ್ನು ಮಾಡಹೊರಡುವವರು ವಾಸ್ತವವನ್ನು ಗಮನಿಸುವ ಶ್ರಮ ಪಡಬೇಕು. ಭಾರತಕ್ಕೆ ಸ್ವಾತಂತ್ರ್ಯ ಬಂದ ಸರಿಸುಮಾರಿಗೇ ಚೀನಾದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಯಾಯಿತೆಂಬುದನ್ನು ಗಮನದಲ್ಲಿಟ್ಟುಕೊಂಡರೆ ಇಂತಹ ಹೋಲಿಕೆಯ ಉಚಿತತೆಯ ಅರಿವು ಆಗುತ್ತದೆ.

ಇಪ್ಪತ್ತೈದು ವರ್ಷಗಳ ಹಿಂದೆ ಭಾರತದ ಮಟ್ಟದಲ್ಲೆ ಇದ್ದ ಚೀನಾ ಇಂದು ನಮಗಿಂತ ಎಷ್ಟೊಂದು ಮುಂದೆ ಹೊಗಿದೆ ಎಂಬುದನ್ನು ನೋಡಿದರೆ ಆಶ್ಚರ್ಯವಾಗದೆ ಇರದು. ಚೀನಾದ ಅಭಿವೃದ್ಧಿ ಬರೀ ನಗರ ಪಟ್ಟಣಗಳಿಗೆ ಸೀಮಿತವಲ್ಲ. ಅಥವಾ ಬರೀ ಔದ್ಯೋಗಿಕ ಕ್ಷೇತ್ರದಲ್ಲಿ ಮಾತ್ರವಲ್ಲ. ಸರ್ವಾಂಗೀಣ ಅಭಿವೃದ್ಧಿಯನ್ನು ಅದು ಸಾಧಿಸಿದೆ.

ಕೃಷಿಯಲ್ಲಿ ಭಾರತ ಮತ್ತು ಚೀನಾಗಳ ಸಾಧನೆ



ಎರಡೂ ದೇಶಗಳಲ್ಲಿ ಅಪಾರ ಜನಸಂಖ್ಯೆ ಹೊಂದಿದೆ. ಕೃಷಿ ಅವಲಂಬಿತ ಜನಸಂಖ್ಯೆಯೂ ಐವತ್ತು ಕೋಟಿಗಿಂತ ಹೆಚ್ಚು. ಎರಡೂ ದೇಶಗಳು ಬರಗಾಲದಂತಹ ಸಮಸ್ಯೆಗಳನ್ನು ಕಂಡುಂಡಿವೆ. ಆಹಾರ ಭದ್ರತೆಯ ತೀವ್ರ ಚಿಂತೆಯನ್ನೂ ಅನುಭವಿಸಿವೆ. ಚೀನಾದ ಕೃಷಿ ಕಳೆದ ಹದಿನೈದು ವರ್ಷ ಗಳಲ್ಲಿ ಶೇ 4 ರಿಂದ ಶೇ.5 ರ ದರದಲ್ಲಿ ಬೆಳೆದರೆ ಭಾರತದ್ದು ಶೇ.2.5 ಅನ್ನು ದಾಟಿಲ್ಲ. 2009-10 ರಲ್ಲಿ ಶೇ. 1ಕ್ಕೂ ಕಡಿಮೆ ಬೆಳವಣಿಗೆ ದರ!! 2005 ರ ವೇಳೆಗೆ ಚೀನಾ ಜಗತ್ತಿನ ಮೂರನೇ ಅತಿ ದೊಡ್ಡ ಆಹಾರ ದಾನಿ ದೇಶವಾಗಿ ಬೆಳೆದಿದೆ.



ಭಾರತ ಮತ್ತು ಚೀನಾದ ನಡುವಿನ ಇಂತಹ ಕಂದಕಕ್ಕೆ ಕಾರಣ ಕೃಷಿ ಉತ್ಪಾದಕತೆ. ಭಾರತಕ್ಕಿರುವ ಅನುಕೂಲಗಳನ್ನು ನೋಡಿ: ಭಾರತದ ಬಿತ್ತನೆ ಭೂಮಿ 160 ದಶಲಕ್ಷ ಹೆಕ್ಟೆರುಗಳಾದರೆ ಚೀನಾದ್ದು 130 ದಶಲಕ್ಷ ಹೆಕ್ಟೆರುಗಳು. ಇದರಲ್ಲಿ ನೀರಾವರಿ ಇರುವ ಭೂಮಿ ನಮ್ಮದು 55.8 ದಶಲಕ್ಷ ಹೆಕ್ಟೆರುಗಳಾದರೆ ಅವರದ್ದು 54.5 ದಶಲಕ್ಷ ಹೆಕ್ಟೆರುಗಳು. ಸರಾಸರಿ ಭೂ ಹಿಡುವಳಿ ನಮ್ಮಲ್ಲಿ 1.4 ಹೆಕ್ಟೆರುಗಳಾದರೆ ಅವರಲ್ಲಿ 0.4 ಹೆಕ್ಟೆರುಗಳು.

ಚೀನಾದಲ್ಲಿ ಬತ್ತದ ಉತ್ಪಾದನೆಯ ಬೆಳವಣಿಗೆ ದರ ಶೇ 2.1 ರಷ್ಟಿದ್ದರೆ ಭಾರತದಲ್ಲಿ ಅದು ಬರೀ ಶೇ.1 ರಷ್ಟು!! (2004 ರಲ್ಲಿ) ಭಾರತ 42 ದಶಲಕ್ಷ ಹೆಕ್ಟೇರುಗಳಲ್ಲಿ 124 ದಶಲಕ್ಷ ಟನ್ನುಗಳಷ್ಟು ಬತ್ತ ಬೆಳೆದರೆ ಚೀನಾ ಬರೀ 28 ದಶಲಕ್ಷ ಹೆಕ್ಟೇರುಗಳಲ್ಲಿ 186 ದಶಲಕ್ಷ ಟನ್ನುಗಳಷ್ಟು ಬತ್ತ ಬೆಳೆದಿದೆ. ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಕಾರ ಭಾರತದಲ್ಲಿ ಬತ್ತದ ಉತ್ಪಾದಕತೆ ಹೆಕ್ಟೇರಿಗೆ 3034 ಕಿಲೋಗ್ರಾಮುಗಳಾದರೆ ಚೀನಾದಲ್ಲಿ ಅದು ಹೆಕ್ಟೇರಿಗೆ 6233 ಕಿಲೋಗ್ರಾಮುಗಳು!! ಭಾರತದಲ್ಲಿ ಗೋಧಿಯ ಉತ್ಪಾದಕತೆ ಹೆಕ್ಟೇರಿಗೆ 2688 ಕಿಲೋಗ್ರಾಮುಗಳಾದರೆ ಚೀನಾದಲ್ಲಿ ಅದು ಹೆಕ್ಟೇರಿಗೆ 4155 ಕಿಲೋಗ್ರಾಮುಗಳು. ಭಾರತದಲ್ಲಿ ಸಾಸಿವೆಯ ಉತ್ಪಾದಕತೆ ಹೆಕ್ಟೇರಿಗೆ 909ಕಿಲೋಗ್ರಾಮುಗಳಾದರೆ ಚೀನಾದಲ್ಲಿ ಅದು ಹೆಕ್ಟೇರಿಗೆ 1778 ಕಿಲೋಗ್ರಾಮುಗಳು. ತೋಟಗಾರಿಕಾ ಬೆಳೆಗಳ ವಿಷಯದಲ್ಲಿ ಈ ವ್ಯತ್ಯಾಸ ಇನ್ನೂ ಅಗಾಧವಾಗಿ ಎದ್ದು ಕಾಣುತ್ತದೆ. 1980 ರ ಸಮಯದಲ್ಲಿ ಭಾರತದ ಉತ್ಪಾದನೆ 55 ದಶಲಕ್ಷ ಟನ್ನುಗಳಷ್ಟಿದ್ದರೆ ಚೀನಾದ್ದು 60 ದಶಲಕ್ಷ ಟನ್ನುಗಳಷ್ಟಿತ್ತು. 2003 ರ ವೇಳೆಗೆ ಭಾರತದ ಉತ್ಪಾದನೆ 135 ದಶಲಕ್ಷ ಟನ್ನುಗಳಿಗೇರಿದರೆ ಚೀನಾದ್ದು 450 ದಶಲಕ್ಷ ಟನ್ನುಗಳಿಗೇರಿತ್ತು!

ಭಾರತ ಮತ್ತು ಚೀನಾದ ನಡುವೆ ಇಂತಹ ಅಗಾಧ ವ್ಯತ್ಯಾಸಕ್ಕೆ ಕಾರಣಗಳೇನು? ಚೀನಾದ ಕೃಷಿ ನೀತಿ ಕೇಂದ್ರದ ನಿರ್ದೇಶಕರಾದ ಪ್ರೊಫೆಸರ್ ಹುವಾಂಗ್ ಜಿಕುನ್ ಅವರ ಪ್ರಕಾರ ಇದಕ್ಕೆ ಮೂರು ಕಾರಣಗಳಿವೆ: ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳಿಂದ ಸಾಧ್ಯವಾಗಿರುವ ತಾಂತ್ರಿಕ ಮುನ್ನಡೆ, ಗ್ರಾಮೀಣ ಅಂತರ್ರಚನಾ ಸೌಕರ್ಯಗಳಲ್ಲಿ ಹೂಡಿಕೆ ಮತ್ತು ಕೃಷಿಗೆ ಅಗತ್ಯ ಆದ್ಯತೆ ಕೃಷಿ ನೀತಿ. ಚೀನಾದ ಕೇಂದ್ರ ಸರ್ಕಾರ 2006 ರಲ್ಲಿ 12 ಶತಕೋಟಿ ರೆನ್ಮಿಮಿನ್ಸ್‌ನಷ್ಟು ಹೂಡಿಕೆಯನ್ನು ಕ್ರಷಿಯಲ್ಲಿ ಮಾಡಿದೆ. ಸಾವಿರಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳಿದ್ದು ಸಸ್ಯ ತಳಿ ಅಭಿವೃದ್ಧಿಯಂತಹ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಿವೆ. ದೇಶದ ಹತ್ತಿ ಬೆಳೆವ ಪ್ರದೇಶದ ಮೂರನೇ ಎರಡರಷ್ಟು ಭಾಗದಲ್ಲಿ ಬಿಟಿ ಹತ್ತಿಯನ್ನು ಬೆಳೆಯಲಾಗುತ್ತಿದೆ.

ಗಣೇಶನ್ ಅವರ ಪ್ರಕಾರ ನಮ್ಮಲ್ಲಿ ಕ್ಷಮಿಸಲಾರದ ತಪ್ಪುಗಳೂ ಆಗುತ್ತವೆ. ಉದಾಹರಣೆಗೆ 2006 ಪ್ರಕಟಿತವಾದ "ತೋಟಗಾರಿಕೆ ಕೈಪಿಡಿ" ಯಲ್ಲಿ ಎಂಡ್ರಿನ್ ಎಂಬ ಕೀಟನಾಶಕ ಬಳಸುವಂತೆ ಹೇಳಲಾಗಿದೆ. ಭಾರತ ಈ ರಸಾಯನಿಕವನ್ನು 20 ವರ್ಷಗಳ ಹಿಂದೆಯೇ ನಿಷೇಧಿಸಿದೆ!

ಎಲ್ಲಕ್ಕಿಂತ ಮುಖ್ಯವಾಗಿ ಭಾರತ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಆರಿಸಿಕೊಂಡರೆ ಚೀಣಾ ಸಮಾಜವಾದಿ ದಾರಿಯನ್ನು ಹಿಡಿದಿದೆ. ಈ ಎರಡು ಆರ್ಥಿಕ ವ್ಯವಸ್ಥೆಗಳು ನೀಡಿರುವ ಬೆಳವಣಿಗೆಗಳು ಇವು ಎಂಬುದನ್ನು ನಾವು ಮರೆಯಲಾಗದು.

ಭಾರತದಲ್ಲಿ ವರ್ಗ ವೈರುಧ್ಯಗಳು ಹಲವಿರುವುದರಿಂದ ಸಂಪನ್ಮೂಲಗಳ ಬಳಕೆಯಲ್ಲಿ ಏರುಪೇರುಗಳಿವೆ. ಉದಾಹರಣೆಗೆ ನಗರ ಮತ್ತು ಹಳ್ಳಿಗಳು, ಬಡ ರೈತ ಮತ್ತು ಜಮೀನುದಾರ, ಕಾರ್ಮಿಕ ಮತ್ತು ಉದ್ಯಮಪತಿಗಳ ನಡುವೆ ವೈರುಧ್ಯಗಳು ಇದ್ದೆ ಇವೆ. ತಂತ್ರಜ್ಞಾನ ಮತ್ತು ಇತರೆ ಸಂಪನ್ಮೂಲಗಳನ್ನು ಉತ್ಪಾದಕತೆಯನ್ನು ಹೆಚ್ಚಿಸುವ ಹುಮ್ಮಸ್ಸಿನಿಂದ ಚೀನಾದಲ್ಲಿ ಕೆಲಸ ಮಾಡಿದರೆ ನಮ್ಮಲ್ಲಿ ಬಹುತೇಕ ಕೆಲವೆ ಕೆಲವರು ಅಪಾರ ಲಾಭಗಳಿಸಲು ಬಳಸುತ್ತಾರೆ. ಸಾಲ/ ತಂತ್ರಜ್ಞಾನದಂತಹ ಸಂಪನ್ಮೂಲಗಳು ರೈತರಿಗೆ ಸುಲಭದಲ್ಲಿ ಲಭ್ಯವಾಗುವುದಿಲ್ಲ. ಏರುಪೇರುಗಳು ಕೆಲವೆ ಕೆಲವು ಶ್ರೀಮಂತರ ಪರವಾಗಿರುವಾಗ ಉಳಿದವರು ಅದರಲ್ಲಿ ಪೂರ್ತಿ ತೊಡಗಿಕೊಳ್ಳುವುದಿಲ್ಲ. ಇಂತಹ ಅಸಮಾನತೆಯ ಹಿನ್ನೆಲೆಯಲ್ಲಿ ಅಭಿವೃದ್ಧಿ ಪೂರ್ತಿ ಒಳಗೊಂಡ ಅಭಿವೃದ್ಧಿಯಾಗದೆ ಕೆಲವೆ ಕೆಲವರ ಗಂಟಾಗುತ್ತದೆ. ಅಸಮಾನತೆ ಮುಂದುವರೆಯುತ್ತದೆ. ಹೀಗೆ ಇಂತಹ ದೊಡ್ಡ ಕಂದರದ ಹಿಂದೆ ಎರಡು ಬೇರೆ ಬೇರೆ ವ್ಯವಸ್ಥೆಗಳೇ ಇವೆ. ○

ಇದು ನಿಮಗೆ ತಿಳಿದಿರಲಿ

ಮೋದಿ ರಾಜ್ಯದಲ್ಲಿ ಈ ಅಭಿವೃದ್ಧಿ..?

ನರೇಂದ್ರಮೋದಿಯವರ ಗುಜರಾತ್ ಈಗ ಭ್ರಷ್ಟಾಚಾರದ ಸ್ವರ್ಗ. ಸುಜಲಾಂ ನೀರಿನ ಹಗರಣ ರೂ.1700 ಕೋಟಿಗಳದ್ದು, ರೂ.109 ಕೋಟಿಗಳು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ, ರೂ. 600 ಕೋಟಿ ಮೀನುಗಾರಿಕೆ ಇಲಾಖೆಯಲ್ಲಿ... ಆದರೆ. ಅತೀ ಚಾಣಾಕ್ಷ ಮುಖ್ಯಮಂತ್ರಿ ಇವೆಲ್ಲಕ್ಕೂ ಬೆಂಕಿ ಇಟ್ಟು ಬೂದಿ ಮಾಡಿದ್ದಾನೆ!

ಏನೇ ಇರಲಿ, ಹೇಗೂ ಇರಲಿ, ಅಂತಾ ಲೋಕಾಯುಕ್ತರನ್ನು ನೇಮಕ ಮಾಡಿಯೇ ಇಲ್ಲ. ಆಹಾ! ಎಂತಹ ಮುಂದಾಲೋಚನೆ ಏನೀ ಸಂರಕ್ಷಣೆ?

ಕನ್ನಡ ವಾರಪತ್ರಿಕೆ

'ಹತ್ತಾರು ವರ್ಷ ನಾವು ಉತ್ತ ಭೂಮಿ ನಮ್ಮದೇ'

ಬಗರ್‌ಹುಕುಂ ಸಾಗುವಳಿದಾರರು ಮತ್ತು ಮೂಲ ದಾಖಲೆಗಳಿಲ್ಲದ ರೈತರ ಬೃಹತ್ ಸಮಾವೇಶ

ಬಗರ್ ಹುಕ್ಕುಂ ಸಾಗುವಳಿದಾರರ ಹೋರಾಟ ಸಮಿತಿ, ಮೂಲ ದಾಖಲಾತಿಗಳು ಇಲ್ಲದ ರೈತರ ಹೋರಾಟ ಸಮಿತಿ, ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ - ಈ ಸಂಘಟನೆಗಳು ಸೇರಿ ಜಂಟಿಯಾಗಿ ಬೆಂಗಳೂರು ನಗರದಲ್ಲಿ ಇದೇ ಮೇ 25 ರಂದು ಬುಧವಾರ ಸಮಾವೇಶವೊಂದನ್ನು ಸಂಘಟಿಸಿದ್ದವು. ಈ ಸಂಘಟನೆಗಳ ಹೆಸರೇ ಈ ಸಮಾವೇಶದ ಉದ್ದೇಶವನ್ನು ಹೇಳುತ್ತಿದೆ. ಸಮಾವೇಶ ಅಂಗೀಕರಿಸಿದ ಈ ನಿರ್ಣಯ, ಸಮ್ಮೇಳನದಲ್ಲಿ ರೈತ ಮುಖಂಡರು ಆಡಿತ ಮಾತುಗಳು ಇಲ್ಲಿವೆ.

ಬೆಂಗಳೂರು ಮತ್ತು ಸುತ್ತಮುತ್ತಲ ಈ ಪ್ರಮುಖ ಜಿಲ್ಲೆಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಬಡರೈತರನ್ನು ಬಡಿದು ಶ್ರೀಮಂತರು, ಬಂಡವಾಳಿಗರು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಬಾಯಿಗೆ ಆಹಾರವಾಗಿ ಹಾಕುವ ವ್ಯವಸ್ಥಿತ ಸಂಚು ನಡೆಸಿದ್ದು. ರಾಜ್ಯ ಬಿಜೆಪಿ ಸರ್ಕಾರ ಅದರ ಜಾರಿಗೆ ಮುಂದಾಗಿದೆ. ತಮ್ಮ ಬದುಕನ್ನೇ ನುಂಗಿ ಹಾಕುವ ಈ ದೌರ್ಜನ್ಯಕೋರ ನೀತಿಯ ವಿರುದ್ಧ ರೈತರ ಸೆಟೆದು ನಿಲ್ಲುತ್ತಿದ್ದಾರೆ. ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ.

ಮೇ 25. 2011ರಂದು ನಗರದ ಎನ್.ಜಿ.ಓ. ಹಾಲ್‌ನಲ್ಲಿ ಬೆಂಗಳೂರು ನಗರ. ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳ ಭಾದಿತ ನೂರಾರು ರೈತರು ಪಕ್ಷಾತೀತವಾಗಿ ಸಮಾವೇಶಗೊಂಡು ರೈತ ಸಮಸ್ಯೆಗಳ ಕುರಿತು ಚರ್ಚಿಸಿ ಈ ನಿರ್ಧಾರಕ್ಕೆ ಬರಲಾಗಿದೆ.

ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಡಿಸೆಂಬರ್ 2009 ಸರ್ಕಾರದ ಅಂಕೆ ಸಂಖ್ಯೆಗಳ ಪ್ರಕಾರ ಸರ್ಕಾರದ ಮುಂದೆ ವಿಲೇವಾರಿಯಾಗದೇ ಉಳಿದಿರುವ ಫಾರಂ ನಂ 50 ಮತ್ತು 53 ಅರ್ಜಿಗಳು ಒಟ್ಟು 37,395, ಇದರ ವಿಸ್ತರಣೆ 93,114.12 ಎಕರೆ. ಇದರ ಜೊತೆಗೆ ರಾಜಕೀಯ ಮತ್ತಿತರೆ ಕ್ಷುಲ್ಲಕ ಕಾರಣಗಳಿಂದ ಅನ್ಯಾಯವಾಗಿ ವಜಾವಾಗಿರುವ ಅರ್ಜಿಗಳು ಇದರ ಎರಡುಪಟ್ಟು. ಈಗ ಸದ್ಯ ಸರ್ಕಾರದ ಮುಂದೆ ವಿಲೇವಾರಿಯಾಗದಿರುವ ಅರ್ಜಿದಾರರು ಸುಮಾರು 30-40 ವರ್ಷಗಳಿಂದ ಈ ಭೂಮಿಯಲ್ಲಿ ಕೃಷಿಯನ್ನು ನಡೆಸಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಇವರಲ್ಲಿ ಸುಮಾರು ಜನಕ್ಕೆ ಈ ಬಗರ್ ಹುಕ್ಕುಂ ಸಾಗುವಳಿ ಬಿಟ್ಟರೆ ಬೇರೆ ಭೂಮಿಯೇ ಇಲ್ಲ. ಹೀಗೆ ಸಾಗುವಳಿ ಮಾಡುತ್ತಿರುವ ಈ ಕುಟುಂಬಗಳು. ಸರ್ಕಾರದ ಆದೇಶದಂತೆ ಫಾರಂ ನಂ 50 ಮತ್ತು 53ನ್ನು ಸುಮಾರು 20 ವರ್ಷಗಳ ಹಿಂದೇಯೇ ಹಾಕಿಕೊಂಡು ಸಕ್ರಮಕ್ಕಾಗಿ 'ಜಾತಕ ಪಕ್ಷಿ' ಗಳಂತೇ ಕಾಯುತ್ತಿದ್ದಾರೆ. ಇವರಲ್ಲಿ ಬಾರಿ ದೊಡ್ಡ ಸಂಖ್ಯೆಯಲ್ಲಿ ದಲಿತರು, ಹಿಂದುಳಿದ ಜಾತಿಗಳ ಬಡವರು ಇದ್ದಾರೆ. ಇವತ್ತಲ್ಲ ನಾಳೆ ಈ ಭೂಮಿ ತಮಗೆ ಸಿಗಬಹುದೆಂದು, ಕನಸು ಕಾಣುತ್ತಿದ್ದಾರೆ, ಇವರಿಗೆ 20-25 ವರ್ಷಗಳಾದರು ಈ ಭೂಮಿಗಳನ್ನು ಸಕ್ರಮ ಮಾಡಲಿಲ್ಲ.

ಈ ನಡುವೆ ಬೆಂಗಳೂರು ಮಹಾನಗರ ಬೆಳೆಯುತ್ತಾ ಹೋದಂತೆ, ಬೆಂಗಳೂರು ಅಭಿವೃದ್ಧಿಗೆ ಸರ್ಕಾರಿ ಭೂಮಿಗಳು ಸಿಗಬೇಕೆನ್ನುವ ನೆಪದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಗಡಿಯಿಂದ 18 ಕಿ.ಮೀ. ದೂರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು, ಆ ಗ್ರಾಮಗಳಲ್ಲಿನ ಬಗರ್ ಹುಕುಂ ಸಾಗುವಳಿದಾರರ ಭೂಮಿಗಳನ್ನು ಸಕ್ರಮ ಮಾಡುವುದಿಲ್ಲವೆಂದು ಈ ಹಿಂದೆ ತೀರ್ಮಾನಿಸಲಾಗಿತ್ತು. ಆ ಹೆಸರಿನಲ್ಲಿ ಸಾವಿರಾರು



ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳನ್ನು ತಿರಸ್ಕರಿಸಿ, ಉಳಿಸಿಕೊಂಡಿದ್ದ ಭೂಮಿಗಳನ್ನು ಸಾಮಾನ್ಯ ಜನರ ಅಭಿವೃದ್ಧಿಗೆ ಬದಲಾಗಿ ಬಂಡವಾಳಗಾರರ, ಶ್ರೀಮಂತರ ಲಾಭಕೋರತನಕ್ಕಾಗಿ ನೀಡಲಾಗಿತ್ತು.

ಈಗ ಮತ್ತೆ, 'ಬೆಂಗಳೂರು ಮಹಾನಗರ ಪಾಲಿಕೆ', 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ'(ಬಿಬಿಎಂಪಿ)ಯಾಗಿ ಪರಿವರ್ತನೆಗೊಂಡು, ಈ ಹೊಸ ಗಡಿಗಳಿಂದ ಮತ್ತೆ 18 ಅಥವಾ 25 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು, ಆ ಗ್ರಾಮ ಗಳಲ್ಲಿನ ಬಗರ್ ಹುಕುಂ ಸಾಗುವಳಿದಾರರ ಭೂಮಿಗಳನ್ನು ಸಕ್ರಮ ಮಾಡಬಾರದೆಂದು ತೀರ್ಮಾನಿಸಿದೆ, ಹಾಗೂ ಬಗರ್ ಹುಕುಂ ಸಾಗುವಳಿಯ ಸಕ್ರಮಕ್ಕಾಗಿ ಸಲ್ಲಿಸಿದ್ದ ಅರ್ಜಿಗಳನ್ನು ತಿರಸ್ಕರಿಸಲು ಶುರುಮಾಡಲಾಗಿದೆ. ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ 7252 ಅರ್ಜಿಗಳಿರುವ ಎಲ್ಲಾ ಗ್ರಾಮಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿಗೆ ಸೇರಿದ 175 ಗ್ರಾಮಗಳು ಹೀಗೆ ಹತ್ತಾರು ನೂರು ಗ್ರಾಮಗಳು, ಈ ಗ್ರಾಮಗಳ ಸುಮಾರು 25,000 ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳು ತಿರಸ್ಕಾರವಾಗಲಿವೆ. ಇದರಿಂದ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ

ಪುಟ 10 ಕ್ಕೆ

ಸಮಾವೇಶದ ಕರೆ

ಜುಲೈ 5, 2011

ಸಹಸ್ರಾರು ರೈತರ ಬೃಹತ್ ವಿಧಾನ ಸೌಧ ಚಲೋ

ಜುಲೈ 5. 2011 ಸಹಸ್ರಾರು ರೈತರ ಬೃಹತ್ ವಿಧಾನ ಸೌಧ ಚಲೋ, ಜೂನ್ 2011ರೊಳಗೆ ಎಲ್ಲಾ ತಾಲ್ಲೂಕಗಳಲ್ಲಿ ತಾಲ್ಲೂಕು ಮಟ್ಟದ ಸಮಾವೇಶಗಳು ಮತ್ತು ಹೋರಾಟ ಸಮಿತಿ ರಚನೆ. ಜುಲೈ 5 2011ಕ್ಕೆ ಪೂರ್ವಭಾವಿಯಾಗಿ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕ್ರೋಢಿಕೃತ 'ವಾಹನ ಪ್ರಚಾರ ಜಾಥ', ಆನೇಕಲ್ ಹೊಸಕೋಟೆ ಇತ್ಯಾದಿ ತಾಲ್ಲೂಕ ಕೇಂದ್ರಗಳಿಂದ ರೈತರ ಪಾದಯಾತ್ರೆಗಳನ್ನು ಸಂಘಟಿಸಿ, ಬಿ.ಬಿ.ಎಂ.ಪಿ. ಗಡಿಯಿಂದ 18 ಕಿ.ಮೀ. ನವರೆಗಿನ ಬಗರ್ ಹುಕುಂ ಸಾಗುವಳಿ ಸಕ್ರಮ ಮಾಡಬಾರದೆನ್ನುವ ತೀರ್ಮಾನವನ್ನು ವಾಪಸು ಪಡೆಯಬೇಕು. ನಾಲ್ಕು, ಐದು ದಶಕಗಳಿಂದ ಕೃಷಿ ನಡೆಸುತ್ತಿರುವ ಭೂಮಿಗೆ ಮೂಲ ದಾಖಲೆ ಇಲ್ಲ ಎನ್ನುವ ಹೆಸರಿನಲ್ಲಿ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಹೊರಟಿರುವ ರಾಜ್ಯ ಸರ್ಕಾರದ ಪ್ರಯತ್ನವನ್ನು ಕೂಡಲೇ ನಿಲ್ಲಿಸಬೇಕು ಹಾಗೂ ಎಲ್ಲಾ ಬಗರ್ ಹುಕ್ಕುಂ ಸಾಗುವಳಿದಾರರ ಭೂಮಿಗಳನ್ನು ಸಕ್ರಮ ಮಾಡಬೇಕೆಂಬ ಬೇಡಿಕೆಗಳನ್ನು ಈಡೇರಿಸುವ ತನಕ ಹಂತ ಹಂತದ ಹೋರಾಟಗಳನ್ನು ನಡೆಸಬೇಕು.

ಸಮಾವೇಶದಲ್ಲಿ ಕೇಳಿದ್ದು...

"ದುಡ್ಡಿದ್ದವನೇ ಭೂಮಿ ಒಡೆಯ"

ರಾಜ್ಯ ಬಿಜೆಪಿ ಸರ್ಕಾರ ಬಂಡವಾಳಶಾಹಿಗಳ ಎಂಜಲು ಕಾಸಿಗೆ ಕೈಯೊಡ್ಡಿ 'ಉಳುವವನೇ ಭೂಮಿಯ ಒಡೆಯ' ಎಂಬ ನೀತಿಯನ್ನು 'ದುಡ್ಡಿದ್ದವನೇ ಭೂಮಿಯ ಒಡೆಯ' ಎಂದು ಬದಲಿಸಲು ಹೊರಟಿದೆ.

"1964ರಲ್ಲಿ ಜಾರಿಗೆ ತರಲಾದ ಭೂ ಸುಧಾರಣಾ ಕಾಯ್ದೆಯ 'ಉಳುವವರು ಮಾತ್ರ ಭೂಮಿ ಖರೀದಿಸಬೇಕು' ಎಂಬ ಅಂಶವನ್ನು 'ಯಾರು ಬೇಕಾದರೂ ಭೂಮಿ ಖರೀದಿ ಮಾಡಬಹುದು' ಎಂಬುದಾಗಿ ತಿದ್ದುಪಡಿ ಮಾಡುವ ಮೂಲಕ ಮುಕ್ತಗೊಳಿಸಲಾಯಿತು. ಈ ತಿದ್ದುಪಡಿಯಿಂದ ದುಡ್ಡಿದ್ದವರು ಸಾಕಷ್ಟು ಪ್ರಮಾಣದಲ್ಲಿ ಭೂಮಿಯನ್ನು ಖರೀದಿಸಿದರು. ದೇವನಹಳ್ಳಿ ಸಮೀಪ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆಯಾಗಿರುವುದರಿಂದ ಭೂಮಿಯ ಮೌಲ್ಯವೂ ಜಾಸ್ತಿಯಾಗಿದೆ. ಒಂದು ನಿವೇಶನ ಖರೀದಿಸಬೇಕೆಂದರೂ ಸುಮಾರು 10 ಲಕ್ಷ ರೂಪಾಯಿಗಳನ್ನು ನೀಡಬೇಕು. ಆದರೆ ಬಡ ರೈತನಿಗೆ ಇಷ್ಟು ದುಡ್ಡು ನೀಡಿ ನಿವೇಶನ ಖರೀದಿಸುವುದು ಸಾಧ್ಯವೇ?

- ಮಾರುತಿ ಮಾನ್ಪಡೆ.

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ದ ಅಧ್ಯಕ್ಷರು

ರೈತರಿಗೆ ಭೂಮಿ ವಂಚಿಸುವ ನಿರ್ಧಾರ

ರೈತರು ಹತ್ತಾರು ವರ್ಷಗಳಿಂದ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಉಳುಮೆ ಮಾಡುತ್ತಿದ್ದು, ಈ ಭೂಮಿಯನ್ನು ಸಕ್ರಮಗೊಳಿಸುವಂತೆ ಕೋರಿದ 1 ಲಕ್ಷಕ್ಕೂ ಅಧಿಕ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಈ ಭೂಮಿಗೆ ರೈತರು ಕಂದಾಯವನ್ನೂ ಕಟ್ಟುತ್ತಿದ್ದಾರೆ. ಸರ್ಕಾರ ತನ್ನ ಬಳಿಯೇ ಮೂಲ ದಾಖಲೆಗಳನ್ನಿಟ್ಟು ಕೊಂಡು, ಅವುಗಳನ್ನು ನೀಡುವಂತೆ ರೈತರನ್ನೇ ಕೇಳುತ್ತಿದೆ. ಈ ಭೂಮಿಯನ್ನು ಸಕ್ರಮ ಮಾಡಿದರೆ 93 ಸಾವಿರ ಎಕರೆ ನೀಡಬೇಕಾಗುತ್ತದೆ. ಆದರೆ ರೈತರಿಗೆ ಭೂಮಿ ಕೊಡಲೇಬಾರದು ಎಂದು ನಿರ್ಧರಿಸಿರುವ ಸರ್ಕಾರ ಇದಕ್ಕಾಗಿ ಹಲವಾರು ಕುತಂತ್ರಗಳನ್ನು ಮಾಡುತ್ತಿದೆ. ರೈತರು ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಡಬೇಕು ಎಂದು ಆದೇಶಿಸಿ ನೋಟೀಸನ್ನೂ ನೀಡಿದೆ.

ಇದೇ ನವೆಂಬರ್‌ನಲ್ಲಿ ವಿಶ್ವ ಕೃಷಿ ಹೂಡಿಕೆದಾರರ ಸಮ್ಮೇಳನವನ್ನು ಆಯೋಜಿಸಲು ಹೊರಟಿರುವ ಸರ್ಕಾರ, ಅದಕ್ಕೆ ಪೂರಕವಾಗಿ ಬಂಡವಾಳಗಾರರಿಗೆ ದಾನ ಮಾಡಲು ಸಾವಿರಾರು ಎಕರೆ ಫಲವತ್ತಾದ ಜಮೀನನ್ನು ಕಬಳಿಸಲು ಹೊರಟಿದ್ದು, ರೈತರು ಇದಕ್ಕೆ ಅವಕಾಶ ಕೊಡಬಾರದು'.

- ಜಿ.ಸಿ.ಬಯ್ಯಾರೆಡ್ಡಿ

ಕೆಪಿಆರ್‌ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ


ಮಂಗಳೂರಿನಲ್ಲಿ ಬಿರುಸಿನ ಹೋರಾಟಗಳು

ಸರಳೀಕೃತ ಮರಳು - ಗಣಿಗಾರಿಕೆಗಾಗಿ ಒತ್ತಾಯಿಸಿ ಪ್ರತಿಭಟನೆ

ಮರಳು ಹಾಗೂ ಗಣಿಗಾರಿಕೆ ನೀತಿ ಕಠಿಣಗೊಳಿಸಲು ಹೊರಟಿರುವ ಸರ್ಕಾರದ ನೀತಿಯಿಂದ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ ಎಂದು ಆರೋಪಿಸಿ, ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಕಾರ್ಯಕರ್ತರು. ಮೇ 16 ರಂದು ಮಂಗಳೂರು ಮಹಾನಗರ ಪಾಲಿಕೆ ಕಛೇರಿ ಎದುರು ಪ್ರತಿಭಟನೆ ನಡೆಸಿದರು.

ಮರಳು ಮಾಫಿಯಾ ಕೃತ್ಯಗಳನ್ನು ತಡೆಯುವ ನೆಪದಲ್ಲಿ ಸರ್ಕಾರ ಮರಳು ಹಾಗೂ ಗಣಿಗಾರಿಕೆ ನೀತಿ ಕಠಿಣಗೊಳಿಸುತ್ತಿರುವುದಾಗಿ ಸರ್ಕಾರ ಹೇಳುತ್ತಿದೆ.

ಸರ್ಕಾರದ ಈ ಕ್ರಮ ಕೊಳ್ಳೆ ಹೊಡೆದ ಬಳಿಕ ದಿಡ್ಡಿ ಬಾಗಿಲು ಹಾಕಿದಂತಾಗಿದೆ. ಇದರಿಂದ ಕಾನೂನು ಬದ್ಧ ಮರಳುಗಾರಿಕೆ ಸ್ಥಗಿತಗೊಂಡು ದ.ಕ. ಜಿಲ್ಲೆಯಲ್ಲಿ ಸಾವಿರಾರು ಮಂದಿ ಕಾರ್ಮಿಕರು ಕೆಲಸ ಇಲ್ಲದಂತಾಗಿದ್ದಾರೆ ಎಂದು ಪ್ರತಿಭಟನಾಕಾರರು ಟೀಕಿಸಿದರು. ನದಿಯಿಂದ ಯಂತ್ರಗಳನ್ನು ಬಳಸಿ ಮರಳು ತೆಗೆಯುವುದು ಮತ್ತು ಅದನ್ನು ಸಾಗಾಟ ಮಾಡುವುದನ್ನು ಸರ್ಕಾರ ನಿಷೇಧಿಸಿದೆ. ರಾಜ್ಯ ಸರ್ಕಾರದ ಈ ದಿಢೀರ್ ಕ್ರಮದಿಂದಾಗಿ ಕಟ್ಟಡ ಮತ್ತು ನಿರ್ಮಾಣ ರಂಗ ಕಚ್ಚಾ ವಸ್ತುಗಳ ಅಲಭ್ಯತೆಯಿಂದ ಸಂಪೂರ್ಣ ಸ್ತಬ್ಧಗೊಂಡಿದೆ. ಕರಾವಳಿ ಜಿಲ್ಲೆಗಳಿಗೆ ಸರ್ಕಾರದ ನೂತನ ಮರಳು ನೀತಿಯಿಂದ ವಿನಾಯಿತಿ ನೀಡಲಾಗುವುದೆಂದು ಸರ್ಕಾರ ಹೇಳಿದ್ದರೂ, ಜಿಲ್ಲಾಡಳಿತದಿಂದ ಈ ಬಗ್ಗೆ ಸ್ಪಷ್ಟ ಕ್ರಮಗಳು ಜಾರಿಯಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಜಿಲ್ಲಾ ಸಂಘದ ಅಧ್ಯಕ್ಷ ಬಿ.ಎಂ.ಭಟ್ ಪ್ರತಿಭಟನೆಯನ್ನು ಉದ್ಘಾಟಿಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ, ಸಿಐಟಿಯು ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಸಿಐಟಿಯು ಮುಖಂಡ ಸುನೀಲ್ ಕುಮಾರ್ ಬಜಾಲ್ ಮಾತನಾಡಿದರು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾ ಸಮಿತಿ ಸದಸ್ಯರಾದ ಶಶಿಧರ ಶಕ್ತಿನಗರ, ಯೋಗೇಶ್, ಜಯಂತನಾಯ್ಕ, ರಾಮಣ್ಣ ವಿಟ್ಲ, ಸದಾಶಿವ ದಾಸ, ಜನಾರ್ಧನ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಸಚೀಂದ್ರ ಕುಕ್ಕಾನೇ ಸ್ವಾಗತಿಸಿದರು. ವಾಸುದೇವ ಜೆ.ಪಿ.ವಂದಿಸಿದರು.



★

ಮಂಗಳೂರಿನಲ್ಲಿ ಬಲಗೊಳ್ಳುತ್ತಿರುವ ಬೀದಿ ಬದಿ ವ್ಯಾಪಾರಸ್ಥರ ಪ್ರತಿಭಟನೆ:

ಮಾಫಿಯಾಗಳು ಅಕ್ರಮವಾಗಿ ನಿರ್ಮಿಸುತ್ತಿರುವ ಬೃಹತ್ ಕಟ್ಟಡಗಳನ್ನು



ಕೆಡವದೆ, ಹೊಟ್ಟೆಪಾಡಿಗಾಗಿ ಹಲವಾರು ವರ್ಷಗಳಿಂದ ರಸ್ತೆ ಬದಿ ವ್ಯಾಪಾರ ಮಾಡುತ್ತಿರುವ ಬಡವರನ್ನು ಮಂಗಳೂರು ನಗರ ಪಾಲಿಕೆಯು 'ಟೈಗರ್ ಕಾರ್ಯಾಚರಣೆ' ಹೆಸರಿನಲ್ಲಿ ದಮನ ದಬ್ಬಾಳಿಕೆಗಳ ಮೂಲಕ ಅಟ್ಟಾಡಿಸುತ್ತಿದೆ, ಈ ಬಡ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಲ್ಲ. ಈ ಹಿನ್ನೆಲೆಯಲ್ಲಿ ಬೀದಿಬದಿ ವ್ಯಾಪಾರಿಗಳು ಸಿಐಟಿಯು ನೇತೃತ್ವದಲ್ಲಿ ಸಂಘಟನೆಗೊಂಡು ಮಹಾನಗರ ಪಾಲಿಕೆ ವಿರುದ್ಧವಾಗಿ ಧೀರ ಹೋರಾಟವನ್ನು ನಡೆಸುತ್ತಿದ್ದಾರೆ.

ಮೇ 19 ರಂದು ಮೊದಲ ಹಂತವಾಗಿ ಮಂಗಳೂರು ಮಹಾನಗರ ಪಾಲಿಕೆ ಎದುರು ಸತ್ಯಾಗ್ರಹ ನಡೆಸಲಾಯಿತು. ಅಂದು ಭೇಟಿ ನೀಡಿದ ಮೇಯರ್ ಹಾಗೂ ನಗರ ಪಾಲಿಕೆ ಆಯುಕ್ತರು ವಾರದೊಳಗೆ ಮುಖಂಡರ ಸಭೆ ಕರೆದು ಚರ್ಚಿಸುವ ಆಶ್ವಾಸನೆ ನೀಡಿದರು. ಸಿಐಟಿಯು ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಬೀದಿಬದಿ ವ್ಯಾಪಾರಸ್ಥರ ಸಂಘದ ಗೌರವಾಧ್ಯಕ್ಷರಾದ ಸುನೀಲ್‌ಕುಮಾರ್ ಬಜಾಲ್ ಈ ಎಲ್ಲಾ ಹೋರಾಟಗಳಿಗೆ ಮಾರ್ಗದರ್ಶನ ನೀಡಿದರು. ಸಿಐಟಿಯು ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣಶೆಟ್ಟಿ, ಪಾಲಿಕೆಯ ಸಿಪಿಐ(ಎಂ) ಸದಸ್ಯ ಜಯಂತಿ ಬಿ.ಶೆಟ್ಟಿ, ಸಂಘದ ಅಧ್ಯಕ್ಷ ಬಿ.ಎಂ.ಹಸನ್, ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಮುಸ್ತಾಫಾ, ಕೋಶಾಧಿಕಾರಿ ಎ.ಎಂ. ಅತಾವುಲ್ಲಾ, ವಿವಿಧ ಸಂಘಟನೆಗಳ ನಾಯಕರಾದ ವಾಸುದೇವ ಜೆ.ಪಿ. ಭಾರತಿ ಬೋಳಾರ, ಮುನೀರ್ ಕಾಟಿಪಳ್ಳ, ಲಿಂಗಪ್ಪ ನಂತೂರು, ಬಿ.ಕೆ. ಇಮ್ತಿಯಾಜ್, ಯೋಗೀಶ್ ಜಪ್ಪಿನ ಮೊಗರು ಮೊದಲಾ ದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಮರುದಿನ ಮೇ 20 ರಂದು ಬೀದಿ ಬದಿ ವ್ಯಾಪಾರಸ್ಥರ ಸಂಘದ ನೇತೃತ್ವದಲ್ಲಿ ಬೀದಿ ಬದಿ ವ್ಯಾಪಾರಸ್ಥರಿಗೆ ಸಮರ್ಪಕ ವ್ಯವಸ್ಥೆ ಕಲ್ಪಿಸಲು ಒತ್ತಾಯಿಸಿ ಹಾಗೂ ಮಹಾನಗರ ಪಾಲಿಕೆ ಟೈಗರ್ ವ್ಯವಸ್ಥೆಯನ್ನು ವಿರೋಧಿಸಿ, ಮಂಗಳೂರಿನ ಸ್ಟೇಟ್ ಬ್ಯಾಂಕ್ ಬಳಿ ಬೀದಿಬದಿಯಲ್ಲಿ ಸಿಐಟಿಯು ಬಾವುಟ ಹಿಡಿದುಕೊಂಡು ಮಾಮೂಲಿನಂತೆ ವ್ಯಾಪಾರ ನಡೆಸಿದರು.

ಮೂರನೇ ಹಂತದ ಕಾರ್ಯಕ್ರಮವಾಗಿ ಮೇ 21 ರಂದು ಸಂಘದ ನೇತೃತ್ವದಲ್ಲಿ ಮಂಗಳೂರು ನಗರದಲ್ಲಿ ಪಾದಯಾತ್ರೆ ನಡೆಸಿದರು. 150ಕ್ಕೂ ಮೀರಿ ಬೀದಿ ಬದಿ ವ್ಯಾಪಾರಿಗಳು ಈ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ಮ.ನ.ಪಾ.ಆಯುಕ್ತರು ಮೇ 23 ರಂದು 11 ಗಂಟೆಗೆ ಮಾತುಕತೆ ನಡೆಸುವ ಭರವಸೆ ನೀಡಿದ್ದರು. ಅದರಂತೆ ಸಂಘಟನೆಯ ಪ್ರಮುಖರು ಮ.ನ.ಪಾ. ಕಛೇರಿಗೆ ತೆರಳಿದಾಗ ಸಭೆ

ಪುಟ14 ಕ್ಕೆ

ಕುಂದಾಪುರ, ಮಂಗಳೂರುಗಳಲ್ಲಿ ಸಮುದಾಯ ಜಾಥಾಕ್ಕೆ ಸ್ವಾಗತ

ಭ್ರಷ್ಟಾಚಾರ ಮತ್ತು ಬೆಲೆಯೇರಿಕೆಯನ್ನು ವಿರೋಧಿಸಿ ಸಾಂಸ್ಕೃತಿಕ ಸಂಘಟನೆ ಸಮುದಾಯದ ವ್ಯಂಗ್ಯಚಿತ್ರ ಜಾಥಾವನ್ನು ಮೇ 18 ರಂದು ಕುಂದಾಪುರದಲ್ಲಿ ಮೇ 19 ರಂದು ಮಂಗಳೂರಿನಲ್ಲಿ ಸ್ವಾಗತಿಸಲಾಯಿತು. ಕುಂದಾಪುರದಲ್ಲಿ ಶಾಸ್ತ್ರಿ ಸರ್ಕಲ್‌ನಲ್ಲಿ ವ್ಯಂಗ್ಯ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಖ್ಯಾತ ಚಿಂತಕ ಹಾಗೂ ಮಾಧ್ಯಮ- ಸಂವಹನಶಾಸ್ತ್ರದ ಪ್ರಾಧ್ಯಾಪಕರಾದ ಪ್ರೊ: ವರದೇಶ ಹಿರೇಗಂಗೆ ಸಮುದಾಯ ರಾಜ್ಯ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರರಾವ್ ಅವರು ಸಭಿಕರನ್ನುದ್ದೇಶಿಸಿ ಮಾತನಾಡಿದರು.



ಮಂಗಳೂರಿನ ಕಾರ್ಯಕ್ರಮ ಜಿಲ್ಲಾಧಿಕಾರಿಗಳ ಕಛೇರಿ ಎದುರು ನಡೆಯಿತು. ತುಳು ನಾಟಕಕಾರ ವಿಜಯಕುಮಾರ್ ಕೊಂಡಿಯಾಲ ಬೈಲಾ, ಕೊಂಕಣಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಎರಿಕ್ ಒಜಾರಿಯಾ, ಟಿ.ಸುರೇಂದ್ರರಾವ್ ಸಭಿಕರನ್ನುದ್ದೇಶಿಸಿ ಮಾತನಾಡಿದರು. ಬೆಳ್ತಂಗಡಿ ಸಮುದಾಯ ಹಾಗೂ ಮಂಗಳೂರು ಸಮುದಾಯದವರಿಂದ ಹಾಡುಗಳ ಕಾರ್ಯಕ್ರಮವೂ ನಡೆಯಿತು. 'ಬೇತಾಳ ಹೇಳಿದ ಕತೆ' ಎಂಬ ಬೀದಿ ನಾಟಕನ್ನು ಮಂಗಳೂರು ಸಮುದಾಯದ ಕಲಾವಿದರು ಪ್ರದರ್ಶಿಸಿದ್ದು, ಜನಸಮೂಹವನ್ನು ಆಕರ್ಷಿಸಿ ಮೆಚ್ಚುಗೆ ಪಡೆಯಿತು. ○

- ಎಡರಂಗದ ಕಾರ್ಯಕರ್ತರ ಮೇಲೆ ಮರಣಾಂತಿಕ ಧಾಳಿಗಳು ಕಗ್ಗೊಲೆಗಳು
- ಭೂ ಮಾಲೀಕರಿಂದ ಭೂಮಿಯ ಬಲವಂತದ ವಶ
- ಕೂಲಿ ಕೆಲಸದ ಅವಧಿ ಹೆಚ್ಚಳ ಬಲಾತ್ಕಾರದ ದುಡಿಮೆ ಆರಂಭ
- ಗಣಶಕ್ತಿ ಪತ್ರಿಕೆ-ಓದುಗರ ಬೋರ್ಡ್‌ಗಳಿಗೆ ಬೆಂಕಿ.
- ಶಸ್ತ್ರಾಸ್ತ್ರಗಳನ್ನಿಟ್ಟು ಸುಳ್ಳು ಮೊಕದ್ದಮೆ

ವರ್ಗ ದಾಳಿಯನ್ನು ಹಿಮ್ಮೆಟ್ಟಿಸಲಾಗುವುದು



ಕಗ್ಗೊಲೆಯಾದ ಸಂಗಾತಿ ಜಿತಿನ್‌ನಂದಿಗೆ ಎಡರಂಗ ಮುಖಂಡರಿಂದ ಅಂತಿಮ ಗೌರವ-ಗಾರ್ಬೆಟ್ ವಲಯದ ಸಿಪಿಐ(ಎಂ) ಕಾರ್ಯಾಲಯದ ಮುಂದೆ

ನಿರೀಕ್ಷೆಯಂತೆ ವಿಧಾನ ಸಭಾ ಚುನಾವಣೆಗಳ ನಂತರ ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಹಾಗೂ ಎಡರಂಗ ಕಾರ್ಯಕರ್ತರ ಮೇಲೆ ತೃಣಮೂಲ ಕಾಂಗ್ರೆಸ್‌ನ ಮಾರಣಾಂತಿಕ ದಾಳಿಯನ್ನು ಹರಿಯಬಿಡಲಾಗಿದೆ. ಈ ದಾಳಿಗಳು ಮೇ 13 ರಂದು ಚುನಾವಣಾ ಫಲಿತಾಂಶಗಳು ಬರಲಾರಂಭಿಸುತ್ತಿದ್ದಂತೆ ಆರಂಭವಾದವು. ರಾಜ್ಯದ ಉದ್ದಗಲಕ್ಕೂ, ವಿಶೇಷವಾಗಿ ಸಿಪಿಐ(ಎಂ) ಪಕ್ಷ ಗೆದ್ದ ಕಡೆಗಳಲ್ಲಿ ಪಕ್ಷದ ಕಛೇರಿಗಳು, ಕಾರ್ಮಿಕ ಸಂಘಟನೆಗಳ ಕಛೇರಿಗಳನ್ನು ವ್ಯವಸ್ಥಿತವಾಗಿ ದಾಳಿಗೆ ಗುರಿ ಮಾಡಲಾಗಿದೆ ಮತ್ತು ಕೆಂಬಾವುಟಗಳನ್ನು ಹರಿದು ಹಾಕಿ ಬಲಾತ್ಕಾರದಿಂದ ತೃಣಮೂಲ ಕಾಂಗ್ರೆಸ್‌ನ ಬಾವುಟಗಳನ್ನು ಏರಿಸಲಾಗಿದೆ. ಎಡರಂಗದ ಸ್ಥಳೀಯ ಮುಖಂಡರ ಮನೆಗಳನ್ನು ಲೂಟಿ ಮಾಡಲಾಗಿದೆ. ಬೆಂಕಿ ಹಚ್ಚಲಾಗಿದೆ. ಪ್ರತಿರೋಧ ಒಡ್ಡಿದವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ಫಲಿತಾಂಶ ಬಂದ ಮೊದಲ 48 ಗಂಟೆಗಳಲ್ಲಿ ಬರ್ಧಮಾನ್ ಪಶ್ಚಿಮ ಮಿಡ್ನಾಪುರ, ಬಂಕುರ ಜಿಲ್ಲೆಗಳ ಮೂವರು ಸಿಪಿಐ(ಎಂ) ಸದಸ್ಯರನ್ನು ಕ್ರೂರವಾಗಿ ಕೊಲ್ಲಲಾಗಿದೆ.

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳಲ್ಲಿ ಸಾಮಾನ್ಯವಾಗಿ ಗೆದ್ದವರು, ಸೋತವರೂ ಇದ್ದೇ ಇರುತ್ತಾರೆ. ಆದರೆ ಈ ಅಂಕಣದಲ್ಲಿ ಈ ಹಿಂದೆ ಹೇಳಲಾದಂತೆ 'ಪಶ್ಚಿಮ ಬಂಗಾಳದಲ್ಲಿ ಎಡರಂಗದ ಚುನಾವಣಾ ಸೋಲುಗಳನ್ನು ಆಳುವ ವರ್ಗಗಳ ಸ್ಥಾಪಿತ ಹಿತಾಸಕ್ತಿಗಳು ಎಡರಂಗ ಸರ್ಕಾರದ ಅವಧಿಯಲ್ಲಿ ಜನತೆ ಗಳಿಸಿಕೊಂಡಿರುವುದನ್ನು ನಾಶ ಮಾಡುವುದಕ್ಕಾಗಿ ವರ್ಗ ಆಕ್ರಮಣಗಳನ್ನು ಹೇರುವ ಅವಕಾಶವಾಗಿ ಬಳಸಿಕೊಳ್ಳುತ್ತಿವೆ. ಈ ಎಲ್ಲ ಹಲ್ಲೆಗಳ ಮೂಲಕ ಅದಕ್ಕಾಗಿಯೇ ಪ್ರಯತ್ನಿಸಲಾಗುತ್ತಿದೆ.

ಉದಾಹರಣೆಗೆ ಜಂಗಲ್ ಮಹಲ್ ಪ್ರದೇಶದಲ್ಲಿ, ಮಾವೋವಾದಿಗಳ ಸಹಾಯದೊಂದಿಗೆ ತೃಣಮೂಲ ಕಾಂಗ್ರೆಸ್ ಪಕ್ಷವು ಎಡರಂಗ ಸರ್ಕಾರದ ಭೂಸುಧಾರಣಾ ಕಾರ್ಯಕ್ರಮದ ಆಧಾರದಲ್ಲಿ ಭೂಮಿ ಪಡೆದುಕೊಂಡವರ ಮೇಲೆ ದಾಳಿ ನಡೆಸುತ್ತಿದೆ. ಇಂತಹ ದಾಳಿಯ ಮೂಲಕ ಹಾಗೂ ಸುದೀರ್ಘ ಕಾಲ ಎಳೆದಾಡುವ ನ್ಯಾಯಾಲಯದ ಮೊಕದ್ದಮೆಯನ್ನು ಬಳಸಿಕೊಂಡು ಒಂದು ಕಾಲಕ್ಕೆ ಭೂಹೀನ ಕೃಷಿಕೂಲಿಕಾರು, ಬಡ ರೈತರಾಗಿದ್ದು ಈಗ ಈ ಭೂಮಿಯ ಕಾನೂನುಬದ್ಧ ಒಡೆಯರಾಗಿರುವ ಈ ಜನರಿಂದ ಜಮೀನನ್ನು ಕಸಿದು ಕೊಳ್ಳುವ ಪ್ರಯತ್ನ ಈ ಜಮೀನಿನ ಮೇಲೆ ಕಾನೂನುಬಾಹಿರವಾಗಿ ಹಿಡಿತ ಹೊಂದಿದ್ದ ಮಾಜಿ ಭೂಮಾಲಕರದು. ಸರಳವಾಗಿ ಹೇಳುವುದಾದರೆ ಅವರು ಎಡರಂಗ ಸರ್ಕಾರದ ಭೂ ಸುಧಾರಣೆಯನ್ನು ಬುಡಮೇಲು ಮಾಡಲು ಬಯಸುತ್ತಿದ್ದಾರೆ. ಕೆಲವೊಂದು ಪ್ರದೇಶಗಳಲ್ಲಿ ಕೃಷಿಕೂಲಿಕಾರರ ಕೆಲಸದ ಅವಧಿಯನ್ನು ಬಲಾತ್ಕಾರವಾಗಿ ಹೆಚ್ಚಿಸಲಾಗಿದೆ ಮತ್ತು ಕೂಲಿಯಲ್ಲಿ ಕಡಿತ ಮಾಡಲಾಗಿದೆ. ಕೆಲಸದ ಸಮಯದಲ್ಲಿ ಕೂಲಿಕಾರರಿಗೆ ಅನ್ನ ಮತ್ತು ಊಟವನ್ನು ನೀಡುವ ಸುಮಾರು ಮೂರು ದಶಕಗಳ ಕಾಲದ ಪರಂಪರೆಯನ್ನು ನಿಲ್ಲಿಸಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ರೈತರು ತಮ್ಮ ಜಮೀನಿನ ಬೆಳೆ ಕೊಯ್ಲು ಮಾಡಲು ಬಿಡುತ್ತಿಲ್ಲ. ಬದಲಾಗಿ ಅಕ್ರಮವಾಗಿ ತಾವೇ ಬೆಳೆ ಕೊಯ್ಲು ಮಾಡಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬೀದಿ ಬೀದಿಗಳಲ್ಲಿ, ರಸ್ತೆ ಬದಿಗಳಲ್ಲಿ ಸಿಪಿಐ(ಎಂ) ಪಕ್ಷದ ದಿನಪತ್ರಿಕೆಯಾದ 'ಗಣಶಕ್ತಿ'ಯನ್ನು ಬೋರ್ಡು ಗಳಲ್ಲಿ ಅಂಟಿಸುವುದು ಪ್ರತಿನಿತ್ಯದ ವಿದ್ಯಮಾನ. ಯಾರಿಗೆ ಪ್ರತಿಕೆಯನ್ನು ಕೊಂಡು ಓದುವ ಚೈತನ್ಯ ಇರುವುದಿಲ್ಲವೋ ಅಂತಹವರೂ ಕೂಡ ಪತ್ರಿಕೆಯನ್ನು ಓದುವಂತಾಗಬೇಕೆಂಬುದೇ ಇದರ ಉದ್ದೇಶ. ಅಂತಹ ಬೋರ್ಡುಗಳನ್ನು ಸಹ ರಾಜ್ಯದಾದ್ಯಂತ ವ್ಯಾಪಕವಾಗಿ ಸುಡಲಾಗಿದೆ ಮತ್ತು ನಾಶ ಮಾಡಲಾಗಿದೆ.

'ರಿಚ್‌ಸ್ಟ್ಯಾಗ್' ಗೆ ಫ್ಯಾಸಿಸ್ಟರು ತಾವೇ ಬೆಂಕಿ ಇಟ್ಟು ಆನಂತರ ಅದನ್ನು ಕಮ್ಯುನಿಸ್ಟರ ಮೇಲೆ ಹಾಕಿ ಹಿಟ್ಲರ್ ಕಮ್ಯುನಿಸ್ಟರ ಮೇಲೆ ಘೋರ ದಾಳಿ ಮಾಡಿದಂತೆ, ಫ್ಯಾಸಿಸ್ಟ್ ತಂತ್ರಗಳನ್ನು ಅಳವಡಿಸಿಕೊಂಡು ಸಿಪಿಐ(ಎಂ) ಕಛೇರಿಯ ಒಳಗೆ ಮತ್ತು ಮುಖಂಡರ ಮನೆಗಳೊಳಗೆ ಶಸ್ತ್ರಾಸ್ತ್ರಗಳನ್ನು ಇಟ್ಟು ಆ ನಂತರ ಪೋಲಿಸರನ್ನು ಕರೆಸಿ ಅಕ್ರಮವಾಗಿ ಶಸ್ತ್ರಗಳನ್ನು ಹೊಂದಿರುವುದಕ್ಕಾಗಿ ಸಂಗಾತಿಗಳನ್ನು ಬಂಧಿಸಲಾಗುತ್ತಿದೆ. ಪ್ರಸ್ತುತ ವರ್ಗ ಸಮರ ಇಲ್ಲಿ ವಂಚನಕನದ ಈ ಮಟ್ಟನ್ನು ಮುಟ್ಟಿದೆ.

ತೋರಿಕೆಗಾಗಿ ತೃಣಮೂಲ ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕಿ ಸಾರ್ವಜನಿಕವಾಗಿ, 'ನಾವು ಬದಲಾವಣೆ ಬಯಸಿದ್ದೇವೆ, ಸೇಡನ್ನಲ್ಲ' ಎಂದು ಹೇಳಿದ್ದರೂ ಅದೇ ಉಸಿರಿನಲ್ಲಿ ಟಿಎಂಸಿ ನಾಯಕಿಯು ಎಡರಂಗದ ಬೆಂಬಲಿಗರ ಮೇಲಿನ ದಾಳಿಯು ನಡೆದಿರುವುದು ಪರಸ್ಪರ ಎಡಪಕ್ಷಗಳ ನಡುವಿನ ಘರ್ಷಣೆಯಿಂದ ಎಂದು ಹೇಳಿದ್ದಾರೆ.!! ಚುನಾವಣಾ ಪ್ರಚಾರದಲ್ಲಿ ಗಲಭೆಗಳನ್ನು ಹೊತ್ತಿಸುವ ಸಲುವಾಗಿಯೇ 'ತೃಣಮೂಲ ಕಾರ್ಯಕರ್ತರು ಎಡರಂಗ ಕಾರ್ಯಕರ್ತರಿಗೆ ಪಾಠವನ್ನು ಕಲಿಸಲಿದ್ದಾರೆಂಬ ಪ್ರಚೋದನಾಕಾರಿ ಮಾತುಗಳನ್ನಾಡ ಲಾಗಿತ್ತು. ಸಿಪಿಐ(ಎಂ) ಮತ್ತು ಎಡರಂಗವು ಸೌಜನ್ಯಪೂರಕವಾಗಿ ಮತ್ತು ವಿನಯ ಪೂರ್ವಕವಾಗಿ ತಾವು ರಚನಾತ್ಮಕವಾದ ವಿರೋಧ ಪಕ್ಷವಾಗಿ ಕೆಲಸ ಮಾಡುವುದಾಗಿ ಘೋಷಿಸಿರುವಾಗ ಪಶ್ಚಿಮ ಬಂಗಾಳದಲ್ಲಿ ಈಗ ಹರಿಯ ಬಿಟ್ಟಿರುವುದು ಒಂದು ವರ್ಗ ಸಮರವಾಗಿದೆ.

ಸ್ಪಷ್ಟವಾಗಿ ಇದು ಸಿಪಿಐ(ಎಂ) ಮತ್ತು ಎಡರಂಗವನ್ನು ದುರ್ಬಲಗೊಳಿಸುವ ಉದ್ದೇಶದ ವರ್ಗ ಸಮರವಾಗಿದೆ. ಆ ಮೂಲಕವಾಗಿ ಮೂರು ದಶಕಗಳಿಗೂ ಹೆಚ್ಚು ಕಾಲದ ಎಡರಂಗದ ಆಳ್ವಿಕೆಯಲ್ಲಿ ಭೂ ಸುಧಾರಣೆ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಅಪಾರವಾದುದನ್ನು ಗಳಿಸಿಕೊಂಡಿರುವ ಶೋಷಿತ ವರ್ಗಗಳನ್ನು ದುರ್ಬಲಗೊಳಿಸುವ ಯತ್ನವಾಗಿದೆ.

ಸಿಪಿಐ(ಎಂ) ಮತ್ತು ಎಡರಂಗದ ಮೇಲಿನ ಇಂಥ ದಾಳಿಯು ಇದೇ ಮೊದಲ ಸಲವಲ್ಲ. 1972 ರ ವಿಧಾನ ಸಭಾ ಚುನಾವಣೆಗಳಲ್ಲಿ ಸಾಮೂಹಿಕ ಮತಗಟ್ಟೆ ವಶ, ಅಕ್ರಮಗಳೊಂದಿಗೆ ಸಿಪಿಐ(ಎಂ) ಪಕ್ಷದ ಮೇಲೆ ಹರಿಯಬಿಡಲಾದ ಅರೆ ಫ್ಯಾಸಿಸ್ಟ್ ಭಯೋತ್ಪಾದನೆಯು 1977ರಲ್ಲಿ ತುರ್ತು ಪರಿಸ್ಥಿತಿಯನ್ನು ಸೋಲಿಸುವವರೆಗೂ ಅವ್ಯಾಹತವಾಗಿ ನಡೆದಿತ್ತು. ಆಗಿನ ಆ ದಾಳಿಯು ಕಮ್ಯುನಿಸ್ಟ್ ನಾಯಕತ್ವದ ಜನಪ್ರಿಯ ಚಳುವಳಿಗಳನ್ನು ನಾಶ ಮಾಡುವ ಗುರಿ ಹೊಂದಿತ್ತು. 1400 ಕ್ಕೂ ಹೆಚ್ಚು ಜನ ಸಂಗಾತಿಗಳು ಹುತಾತ್ಮರಾದರು. ಈ ಅರೆ ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಸೋಲಿಸುವ ಮತ್ತು ಅದಕ್ಕೆ ಯಶಸ್ವಿ ಪ್ರತಿರೋಧ ಒಡ್ಡುವ ಹೋರಾಟದಲ್ಲಿ ಸಿಪಿಐ(ಎಂ)ಪಕ್ಷದ 22,000 ಕುಟುಂಬಗಳನ್ನು ಸ್ಥಳಾಂತರಿಸಿ ಬೇರೆಡೆ ನೆಲೆಗೊಳಿಸಬೇಕಾಗಿ ಬಂದಿತ್ತು. ಆಳುವ ವರ್ಗಗಳ ನಂಬಿಕೆ,ಕುತಂತ್ರಗಳಿಗೆ ವಿರುದ್ಧವಾಗಿ 1977 ರಲ್ಲಿ ಪಶ್ಚಿಮ ಬಂಗಾಳದ ಜನತೆ ಸಿಪಿಐ(ಎಂ) ನೇತೃತ್ವದ ಎಡರಂಗದ ಮೇಲೆ ಮತ್ತೊಮ್ಮೆ ವಿಶ್ವಾಸ ತೋರಿದರು. ಮಾತ್ರವಲ್ಲ ದೇಶದಲ್ಲೇ ಬೇರೆಲ್ಲೂ ಇಲ್ಲದ ರೀತಿಯಲ್ಲಿ ಸತತವಾಗಿ ಏಳು ಬಾರಿ ಅಭೂತಪೂರ್ವವಾಗಿ ತಮ್ಮ ವಿಶ್ವಾಸವನ್ನು ಎಡರಂಗದ ಮೇಲಿರಿಸಿದರು.

ಈ ಬಾರಿ ಕೂಡ, ಪ್ರಸ್ತುತ ಬಂದಿರುವ ವರ್ಗ ಆಕ್ರಮಣವನ್ನು ಎದುರಿಸಿ ಸೋಲಿಸಲಾಗುವುದು. 2009 ಲೋಕಸಭಾ ಚುನಾವಣೆಯ ನಂತರ ಪ್ರಾಣಾರ್ಪಣೆ ಮಾಡಿರುವ ಹತ್ತಿರ ಹತ್ತಿರ ಸುಮಾರು 400 ರಷ್ಟಿರುವ ಸಂಗಾತಿಗಳ ಬಲಿದಾನವು ವ್ಯರ್ಥವಾಗಲು ಅವಕಾಶ ನೀಡುವುದಿಲ್ಲ. ಪಶ್ಚಿಮ ಬಂಗಾಳದ ಈ ವರ್ಗ ಹೋರಾಟದಲ್ಲಿ ನಾವು ನಮ್ಮ ವರ್ಗ ಸಹೋದರತೆಯನ್ನು ಸಾರುತ್ತೇವೆ. ಬಂಗಾಳದ ಜನತೆ ಎಡರಂಗದ ಆಳ್ವಿಕೆಯ ಅಡಿಯಲ್ಲಿ ಕಠಿಣ ಹೋರಾಟಗಳಿಂದ ಗಳಿಸಿಕೊಂಡ ಹಕ್ಕುಗಳನ್ನು ಕಿತ್ತೆಸೆಯುವುದಕ್ಕೆ ಅನುವು ಮಾಡಿಕೊಡಲಾಗುವುದಿಲ್ಲ.

('ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮೇ 20 ರ ಸಂಪಾದಕೀಯ ಆಧರಿಸಿ)

ಆಧುನಿಕ ಭಾರತ ನಿರ್ಮಾಣದಲ್ಲಿ ಎಡಶಕ್ತಿಗಳ ನಿರಾಕರಿಸಲಾಗದ ಕೊಡುಗೆ

ಸೀತಾರಾಂ ಯೆಚೂರಿ
ಕನ್ನಡಕ್ಕೆ : ಅಪ್ಪು

> ಆದರೆ ಆಧುನಿಕ ಭಾರತದ ವಿಕಸನದ ಮೇಲೆ ಎಡರಂಗದ ಪ್ರಭಾವವು ಸೀಮಿತವಲ್ಲ. ಅದನ್ನು ಕೇವಲ ಚುನಾವಣೆ ಫಲಿತಾಂಶಗಳಿಂದ ಮಾತ್ರವೇ ಅಳೆಯಲು ಸಾಧ್ಯವಿಲ್ಲ.

ಇತ್ತೀಚೆಗೆ ಹೊರಬಿದ್ದ ವಿಧಾನಸಭೆ ಚುನಾವಣೆ ಫಲಿತಾಂಶಗಳಲ್ಲಿನ ಎಡಪಕ್ಷಗಳ ಸೋಲಿನ ಸಂಭ್ರಮಾಚರಣೆಗೆ ಮರುದಿನವೇ ಹೆಚ್ಚಿಸಿದ ಪೆಟ್ರೋಲ್ ದರಗಳು ತಣ್ಣೀರೆರಚಿಂದಾಯಿತು. ಭಾರತದಲ್ಲಿ ಎಡಪಕ್ಷಗಳ ಅಗತ್ಯತೆಯನ್ನು ಇದು ತೋರಿಸಿತು. ಎಡಪಕ್ಷಗಳು ನೈತಿಕ ಶಕ್ತಿಯನ್ನು ಉಳಿಸುವುದಷ್ಟೇ ಅಲ್ಲ, ಜನಸಾಮಾನ್ಯನ ಮೇಲೆ ಹೇರುವ ಇಂತ ದಗಾಕೋರ ನೀತಿಗಳ ವಿರುದ್ಧದ ಹೋರಾಟದ ಮುಂಚೂಣಿ ಶಕ್ತಿಯೂ ಆಗಿದೆ ಎಂದು ಭಾರತದಲ್ಲಿ ಬಲಿಷ್ಠ ಎಡಶಕ್ತಿಯ ಅಗತ್ಯತೆಯನ್ನು ಇದು ಒತ್ತಿ ಹೇಳುತ್ತದೆ.

ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ಯಾವಾಗಲೂ ಒಬ್ಬರ ಗೆಲುವನ್ನು, ಮತ್ತೊಬ್ಬರ ಸೋಲನ್ನು ನಿರ್ಧರಿಸುತ್ತದೆ. ಹೀಗಾಗಿ ಪಶ್ಚಿಮ ಬಂಗಾಳದಲ್ಲಿ ಎಡರಂಗದ ಸೋಲನ್ನು ದೊಡ್ಡ ಸುದ್ದಿಯಾಗಿಸುವುದು, ಸತತ ಏಳು ಬಾರಿ ಚುನಾಯಿತವಾಗಿದ್ದ ಸರ್ಕಾರವೊಂದು, ಎಡೆಬಿಡದೆ ನಿರಂತರವಾಗಿ 34 ವರ್ಷ ಅಸ್ತಿತ್ವದಲ್ಲಿ ಇದ್ದುದರ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಕಳೆದ ನಾಲ್ಕು ದಶಕಗಳಿಂದಲೂ ಪ್ರತಿ ಚುನಾವಣೆಯಲ್ಲೂ ಸತತವಾಗಿ ಸರ್ಕಾರಗಳನ್ನು ಬದಲಾಯಿಸುತ್ತಿದ್ದ ಕೇರಳದಲ್ಲಿ, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟದ ಜಯ ಇತ್ತೀಚಿನ ಇತಿಹಾಸದಲ್ಲೇ ಅತಿ ಕಡಿಮೆ ಅಂತರದ್ದಾಗಿದೆ. ಇದನ್ನು ಫಿರಿಕ್ ಗೆಲುವು ಎಂತಲೂ ಹೇಳಬಹುದು. (ಫಿರಿಕ್ ಎಂದರೆ, ಕ್ರಿಸ್ತಪೂರ್ವ 279ರಲ್ಲಿ ಆಸ್ಕುಲಮ್ ಯುದ್ಧದಲ್ಲಿ ಎಪಿರಸ್ ರಾಜ್ಯದ ಅರಸ ಫಿರಸ್, ರೋಮನ್ ವಿರುದ್ಧ ಅಪಾರ ಸಾವು, ನೋವು ನಷ್ಟಗಳನ್ನು ಅನುಭವಿಸಿ ವಿಜಯ ಸಾಧಿಸುತ್ತಾನೆ. ಈ ವಿಜಯ ಅವನು ಪಟ್ಟ ಕಷ್ಟಕ್ಕೆ ತಕ್ಕದಾಗಿರುವುದಿಲ್ಲ) ಏಕೆಂದರೆ ಹತ್ತು ಪಕ್ಷಗಳ ಮೈತ್ರಿಕೂಟ ಎರಡು ಸ್ಥಾನಗಳನ್ನಷ್ಟೆ ಹೆಚ್ಚು ಗಳಿಸಿದೆ. ಹಾಗಾಗಿ ಈ ಮೈತ್ರಿಕೂಟಕ್ಕೆ ಅಂತರಗತವಾಗಿರುವ ಅಭದ್ರತೆಯೂ ಇದೆ.

ಒಟ್ಟಾರೆ ಚಲಾವಣೆಯಾದ ಮತಗಳಲ್ಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಶೇಕಡ 45ರಷ್ಟು ಮತ ಪಡೆದು, ಯುಡಿಎಫ್ ಪಡೆದಿರುವ ಮತಗಳಿಗೆ ಹೋಲಿಸಿದರೆ ಶೇಕಡ 1ಕ್ಕಿಂತಲೂ ಕಡಿಮೆ ಮತ ಕಮ್ಮಿ ಪಡೆದಿದೆ. ಒಟ್ಟಾರೆ ಹೇಳುವುದಾದರೆ ಎರಡೂ ರಂಗಗಳು ಪಡೆದಿರುವ ಮತಗಳ ನಡುವಿನ ವ್ಯತ್ಯಾಸ



1.55ಲಕ್ಷ ಮಾತ್ರ.

ಪಶ್ಚಿಮ ಬಂಗಾಳದಲ್ಲಿ, 'ಬಹುಮತ ಗಳಿಸಿದವರೇ ವಿಜಯಿ' ಪದ್ಧತಿ ವೈಚಿತ್ರದಿಂದಾಗಿ ಎಡರಂಗ ಶೇಕಡ41ರಷ್ಟು ಮತಗಳನ್ನು ಗಳಿಸಿದ್ದರೂ ಅತ್ಯಂತ ಕಡಿಮೆ ಸ್ಥಾನಗಳನ್ನು ಗಳಿಸಿದೆ. ವಾಸ್ತವವಾಗಿ ಹೇಳುವುದಾದರೆ 2009ರಲ್ಲಿ ನಡೆದ ಲೋಕಸಭೆ ಚುನಾವಣೆಗೆ ಹೋಲಿಸುವುದಾದರೆ ಈ ಚುನಾವಣೆಯಲ್ಲಿ 11 ಲಕ್ಷ ಹೆಚ್ಚು ಮತದಾರರು ಎಡರಂಗದ ಪರ ಮತ ಚಲಾಯಿಸಿದ್ದಾರೆ. 2006ರ ವಿಧಾನಸಭೆ ಚುನಾವಣೆಗೆ ಹೋಲಿಸಿದರೆ ಎಡರಂಗ ಪರ 1.98 ಕೋಟಿ ಮತ ಚಲಾವಣೆಯಾಗಿ, ವಿಧಾನಸಭೆಯ 294 ಸ್ಥಾನಗಳ ಪೈಕಿ 235 ಸ್ಥಾನ ಗಳಿಸಿದ್ದರೆ, ಈ ಬಾರಿ 1.96 ಕೋಟಿ ಮತ ಚಲಾವಣೆಯಾಗಿ ಗೆದ್ದಿರುವ ಸ್ಥಾನಗಳು ಸಂಖ್ಯೆ ಮಾತ್ರ 61ಕ್ಕೆ ಕುಸಿದಿದೆ. ಅಂದರೆ 2006ರಲ್ಲಿ ವಿರೋಧ ಪಕ್ಷಗಳು ವಿಭಜನೆಗೊಂಡು ಅಂತಹ ಮುನ್ನಡೆ ಎಡರಂಗಕ್ಕೆ ಸಾಧ್ಯವಾಗಿದ್ದು, 2011ರಲ್ಲಿ ವಿರೋಧ ಪಕ್ಷದ ಐಕ್ಯತೆ ಅತಿ ಬಲಿಷ್ಠವಾಗಿದ್ದು, ಎಡರಂಗವು ಸರಿಸುಮಾರು ಅಷ್ಟೇ ಮತಗಳನ್ನು ಪಡೆದರೂ ಸ್ಥಾನಗಳ ಸಂಖ್ಯೆ ಗಣನೀಯವಾಗಿ ಕುಸಿದಿವೆ. 2009ರ ಮತ್ತು 2011ರ ನಡುವೆ 37 ಲಕ್ಷ ಹೊಸ ಮತದಾರರು ಸೇರ್ಪಡೆಯಾಗಿದ್ದಾರೆಂದು ಚುನಾವಣಾ ಆಯೋಗ ಅಂದಾಜಿಸಿದೆ. ಹೀಗೆ ಹೆಚ್ಚಾದ ಮತದಾರರ ಸಂಖ್ಯೆಯಲ್ಲಿ ಪ.ಬಂಗಾಳದಲ್ಲಿ ಎಡರಂಗ ಸರ್ಕಾರ ಆಡಳಿತಕ್ಕೆ ಬಂದ ನಂತರ ಜನಿಸಿದವರಾಗಿದ್ದಾರೆ. ಇವರ ಪೈಕಿ 10ಲಕ್ಷಕ್ಕೂ ಹೆಚ್ಚು ಮತದಾರರು ಎಡರಂಗಕ್ಕೆ ಮತ ಚಲಾಯಿಸಿದ್ದರೆ, 34ಲಕ್ಷಕ್ಕೂ ಹೆಚ್ಚು ಮತದಾರರು ವಿರೋಧಿ ಮೈತ್ರಿಕೂಟದ ಪರ ಮತ ಚಲಾಯಿಸಿದ್ದಾರೆ. ಇದು ಫಲಿತಾಂಶವನ್ನು ವಿವರಿಸುತ್ತದೆ.

ಆಂಧ್ರಪ್ರದೇಶ, ಮಹಾರಾಷ್ಟ್ರ, ಅಥವಾ ಹೊಸ ಜಾಹೀರಾತು ಮುಖದ ನಿತೀಶ್ ಕುಮಾರ್ ಅವರು ಬಿಹಾರಗಳಲ್ಲಿನ ಸರ್ಕಾರಗಳು ಈಗ ಹೊಂದಿರುವುದಕ್ಕಿಂತ ದೊಡ್ಡ ಬೆಂಬಲದ ನೆಲೆಯನ್ನು ಪಶ್ಚಿಮ ಬಂಗಾಳದಲ್ಲಿ ಎಡರಂಗ ಹೊಂದಿದೆ. ಎಡರಂಗದ ಕಟು ಟೀಕಾಕಾರರ ಮಾತನ್ನು ಹೊರತುಪಡಿಸಿ, ಎಡರಂಗದ ಭವಿಷ್ಯದ ಕುರಿತು ಚಿಂತನೆಯ ಮನಸ್ಸುಳ್ಳವರು ನೈಜ ಆತಂಕ ವ್ಯಕ್ತಪಡಿಸಿದ್ದಾರೆ. ಇಂತಹ ಆತಂಕಗಳು ಸಹಜ. ಚುನಾವಣೆ ಕಣದಲ್ಲಿ ಸಿಪಿಎಂ ತಾನು ರಚನೆಯಾದ ನಂತರ 1967ರಲ್ಲಿ ಎದುರಿಸಿದ ಮೊದಲ ಚುನಾವಣೆಗಳಿಗೆ ಹೋಲಿಸಿದರೆ ಪ್ರಸಕ್ತ ಸ್ಥಿತಿಯು ಇನ್ನೂ ಚಿಂತೆಗೀಡುಮಾಡುವಂತದ್ದು. 1967ರಲ್ಲಿ ಸಿಪಿಐ(ಎಂ) ಪಕ್ಷ ಲೋಕಸಭೆಯಲ್ಲಿ 19 ಸದಸ್ಯರನ್ನು ಹೊಂದಿತ್ತು. ಆದರೆ ಈಗ 16 ಸದಸ್ಯರನ್ನಷ್ಟೆ ಹೊಂದಿದೆ. ಕೇರಳ ಮತ್ತು ಪ.ಬಂಗಾಳ ವಿಧಾನಸಭೆಗಳಲ್ಲಿ ಕ್ರಮವಾಗಿ 52 ಮತ್ತು 43 ಶಾಸಕರನ್ನು ಹೊಂದಿತ್ತು. ಆದರೆ ಇಂದು ಕ್ರಮವಾಗಿ 45 ಮತ್ತು 40 ಶಾಸಕರನ್ನಷ್ಟೆ ಹೊಂದಿದೆ.

ಆದರೆ ಆಧುನಿಕ ಭಾರತದ ವಿಕಸನದ ಮೇಲೆ ಎಡರಂಗದ ಪ್ರಭಾವವು ಸೀಮಿತವಲ್ಲ. ಅದನ್ನು ಕೇವಲ ಚುನಾವಣೆ ಫಲಿತಾಂಶಗಳಿಂದ ಮಾತ್ರವೇ ಅಳೆಯಲು ಸಾಧ್ಯವಿಲ್ಲ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮೂರು ದೃಷ್ಟಿಕೋನಗಳು ರಾಜಕೀಯವಾಗಿ ಚಿಂತನೆಯಲ್ಲಿ ಕಾದಾಡಿವೆ. 'ಒಂದನೆಯದು ಕಾಂಗ್ರೆಸ್ ದೃಷ್ಟಿಕೋನದ ಧರ್ಮನಿರಪೇಕ್ಷಿತ ಪ್ರಜಾಪ್ರಭುತ್ವ ಭಾರತ, ಇದರಿಂದಾಚೆಗೆ ವಿಸ್ತರಿಸಿದ, ರಾಜಕೀಯ ಸ್ವಾತಂತ್ರ್ಯವನ್ನು ಆರ್ಥಿಕ ಸ್ವಾತಂತ್ರ್ಯವನ್ನಾಗಿ ಅಂದರೆ ಸಮಾಜವಾದಿಯಾಗಿ ಪರಿವರ್ತಿಸಬೇಕೆಂಬ ದೃಷ್ಟಿಕೋನ ಮತ್ತು ಮೂರನೆಯದು, ಹಿಂದೂ ಮತ್ತು ಮುಸ್ಲಿಂ ಮೂಲಭೂತವಾದ. ಇವು ಒಂದನ್ನೊಂದು ಪೋಷಿಸುವಂತಹವು. ನಾವು ನೋಡಿರುವ ಆಧುನಿಕ ಭಾರತದ ವಿಕಸನದಲ್ಲಿ ಎಡಪಕ್ಷಗಳು ಜನತೆಯ ಪ್ರಜ್ಞೆಯನ್ನು ಚುನಾವಣಾ ರಂಗದಿಂದ ಆಚೆಗೆ ರೂಪಿಸುವ ಮೂಲಕ ಬಹಳ ಪ್ರಮುಖವಾದ ಪಾತ್ರವನ್ನು ನಿರ್ವಹಿಸಿವೆ.

ಎರಡನೆಯದಾಗಿ, ದೇಶದಾದ್ಯಂತ ನಡೆದ ವಿವಿಧ ಸಮರಶೀಲ ರೈತಾಪಿ ಹೋರಾಟಗಳು. ಭೂಮಾಲೀಕರ ವಿರುದ್ಧ ಕಮ್ಯೂನಿಸ್ಟರು ನಡೆಸಿದ ಸಮರಶೀಲ ರೈತಾಪಿ ಹೋರಾಟಗಳು ಜಮೀನ್ದಾರಿ ಪದ್ಧತಿ ನಿರ್ಮೂಲನೆಗೆ ಮತ್ತು ಇತರ ರೂಪದ ಭೂಮಾಲೀಕ ಪದ್ಧತಿಯ ನಿರ್ಮೂಲನೆಯನ್ನು ಮುಂಚೂಣಿಗೆ ತಂದವು. ಇದರ ಪರಿಣಾಮವಾಗಿ ಗ್ರಾಮೀಣ ಭಾರತದ ಬೃಹತ್ ಜನಸಮುದಾಯವನ್ನು ದೇಶದ ಪ್ರಜಾಪ್ರಭುತ್ವದ ಪ್ರಮುಖ ವಾಹಿನಿಗೆ ಸೆಳೆಯಿತು.


ಮೂರನೆಯದಾಗಿ ಕಮ್ಯೂನಿಸ್ಟರು ನಾಯಕತ್ವ ನೀಡಿದಂತಹ ಸ್ವತಂತ್ರ ಭಾರತದಲ್ಲಿ ಭಾಷಾಧಾರಿತ ರಾಜ್ಯಗಳ ಪುನರ್ ಸಂಘಟನೆಗಾಗಿ ನಡೆಸಿದ ಹೋರಾಟಗಳು. (ವಿಶಾಲಾಂಧ್ರ, ಸಂಯುಕ್ತ ಮಹಾರಾಷ್ಟ್ರ ಮತ್ತು ಐಕ್ಯ ಕೇರಳ) ಆಧುನಿಕ ಭಾರತದ ರಾಜಕೀಯ ಭೂಪಟದ ರೇಖೆಗಳನ್ನು ಬರೆದವು. ಆಧುನಿಕ ಕಾಲದಲ್ಲಿ ಕೇರಳ ಮತ್ತು ಪ.ಬಂಗಾಳಗಳಲ್ಲಿ ಕೈಗೊಂಡ ಭೂಸುಧಾರಣೆಗಳ ಅನುಷ್ಠಾನ,

ಪುಟ 10 ಕ್ಕೆ

ಕೂಗುಮಾರಿ ಬಿಜೆಪಿ ಅಧಿಕಾರದಲ್ಲಿ ಪ್ರಜಾಸತ್ತೆ ಅಪಾಯದಲ್ಲಿ

ರಾಜ್ಯದ ಬಿಜೆಪಿ ಸರ್ಕಾರವು ಸಂಕುಚಿತ, ಅನೈತಿಕ ರಾಜಕೀಯ ಗುರಿಗೆ ಸ್ಪೀಕರ್ ಸ್ಥಾನವನ್ನು ಬಳಕೆ ಮಾಡಿಕೊಂಡಿರುವುದು ಸುಪ್ರೀಂಕೋರ್ಟ್‌ನಿಂದ ಸಿದ್ಧವಾಗಿದ್ದರೂ ಬಿಜೆಪಿಯು ಆ ಅಂಶವನ್ನು ಮರೆಮಾಚಲು ಯತ್ನಿಸುತ್ತಿರುವುದು ಪರಿಸ್ಥಿತಿಯ ವ್ಯಂಗ್ಯ

ಕೆ.ಎನ್. ಉಮೇಶ್



ಕೃಪೆ: ಪ್ರಜಾವಾಣಿ


ಕೇಂದ್ರ ಸರ್ಕಾರವು ವಿಧಾನಸಭೆಯನ್ನು ಅಮಾನತ್ತಿನಲ್ಲಿಡಬೇಕೆಂಬ ರಾಜ್ಯಪಾಲರ ಶಿಫಾರಸ್ಸನ್ನು ತಿರಸ್ಕರಿಸುವ ಮೂಲಕ ರಾಜ್ಯದಲ್ಲಿ ನಡೆದಿದ್ದ ರಾಜಕೀಯ ಅನಿಶ್ಚಿತತೆಗೆ ತೆರೆ ಎಳೆದಿದೆ. ರಾಜಕೀಯ ಅಧಿಕಾರ ಹಿಡಿಯುವ ಹಾಗೂ ಉಳಿಸಿಕೊಳ್ಳುವ ಸಲುವಿಗಾಗಿನ ಹೋರಾಟಗಳಿಗೆ ಸಾಂದರ್ಭಿಕ ವಿರಾಮ ಸಿಕ್ಕಿದೆ.

"ಬಿಜೆಪಿ ಹಟಾವ್-ಕರ್ನಾಟಕ ಬಜಾವ್" ಎಂಬ ಕಾಂಗ್ರೆಸ್ ಹೋರಾಟ ತನ್ನ ಶಕ್ತಿ ಕಳೆದುಕೊಂಡಿದೆ, ಅದಕ್ಕಾಗಿ ನಡೆಸಲಾದ ರಸ್ತೆ ತಡೆ, ಮೆರವಣಿಗೆ, ರ‍್ಯಾಲಿ, ಕಪ್ಪು ಬಾವುಟ ಪ್ರದರ್ಶನಗಳು ನಿಂತಿವೆ. ಬಿಜೆಪಿ ಆರಂಭಿಸಿದ್ದ "ಸರ್ಕಾರ ಉಳಿಸಿ-ಪ್ರಜಾಪ್ರಭುತ್ವ ರಕ್ಷಿಸಿ" ಮತ್ತು "ರಾಜ್ಯಪಾಲರನ್ನು ತೊಲಗಿಸಿ-ಕರ್ನಾಟಕ ಉಳಿಸಿ" ಎಂಬ ಎರಡು ಪ್ರತ್ಯೇಕ ರ‍್ಯಾಲಿಗಳನ್ನು ಅರ್ಧದಲ್ಲೇ ನಿಲ್ಲಿಸಿದ್ದಾರೆ. ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂಬ ಬೇಡಿಕೆಯನ್ನು ಮುಂದುವರಿಸುವುದಾಗಿ ಪ್ರಕಟಿಸಿದ್ದಾರೆ.

ಈ ಇಡೀ ಪ್ರಕ್ರಿಯೆಯು ಅನರ್ಹಗೊಂಡಿದ್ದ ಶಾಸಕರನ್ನು ಅರ್ಹರನ್ನಾಗಿಸಿ ಸುಪ್ರೀಂಕೋರ್ಟ್‌ನ ವಿಭಾಗೀಯ ಪೀಠ ಮೇ 13 ರಂದು ನೀಡಿದ ವಿಧಾನಸಭಾ ಅಧ್ಯಕ್ಷರ ನಡೆಯನ್ನು ಅದರ ಹಿಂದಿನ ಮುಖ್ಯಮಂತ್ರಿಗಳ ಹಿತಾಸಕ್ತಿಯನ್ನು ಖಂಡನೆಗೆ ಒಳಪಡಿಸಿದ ಚಾರಿತ್ರಿಕ ಆದೇಶವನ್ನು ಹಿಂದಕ್ಕೆ ಸರಿಸಿವೆ. ಅಂತೆಯೇ ಅಂದೆ ಪ್ರಕಟಗೊಂಡ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಫಲಿತಾಂಶದಲ್ಲಿನ 'ಗೋಡೆ ಮೇಲಿನ ಬರಹ'ದಷ್ಟೇ ಸ್ಪಷ್ಟವಾಗಿದ್ದ ಕೇಂದ್ರದಲ್ಲಿನ ಆಡಳಿತರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷ ಬಿಜೆಪಿ ಕುರಿತ ಜನಾದೇಶವನ್ನು ಕೂಡ ಹಿಂದಕ್ಕೆ ಸರಿಸಿದೆ.

ಅಂದು ಪ್ರಕಟವಾದ 5 ರಾಜ್ಯಗಳ ವಿಧಾನಸಭಾ ಚುನಾವಣೆಗಳ ಒಟ್ಟು 824 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿರುವುದು 179 (ಶೇ.21.72) ಸ್ಥಾನಗಳನ್ನು, ಬಿಜೆಪಿ ಗೆದ್ದಿರುವುದು ಕೇವಲ 5 ಸ್ಥಾನಗಳನ್ನು (ಶೇ.0.06) (ಅಸ್ಸಾಂನಲ್ಲಿ). ಇಂತಹ ಹೀನಾಯ ಪರಿಸ್ಥಿತಿಗೆ ದೇಶದ ಪ್ರಮುಖ ರಾಷ್ಟ್ರೀಯ ಪಕ್ಷಗಳು ತಲುಪಿವೆ. ಇದನ್ನು ಈ ದೇಶದ ಜನತೆ ಅರಿಯುವ ವೇಳೆಗೆ ಬಂದಿದೆ. ರಾಜ್ಯದ 16 ಶಾಸಕರ ಅನರ್ಹತೆಯನ್ನು ರದ್ದುಪಡಿಸಿದ ಸುಪ್ರೀಂಕೋರ್ಟ್‌ನ ತೀರ್ಪು.

11 ಜನ ಬಿಜೆಪಿ ಶಾಸಕರು ಮತ್ತು 5 ಪಕ್ಷೇತರ ಶಾಸಕರ ಅನರ್ಹತೆಯನ್ನು ರದ್ದುಪಡಿಸಿದ ಸುಪ್ರೀಂಕೋರ್ಟ್ ಆದೇಶ ಹೊರಬರುತ್ತಿದ್ದಂತೆ, ವೀರಾವೇಶದ ಮಾತುಗಳನ್ನು ಆಡಿದ 10 ಬಿಜೆಪಿ ಶಾಸಕರು ಸಂಜೆ ವೇಳೆಗಾಗಲೇ ಮತ್ತೆ ಬಿಜೆಪಿಯ ಬಿಲ ಸೇರುವ ವಾಸನೆ ಎಲ್ಲೆಡೆ ಸೂಸುತ್ತಿತ್ತು. ಅಂತೆಯೇ ಅವರು ತಮ್ಮ ಬೆಂಬಲವನ್ನು ಬೇಷರತ್ತಾಗಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಪ್ರಕಟಿಸಿ ರಾಜ್ಯಪಾಲರಿಗೆ ಫಾಕ್ಸ್ ಕಳುಹಿಸಿದ್ದರು.



ಕೃಪೆ: ಪ್ರಜಾವಾಣಿ

ಎಲ್ಲಿ ಅವರು ಬೆಂಬಲ ನೀಡುವುದಿಲ್ಲವೋ ಎಂಬ ಅನುಮಾನದಿಂದಾಗಿ, ಮುನ್ನೆಚ್ಚರಿಕೆಯಾಗಿ ಮೇ 17 ರಿಂದಲೇ ಅಧಿವೇಶನ ಕರೆದು, ಅದಕ್ಕೆ ರಾಜ್ಯಪಾಲರ ಅನುಮತಿಯನ್ನು ಕೋರಿದ್ದರು. ಆ ಮೂಲಕ 2010 ಅಕ್ಟೋಬರ್ 11 ರಂದು ವಿಶ್ವಾಸಮತ ಕೋರುವಾಗ ಗದ್ದಲ ಮಾಡಿದ್ದ ಕಾಂಗ್ರೆಸ್ ಮತ್ತು ಜೆಡಿ(ಎಸ್)ನ 15 ಜನ ಶಾಸಕರನ್ನು ಅಮಾನತ್ತು ಮಾಡಿದರೆ, ಈ 16 ಜನ ಸರ್ಕಾರಕ್ಕೆ ವಿರುದ್ಧವಾಗಿ ಮತ ಚಲಾಯಿಸಿದರೂ ಸರ್ಕಾರವನ್ನು ಉಳಿಸಿಕೊಳ್ಳಬಹುದು ಎಂಬ ಚಿಂತನೆ ನಡೆಸಿದ್ದರು. ಎಂಬುದೇನು ಈಗ ಗುಟ್ಟಾಗಿ ಉಳಿದಿಲ್ಲ. ಅನಂತರ ಅಗತ್ಯಬಿದ್ದರೆ ಮತ್ತೊಮ್ಮೆ ವಿಶ್ವಾಸಮತ ಕೋರಿ, ಬಹುಮತ ಸಾಧಿಸಲು ಸಹಾ ತಯಾರಿಯನ್ನು ಬಿಜೆಪಿ ನಡೆಸಿತ್ತು ಎಂಬೆಲ್ಲ ಸುದ್ದಿಗಳಿವೆ.

ಅನರ್ಹಗೊಳಿಸಿದವರೇ..ಬಾಯಿ ಚಪ್ಪರಿಸಿದರು: 13 ಬಿಜೆಪಿ ಶಾಸಕರನ್ನು ಪಕ್ಷಾಂತರ ಮಾಡಿದ್ದಕ್ಕಾಗಿ ಅನರ್ಹಗೊಳಿಸಲು ಕೋರಿ ಅರ್ಜಿ ಸಲ್ಲಿಸಿದ್ದ ಸಿಎಂ ಯಡಿಯೂರಪ್ಪ ಮತ್ತು ಅದಕ್ಕಾಗಿ ಪಕ್ಷದ ಅಧ್ಯಕ್ಷರಾಗಿ ಕೇವಲ 11 ಶಾಸಕರ ವಿರುದ್ಧ ಪ್ರಮಾಣಪತ್ರವನ್ನು ಸಹಾ ಸಲ್ಲಿಸಿದ್ದ ಬಿಜೆಪಿ ರಾಜ್ಯ ಅಧ್ಯಕ್ಷರಾದ ಕೆ.ಎಸ್. ಈಶ್ವರಪ್ಪ ಸುಪ್ರೀಂಕೋರ್ಟ್ ಆದೇಶ ಬಂದ ಕೂಡಲೇ ಅವರು ಇವರ ಬಿಲ ಹೊಕ್ಕಲಿದ್ದಾರೆ ಎಂದು ಕಂಡೊಡನೆ ರಾಗ ಬದಲಿಸಿ, 11 ಜನರು ಬಿಜೆಪಿ ಶಾಸಕರೇ ಎಂದು ಸುಪ್ರೀಂಕೋರ್ಟ್ ಹೇಳಿ ನಮ್ಮ ಬೆಂಬಲಕ್ಕೆ ಕಳುಹಿಸಿದೆ ಎಂದು ಬಾಯಿ ಚಪ್ಪರಿಸಲಾರಂಭಿಸಿದ್ದರು. ಅನರ್ಹಗೊಂಡ ಶಾಸಕರ ಕುರಿತು "ಮಸಣಕ್ಕೆ ಹೋದ ಹೆಣ ಅನರ್ಹಗೊಂಡ ಶಾಸಕರು ಒಂದೇ" ಎಂದಿದ್ದ ಬಿಜೆಪಿ ವಕ್ತಾರ ಸಿ.ಟಿ.ರವಿ, ಆ 'ಹೆಣ'ಗಳನ್ನೇ ಈಗ ಮುಂದೆ ಮಾಡಿಕೊಂಡು ನಮಗೆ ಅಭೂತಪೂರ್ವ ವಿಶ್ವಾಸಮತ ಇದೆ. ಆದರೂ ರಾಜ್ಯಪಾಲರು ಅದನ್ನು ಪರಿಗಣಿಸುತ್ತಿಲ್ಲ ಎಂದು ಬೊಬ್ಬೆ ಹಾಕುತ್ತಿದ್ದಾರೆ.

ರಾಜ್ಯಪಾಲರ ದುಡುಕು: ರಾಜ್ಯಪಾಲರ ಕೇವಲ ಕಾನೂನಾತ್ಮಕ ಲೆಕ್ಕಾಚಾರ, ಹಾಗೂ ಕಾಂಗ್ರೆಸ್‌ನ ಹಳೆ ಚಾಳಿಯಿಂದಾಗಿ ಸಂವಿಧಾನ ಪರಿಚ್ಛೇಧ 356(1)ರಂತೆ ವಿಧಾನಸಭೆಯನ್ನು ಅಮಾನತ್ತಿನಲ್ಲಿಡಲು, ರಾಷ್ಟ್ರಪತಿ ಆಡಳಿತ ಹೇರಲು ಶಿಫಾರಸ್ಸು ಮಾಡಿದ್ದರು. ರಾಜ್ಯಪಾಲರ ವಾದದಂತೆ 2010 ಅಕ್ಟೋಬರ್ 14 ರಂದು ವಿಶ್ವಾಸಮತ ಯಾಚನೆ ಸಂದರ್ಭದಲ್ಲಿ, ಸುಪ್ರೀಂಕೋರ್ಟ್‌ನ 2011 ಮೇ 13 ರ ಆದೇಶದಂತೆ, ಹಾಗೂ ಸ್ವತಃ ಅವರೇ ಕೋರಿದ್ದಂತೆ ವಿಧಾನಸಭೆಯ ಪರಿಣಾಮಕಾರಿ ಸಂಖ್ಯೆಯನ್ನು ಉಳಿಸಿಕೊಂಡಿದ್ದಲ್ಲಿ ಸಿ.ಎಂ.ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ ವಿಶ್ವಾಸಮತ ಲಭ್ಯವಾಗುತ್ತಿರಲಿಲ್ಲ, ಹಾಗಾಗಿ ಸಂವಿಧಾನಬಾಹಿರ ಸಚಿವ ಸಂಪುಟ ರಾಜ್ಯದಲ್ಲಿ ಅಧಿಕಾರದಲ್ಲಿದೆ. ಅದನ್ನು ಅಮಾನತ್ತು ಮಾಡಬೇಕು ಎಂಬುದು ಅವರ ವಾದ. ಸರ್ಕಾರಕ್ಕೆ ಬಹುಮತವೇ ಇಲ್ಲದಿರುವಾಗ, ಬಹುಮತವನ್ನು ಪಡೆಯಲಿಕ್ಕಾಗಿಯೇ ಶಾಸನ ಸಭೆಯ ಸಂಖ್ಯೆಯನ್ನೇ ಸಂವಿಧಾನ ಬಾಹಿರವಾಗಿ 16 ಶಾಸಕರನ್ನು ಸಭಾಧ್ಯಕ್ಷರ ಪೀಠವನ್ನು ಬಳಸಿ ಅನರ್ಹಗೊಳಿಸಿರುವಾಗ, ಸುಪ್ರೀಂಕೋರ್ಟ್ ಅನರ್ಹತೆಯನ್ನು ರದ್ದುಪಡಿಸಿರುವಾಗ, ಶಾಸನಸಭೆ ಅಧಿವೇಶನ ಕರೆಯಲು ನಾನೇಕೆ ಅನುಮತಿಸಲಿ ಎಂಬುದು ಅವರ ಮತ್ತೊಂದು ವಾದ.

ಕೇಂದ್ರದ ವಿಳಂಬವೇ ವರವಾಯಿತು: ಕೇಂದ್ರ ಸರ್ಕಾರ ಅದರ ಸಚಿವ ಸಂಪುಟ ಮತ್ತು ರಾಜಕೀಯ ವ್ಯವಹಾರಗಳ ಉಪಸಮಿತಿ ಎಲ್ಲವೂ ಸೇರಿ ಒಂದು ದಿನದಲ್ಲಿ ಹೇಳಬಹುದಾಗಿದ್ದ ತನ್ನ ಅಭಿಪ್ರಾಯ ಹೇಳಲು ಒಂದು ವಾರ ತೆಗೆದುಕೊಂಡಿವೆ. ಈ ಒಂದು ವಾರವೇ ಬಿಜೆಪಿ ಪಾಲಿಗೆ ವರವಾಗಿ, ಕಾಂಗ್ರೆಸ್ ಎಚ್ಚರ ತಪ್ಪಿದ ನಡೆಯಿಂದಾಗಿ ತನ್ನ ಕೂಗುಮಾರಿ ತಂತ್ರಕ್ಕೆ ರಾಜ್ಯದ ಜನ ತಲೆದೂಗುವಂತೆ ಮಾಡುವಲ್ಲಿ ಬಿಜೆಪಿ ಯಶಸ್ವಿಯಾಯಿತು. ಕೇಂದ್ರ ಸರ್ಕಾರ ರಾಜ್ಯಪಾಲರ ಶಿಫಾರಸ್ಸನ್ನು ತಿರಸ್ಕರಿಸಿದ ನಂತರ ದೆಹಲಿಯಿಂದ ಬೆಂಗಳೂರಿಗೆ ಬಂದ ಯಡಿಯೂರಪ್ಪನವರ ತಲೆಗೆ ಮೈಸೂರು ಪೇಟ ತೊಡಿಸಿ ಕೈಗೆ ಖಡ್ಗ ನೀಡಿ, ರಾಜಶಾಹಿ ಆಡಳಿತವನ್ನೇ ಸಂಕೇತಿಸುವಂತೆ, ಯುದ್ಧ-ಗೆದ್ದು ಬಂದವರಿಗೆ ನೀಡಿದಂತೆ ಸ್ವಾಗತ ನೀಡಿದ್ದು, ಬಿಜೆಪಿಯಂತಹ ಪ್ರತಿಗಾಮಿ ಪಕ್ಷ, ಪ್ರಜಾಪ್ರಭುತ್ವದ ಅಣಕದಂತೆ, ಸಂವಿಧಾನದ ಆಶಯವನ್ನೇ ಬಳಸಿ, ತಾನು ಕಳೆದುಕೊಳ್ಳುತ್ತಿದ್ದ ಜನಬೆಂಬಲವನ್ನು ಮತ್ತೆ ಪಡೆಯಲು ಕೇಂದ್ರದ ಸರ್ಕಾರ ಮತ್ತು ರಾಜ್ಯಪಾಲರ ದುಡುಕಿನ ನಡೆ ಅನುವುಗೊಳಿಸಿವೆ.

ಸರಳ ಬಹುಮತ ಇದ್ದರೂ... ಆಪರೇಷನ್ ಕಮಲ: 5 ಪಕ್ಷೇತರ ಶಾಸಕರ ಬೆಂಬಲದೊಂದಿಗೆ ಸರಳ ಬಹುಮತ ಪಡೆದಿದ್ದ ಬಿಜೆಪಿ ಸರ್ಕಾರಕ್ಕೆ, ಮತ್ಯಾವುದೇ ಶಾಸಕರ ಬೆಂಬಲವು ಅಗತ್ಯವಿರಲಿಲ್ಲ. ಆದರೂ ಸಹ ತಮ್ಮೊಳಗಿನ ಕಚ್ಚಾಟದಲ್ಲಿ ಮೇಲುಗೈ ಸಾಧಿಸಲು, ಒಬ್ಬರನ್ನು ಮತ್ತೊಬ್ಬರು ನಂಬದ, ಎಲ್ಲರಿಗೂ ಅಧಿಕಾರಬೇಕೆಂಬ ತಮ್ಮೊಳಗಿನ ಹಪಾಹಪಿಯಿಂದಾಗಿ, ಸಿಕ್ಕ ಅವಕಾಶ ಬಳಸಿ ಸಾಧ್ಯವಾದಷ್ಟು ಲಪಟಾಯಿಸುವ ಅವರೊಳಗಿನ ಅದಮ್ಯ, ಬಯಕೆ ತಣಿಸಲು 'ಆಪರೇಷನ್ ಕಮಲ' ಎಂಬ ಪ್ರಜಾಪ್ರಭುತ್ವ ವಿರೋಧಿ ಕ್ರಮವಹಿಸಿದರು. ಪಕ್ಷಾಂತರ ನಿಷೇಧ ಕಾನೂನಿನ ಕುಣಿಕೆ ತಪ್ಪಿಸಿಕೊಳ್ಳಲು ದೇಶದಲ್ಲಿ ಎಲ್ಲಾ-ಎಂದೂ ನಡೆಯದಂತಹ, ಶಾಸಕರನ್ನು ರಾಜೀನಾಮೆ ಕೊಡಿಸಿ ಪಕ್ಷಕ್ಕೆ ಸೇರಿಸಿಕೊಂಡು, ಚುನಾವಣೆಯಲ್ಲಿ ಬಿಜೆಪಿ ಶಾಸಕರನ್ನಾಗಿ ಗೆಲ್ಲಿಸಿಕೊಳ್ಳುವ ಮೂಲಕ

ಪುಟ 14 ಕ್ಕೆ

"ಇಡೀ ಪಕ್ಷ ಬಂಗಾಳದ ಸಂಗಾತಿಗಳ ಬೆನ್ನಿಗೆ ನಿಲ್ಲಬೇಕಿದೆ"

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿಕೆ

ಮೇ 16, 2011ರಂದು ದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಪಕ್ಷ ಪೊಲಿಟ್ ಬ್ಯೂರೋ ಸಭೆಯು ಈ ಕೆಳಗಿನಂತೆ ಹೇಳಿಕೆ ನೀಡಿದೆ.

ಚುನಾವಣೆಗಳ ಕುರಿತು:
ಒಂದು ದಾಖಲೆ ಅವಧಿಯಾದ ಸುಮಾರು 34 ವರ್ಷಗಳ ಕಾಲದ ಅಧಿಕಾರದ ನಂತರ ಪಶ್ಚಿಮಬಂಗಾಳದ ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗವು ಒಂದು ದೊಡ್ಡ ಸೋಲನ್ನು ಅನುಭವಿಸಿದೆ. ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಚುನಾವಣಾ ಫಲಿತಾಂಶದ ಕುರಿತು ವಿವರವಾದ ವಿಮರ್ಶೆ ನಡೆಸಿ ಚುನಾವಣಾ ಸೋಲಿಗೆ ಕಾರಣವಾದ ಅಂಶಗಳ ಕುರಿತು ತೀರ್ಮಾನಕ್ಕೆ ಬರಬೇಕೆಂದು ನಿರ್ಣಯಿಸಿದೆ. ಎಡರಂಗ ಸರ್ಕಾರವು ಮೂರು ದಶಕಗಳನ್ನು ಮೀರಿದ ಅಧಿಕಾರದ ಅವಧಿಯಲ್ಲಿ ಗಮನಾರ್ಹವಾದ ಸಾಧನೆಗಳನ್ನು ಮಾಡಿದೆ. ಇಷ್ಟಾದರೂ ರಾಜಕೀಯ, ಆಡಳಿತಾತ್ಮಕ ಮತ್ತು ಸಂಘಟನಾತ್ಮಕ ವಲಯಗಳಲ್ಲಿ ಕೊರತೆಗಳಿದ್ದವು. ಜನತೆ ಬದಲಾವಣೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿದೆ ಮತ್ತು ಜನತೆ ಈ ಮನಃಸ್ಥಿತಿ ತಲುಪಲು ಕಾರಣವಾದ ಪರಿಸ್ಥಿತಿಗಳ ಕುರಿತು ಸರಿಯಾಗಿ ಅಂದಾಜು ಮಾಡಬೇಕಿದೆ. ಪಕ್ಷವು ಈ ಪರಿಶೀಲನೆಯನ್ನು ಗಂಭೀರವಾಗಿ ನಡೆಸಲಿದೆ ಮತ್ತು ಈ ಕೊರತೆಗಳನ್ನು ಮೀರಲು ಹಾಗೂ ನಮ್ಮಿಂದ ದೂರವಾಗಿರುವ ಜನತೆಯೊಂದಿಗೆ ಮರಳಿ ಸಂಬಂಧವನ್ನೇರ್ಪಡಿಸಿಕೊಳ್ಳಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಿದೆ.

ಈ ಚುನಾವಣಾ ಫಲಿತಾಂಶದ ಆಧಾರದಲ್ಲಿ ಸಿಪಿಐ(ಎಂ) ಮತ್ತು ಎಡರಂಗವನ್ನು ತಳ್ಳಿ ಹಾಕುವವರು ತಪ್ಪು ಗ್ರಹಿಕೆಯಲ್ಲಿದ್ದಾರೆ ಮಾತ್ರವಲ್ಲ ಅವರದು ಪ್ರಮಾದ ಎಂಬುದು ಸಿದ್ಧವಾಗಲಿದೆ. ಈ ಚುನಾವಣಾ ಹಿನ್ನಡೆಯು ಹೊರತಾಗಿಯೂ ಎಡರಂಗವು ಚಲಾವಣೆಯಾದ ಮತಗಳಲ್ಲಿ ಶೇ.41 ರಷ್ಟು ಮತಗಳನ್ನು ಪಡೆದಿದೆ. ಸಿಪಿಐ(ಎಂ) ಮತ್ತು ಎಡರಂಗವು ಈ ಜನ ಬೆಂಬಲದ ನೆಲೆಯನ್ನು



ವಿಸ್ತರಿಸಲು ಒಟ್ಟಾಗಿ ಕೆಲಸ ಮಾಡಲಿದೆ. ದುಡಿಯುವ ಜನರ ಆಂದೋಲನವನ್ನು ವಿಸ್ತರಿಸುವ ಮೂಲಕ ಹಾಗೂ ವಿಧಾನಸಭೆಯ ಒಳಗೆ ಮತ್ತು ಹೊರಗೆ ಜನರ ಹಿತಾಸಕ್ತಿಗಳಿಗಾಗಿ ಸತತ ಹೋರಾಟದ ಮೂಲಕ ಇದನ್ನು ಸಾಧಿಸಲಾಗುತ್ತದೆ.

ಕೇರಳ: ಕೇರಳದಲ್ಲಿ ಎಡಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್)ವು ಬಹುಮತವನ್ನು ಮೂರು ಸ್ಥಾನಗಳ ಕೊರತೆಯಿಂದ ತಪ್ಪಿಸಿಕೊಂಡಿದೆ. ಎಲ್‌ಡಿಎಫ್‌ಗೆ ದೊರೆತಿರುವ ಈ ಚುನಾವಣಾ ಫಲಿತಾಂಶವು ಕೇರಳದ ಜನತೆ ಸಾಮಾನ್ಯವಾಗಿ ಎಲ್‌ಡಿಎಫ್ ಸರ್ಕಾರದ ಕೆಲಸಗಳನ್ನು ಅಂಗೀಕರಿಸಿದ್ದಾರೆ ಎಂಬುದನ್ನು ತೋರಿಸುತ್ತದೆ. ಎಲ್‌ಡಿಎಫ್ 45.13 ಶೇ.ವಾರು ಗಳಿಸಿದೆ. ಇದು ಯುಡಿಎಫ್ ಗಳಿಸಿರುವ ಮತ ಪ್ರಮಾಣಕ್ಕಿಂತ ಕೇವಲ ಶೇ.0.89ರಷ್ಟು ಮಾತ್ರ ಕಡಿಮೆಯಾಗಿದೆ. ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ಗಳು ತನ್ನ ಜನಪರ ನೀತಿಗಳ ರಕ್ಷಣೆಗಾಗಿ ಕೆಲಸ ಮಾಡಲಿವೆ ಮತ್ತು ದುಡಿಯುವ ಜನರ ಹಿತ ಕಾಯುವ ನಿಟ್ಟಿನಲ್ಲಿ ಹೋರಾಟಗಳನ್ನು ನಡೆಸಲಿವೆ.

ಸಿಪಿಐ(ಎಂ) ಪಕ್ಷದ ಪೊಲಿಟ್ ಬ್ಯೂರೋ ಪಶ್ಚಿಮಬಂಗಾಳ ಎಡರಂಗದ ಹಾಗೂ ಕೇರಳ ಎಲ್‌ಡಿಎಫ್‌ನ ಹತ್ತಾರು ಸಾವಿರ ಕಾರ್ಯಕರ್ತರಿಗೆ ಚುನಾವಣೆ ಪ್ರಚಾರ ಕಾರ್ಯದಲ್ಲಿನ ಅವರ ಕಠಿಣ ಶ್ರಮಕ್ಕಾಗಿ ಕೃತಜ್ಞತೆ ಸಲ್ಲಿಸಿದೆ.

ಚುನಾವಣಾ ವಿಮರ್ಶೆ: ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಪಾಲಿಟ್ ಬ್ಯೂರೋ ಹಾಗೂ ಕೇಂದ್ರ ಸಮಿತಿಯ ಸಭೆಯನ್ನು ಜೂನ್ 10 ರಿಂದ 12, 2011ರವರೆಗೆ ಹೈದರಾಬಾದ್‌ನಲ್ಲಿ ಕರೆಯಲು ನಿರ್ಧರಿಸಿದೆ. ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಗಳು ಚುನಾವಣಾ ವಿಮರ್ಶೆ ನಡೆಸಿದ ಬಳಿಕ ಕೇಂದ್ರ ಸಮಿತಿಯು ಚುನಾವಣಾ ವಿಮರ್ಶೆಯನ್ನು ಹಾಗೂ ಪಕ್ಷ ಮತ್ತು ಚಳುವಳಿಯನ್ನು ಬಲಪಡಿಸುವ ಕ್ರಮಗಳನ್ನು ಅಂತಿಮಗೊಳಿಸಲಿದೆ.

ಪಶ್ಚಿಮ ಬಂಗಾಳದಲ್ಲಿನ ದಾಳಿಗಳಿಗೆ ಖಂಡನೆ:
ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡ ಬೆನ್ನ ಹಿಂದೆಯೇ ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಮತ್ತು ಎಡರಂಗದ್ದ ಮೇಲೆ ರಾಜ್ಯದ ವಿವಿಧ ಭಾಗಗಳಲ್ಲಿ ವ್ಯಾಪಕವಾದ ದಾಳಿ ಆರಂಭವಾಗಿದೆ ಎಂಬುದನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಗುರುತಿಸಿದೆ.

ಪಕ್ಷದ ಕಛೇರಿ ಹಾಗೂ ಕಾರ್ಯಕರ್ತರು ಮತ್ತು ಬೆಂಬಲಿಗರ ಮನೆಗಳು ದಾಳಿಗೆ ಗುರಿಯಾಗಿವೆ. ಸಿಪಿಐ(ಎಂ) ಪಕ್ಷದ ಇಬ್ಬರು ಮುಖಂಡರನ್ನು ಕೊಲ್ಲಲಾಗಿದೆ (ಸಭೆ ನಡೆಯುವ ಹಂತದಲ್ಲಿ ಲಭ್ಯವಿದ್ದ ಮಾಹಿತಿ) ಪಶ್ಚಿಮ ಮಿಡ್ನಾಪುರ ಜಿಲ್ಲೆಯ ಗಾರ್ಬೆಟಾದಲ್ಲಿ ಸಿಪಿಐ(ಎಂ) ವಲಯ ಸಮಿತಿ ಸದಸ್ಯ ಜಿತೇನ್ ಅವರನ್ನು ಮೇ 14 ರಂದು ಕೊಲ್ಲಲಾಗಿದೆ. ಒಂದು ದಿನದ ನಂತರ ಮೇ 15 ರಂದು ಬಂಕುರ ಜಿಲ್ಲೆಯ ಸಿಪಿಐ(ಎಂ) ಸಲ್ತೋರ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಅಜಿತ್ ಲೋಹರ್ ಅವರನ್ನು ತೃಣಮೂಲ ಗೂಂಡಾಗಳು ಕೊಂದಿದ್ದಾರೆ. ನಡೆಸಲಾದ ದಾಳಿ ಹಲ್ಲೆಗಳ ದೊಡ್ಡ ಪಟ್ಟಿಯೇ ಇದೆ. ಪಾಲಿಟ್ ಬ್ಯೂರೋ ಸಿಪಿಐ(ಎಂ) ಮತ್ತು ಎಡರಂಗಗಳ ವಿರುದ್ಧದ ಈ ದಾಳಿಗಳಿಗೆ ತತ್‌ಕ್ಷಣ ತಡೆ ಹಾಕಬೇಕೆಂದು ಒತ್ತಾಯಿಸುತ್ತದೆ.

ಈ ಹಿಂಸೆಗೆ ತಡೆಹಾಕಬೇಕಾದ ಜವಾಬ್ದಾರಿ ತೃಣಮೂಲ ಕಾಂಗ್ರೆಸ್‌ನ ನಾಯಕತ್ವದ ಮೇಲಿದೆ. ಪೊಲಿಟ್ ಬ್ಯೂರೋವು ಇಡೀ ಸಿಪಿಐ(ಎಂ) ಪಕ್ಷ ಮತ್ತು ಎಡಶಕ್ತಿಗಳು ಪಶ್ಚಿಮ ಬಂಗಾಳದಲ್ಲಿ ಈ ದಾಳಿಯನ್ನು ಎದುರಿಸುವ ನಿಟ್ಟಿನಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಹಿಂದೆ ದೃಢವಾಗಿ ನಿಲ್ಲಬೇಕೆಂದು ಮನವಿ ಮಾಡುತ್ತದೆ.

ಆಳುವ ಮೈತ್ರಿಕೂಟದ ವಿರೋಧಿಗಳನ್ನು ಗುರಿ ಮಾಡಿಕೊಂಡಿರುವ ಈ ಪ್ರಜಾಪ್ರಭುತ್ವ ವಿರೋಧಿ, ದಾಳಿ-ದೈಹಿಕ ದೌರ್ಜನ್ಯವನ್ನು ದೇಶದ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತಿಭಟಿಸಬೇಕೆಂದು ಸಿಪಿಐ(ಎಂ) ಪಕ್ಷದ ಪೊಲಿಟ್‌ಬ್ಯೂರೋ ಮನವಿ ಮಾಡಿದೆ.

....ರೈತರ ಬೃಹತ್ ಸಮಾವೇಶ


ಪುಟ 5 ರಿಂದ

ಜಿಲ್ಲೆಗಳ ಬಡವರು, ದಲಿತರಿಗೆ ಸೇರಬೇಕಾದ ಸುಮಾರು 25-30,000 ಎಕರೆ ಭೂಮಿಯನ್ನು ಸರ್ಕಾರ ಕಿತ್ತು ಕೊಳ್ಳಲು ಹೊರಟಿದೆ. ಈ ಕ್ರಮಕ್ಕೆ ಮೊದಲು ತಿಳಿಸಿದಂತೆ, ಬೆಂಗಳೂರು ಅಭಿವೃದ್ಧಿಗೆ ಭೂಮಿ ಬೇಕೆಂಬ ನೆಪವನ್ನು ಹೇಳಾಲಾಗುತ್ತಿದೆ. ಇದು 'ಮಹಾಮೋಸ' 'ರೈತರಿಗೆ ಬಗೆಯುತ್ತಿರುವ ದ್ರೋಹ'ವಲ್ಲದೆ ಬೇರೆನೂ ಅಲ್ಲ. ಏಕೆಂದರೆ ರೈತರಿಗೆ ಸಕ್ರಮ ಮಾಡದೇ ಉಳಿಸಬೇಕೆನ್ನುವ ಈ 'ಭೂಮಿ' ರೈತರಿಂದ ಬಲತ್ಕಾರವಾಗಿ ಕಿತ್ತುಕೊಳ್ಳುತ್ತಿರುವ 'ಭೂಮಿ'ಯನ್ನು 'ನಗರದ ಸಾಮಾನ್ಯ ಜನರ ಅಭಿವೃದ್ಧಿಗೆ' ಬಳಸದೆ 'ಸರ್ಕಾರಗಳು' ವಿಶೇಷವಾಗಿ ಬಿಜೆಪಿ ಸರ್ಕಾರ 'ಭೂಮಿ'ಯನ್ನು ಬೇಕಾಬಿಟ್ಟಿಯಾಗಿ ಬಂಡವಾಳಶಾಹಿಗಳಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ದಾನ ಮಾಡುತ್ತಿದ್ದಾರೆ. ಅದರಲ್ಲೂ ನವೆಂಬರ್ 2011ರಲ್ಲಿ ರಾಜ್ಯ ಸರ್ಕಾರ ನಡೆಸಲು ಉದ್ದೇಶಿಸಿರುವ 'ಕೃಷಿ ಕ್ಷೇತ್ರದಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ'ದ ಸಂದರ್ಭದಲ್ಲಿ ಬಹು ರಾಷ್ಟ್ರೀಯ ಕಂಪನಿಗಳಿಗೆ ಧಾರೆಯೆರೆ ಯುವುಕ್ಕಾಗಿ ಈ ಸಿದ್ಧತೆಗಳನ್ನು ಮಾಡಿರುವಂತೆ ಕಾಣುತ್ತಿದೆ. ಇದರಲ್ಲಿ ಸಿಗುವ ಕಮಿಷನ್ ನಿಂದ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಿವೆ. ಹೀಗೆ ಬಡವರ, ದಲಿತರ ಹೊಟ್ಟೆಯ ಮೇಲೆ ಹೊಡೆದು, ಬಾಯಿಗೆ ಮಣ್ಣು ಹಾಕಿ, ಬಂಡವಾಳಗಾರರಿಗೆ ಭೂಮಿಯನ್ನು ನೀಡಲು ಅವಕಾಶ ನೀಡಲು ಸಾಧ್ಯವಿಲ್ಲ.

ಅದೇ ರೀತಿಯಲ್ಲಿ 3-4 ದಶಕಗಳಿಂದ ರೈತರ ಸ್ವಾಧೀನದಲ್ಲಿರುವ, ರೈತರ ಹೆಸರಿನಲ್ಲಿ ಪಹಣಿ ಇತ್ಯಾದಿ ದಾಖಲೆಗಳು ಇರುವ ಭೂಮಿಗಳಿಗೆ ರೈತರ ಬಳಿ ಇಲ್ಲದ ಮೂಲ ದಾಖಲೆಗಳನ್ನು ನೀಡಬೇಕೆಂದು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 136(3) ರ ಅಡಿಯಲ್ಲಿ ಸಾವಿರಾರು ರೈತರಿಗೆ ನೋಟಿಸ್‌ಗಳನ್ನು ನೀಡಿ, ರೈತರ ನೆಮ್ಮದಿಯನ್ನು ಕೆಡಿಸಿ, ಭ್ರಷ್ಟ ಅಧಿಕಾರಿಗಳು, ಪುಡಾರಿಗಳು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಮಾತ್ರವಲ್ಲದೆ ನಿಗದಿತ ಸಮಯದೊಳಗೆ ದಾಖಲೆಗಳನ್ನು ನೀಡದಿದ್ದರೆ, ರೈತರ ಭೂಮಿಯನ್ನು ಸರ್ಕಾರಕ್ಕೆ ಸ್ವಾಧೀನ ಪಡಿಸಿಕೊಳ್ಳಲಾಗುವುದೆಂದು ಬೆದರಿಕೆ ಹಾಕಲಾಗುತ್ತಿದೆ. ಈ ಸರ್ಕಾರದ ಧೋರಣೆಯ ವಿರುದ್ಧ ಆನೇಕಲ್ ತಾಲ್ಲೂಕಿನ ಸಾವಿರಾರು ರೈತರು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದ ನಂತರ, ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸಬಾರದೆಂದು ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳು ಮೌಖಿಕ ಆದೇಶವನ್ನು ನೀಡಿದ್ದಾರೆ.

ಹೀಗೆ ಒಂದೆಲ್ಲ ಒಂದು ಕಾರಣ, ನೆಪಗಳನ್ನು ಹುಡುಕಿ ಬೆಂಗಳೂರು ಸುತ್ತಮುತ್ತಲಿನ ಭೂಮಿಗಳನ್ನು ರೈತರಿಂದ ಕಿತ್ತು ಕೊಳ್ಳಲು ರಾಜ್ಯ ಸರ್ಕಾರ ಮುಂದಾಗುತ್ತಿದೆ. ಸರ್ಕಾರದ ಈ ರೈತ ವಿರೋಧಿ ನೀತಿಯನ್ನು ಈ ಸಮಾವೇಶವು ಖಂಡಿಸುತ್ತಿದೆ. ಹಾಗೂ ರೈತರು ಯವುದೇ ಕಾರಣಕ್ಕೂ ತಮ್ಮ ಸ್ವಾಧೀನದಲ್ಲಿರುವ ಬಗರ್ ಹುಕ್ಕುಂ ಭೂಮಿಗಳನ್ನು ಬಿಟ್ಟು ಕೊಡಬಾರದೆಂದು, ಸರ್ಕಾರದ ಬೆದರಿಕೆಗಳಿಗೆ ಅಂಜದೇ ಪಕ್ಷಾತೀತ ಪ್ರಬಲ ಹೋರಾಟಗಳನ್ನು ನಡೆಸಬೇಕೆಂದು ಈ ಸಮಾವೇಶ ಕರೆ ನೀಡುತ್ತಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ



ವಿಷ್ಣು ನಾಯ್ಕ,ವಸು,ಶುಕ್ರಿಗೌಡ,ಷರೀಫ, ಕಿರಣ್ ಭಟ್, ವಿಠ್ಠಲ ಭಂಡಾರಿ...

'ಮಹಿಳೆ : ಹೊಸ ತಲೆಮಾರು' ಸಹಯಾನ ಸಾಹಿತ್ಯೋತ್ಸವ

ನಾಡೋಜ ಶುಕ್ರಿ ಗೌಡರಿಂದ ಉದ್ಘಾಟನೆ

ನಾಡಿನ ಖ್ಯಾತ ಪ್ರಗತಿಪರ ಲೇಖಕರಾದ ಡಾ. ಆರ್. ವಿ. ಭಂಡಾರಿಯವರ ನೆನಪಿನಲ್ಲಿ ರಚಿತವಾಗಿರುವ 'ಸಹಯಾನ'(ಆರ್.ವಿ ಭಂಡಾರಿ ನೆನಪಿನ ಸಂಸತಿ ಅಧ್ಯಯನ ಕೇಂದ್ರ)ವು ಪ್ರತಿವರ್ಷ ಮೇ ತಿಂಗಳಲ್ಲಿ ಸಾಹಿತ್ಯೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ನಡೆಸುತ್ತಿದೆ. ಹೊಸತಲೆಮಾರನ್ನು ಕಾಡುವ-ಕಾಡಬೇಕಾದ ಸಮಕಾಲೀನ ವಿಷಯಗಳ ಚರ್ಚೆಯೊಂದನ್ನು ಕೇಂದ್ರವಾಗಿಸಿಕೊಂಡು ಈ ಸಾಹಿತ್ಯೋತ್ಸವ ನಡೆಯುತ್ತದೆ. ಈ ವರ್ಷದ ಮೇ 8 ರಂದು 'ಮಹಿಳೆ: ಹೊಸ ತಲೆಮಾರು' ಎನ್ನುವ ವಿಷಯದ ಕುರಿತು ನಾಡಿನ ಮಹಿಳಾ ಸಾಹಿತಿಗಳು,ಜನಪರ ಗಣ್ಯರನ್ನು ಒಳಗೊಂಡು ಸಂವಾದ ನಡೆಸಿತು. ಈ ಕುರಿತು ವರದಿ.

ಕೆ.ಮಹಾಂತೇಶ್

'ಸಮಾಜ ಕಟ್ಟಿದ, ಕಟ್ಟಬೇಕಾದ ಮಹಿಳೆ ಎಲ್ಲಿ ಕಾಣೆಯಾಗುತ್ತಿದ್ದಾಳೆ' ಇದು ಹೊಸ ತಲೆಮಾರಿನ ಮಹಿಳೆಯರ ಕುರಿತು ಚಿಂತಿಸುವಾಗಿನ ಪ್ರಶ್ನೆ. ವಸಾಹತು ಶಾಹಿ ಕಾಲದಿಂದ ಹಿಡಿದು ಇಂದಿನ ಬಂಡವಾಳಶಾಹಿ ಉದ್ದಿಮೆಗಳು ಸೃಷ್ಟಿಸುತ್ತಿರುವ ಮಾರುಕಟ್ಟೆ ದಾಹಕ್ಕೆ ಮಹಿಳೆ ಬಲಿಯಾಗುತ್ತಿದ್ದಾಳೆ. ಈ ಅರಿವು ಇಂದಿನ ತಲೆಮಾರಿಗೆ ತಿಳಿಯಲಾರದಂಥ ರೀತಿಯಲ್ಲಿ ವಸಾಹತುಶಾಹಿಯು ನಮ್ಮ ಇತಿಹಾಸವನ್ನು ಕಟ್ಟಿಕೊಟ್ಟಿದೆ. ಹಾಗಾಗಿ ಚಳುವಳಿಗಾರರು ಮತ್ತು ಚಿಂತಕರುಗಳ ನಡಿಗೆ ಒಟ್ಟೊಟ್ಟಿಗೆ ಸಾಗಬೇಕಾದ ಅನಿವಾರ್ಯತೆ, ತುರ್ತು ಒದಗಿದೆ ಎಂದು ಬೆಂಗಳೂರು ವಿಶ್ವ ವಿದ್ಯಾಲಯದ ಪ್ರಾಧ್ಯಾಪಕಿ ಡಾ. ವಸು ಎಂ. ವಿ ಉತ್ತರ ಕನ್ನಡ ಜಿಲ್ಲೆಯ ಕೆರೆಕೋಣದಲ್ಲಿ ನಡೆದ ಸಹಯಾನ ಸಾಹಿತ್ಯೋತ್ಸವದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡುತ್ತ ಹೇಳಿದರು.

'ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಬೌದ್ಧ ಧರ್ಮದ ಪ್ರವೇಶ ತಾಣವಾದ ಕರ್ನಾಟಕದ ಕರಾವಳಿಯ ಭಾಗದಲ್ಲಿ ಇಂದು ಕೋಮುವಾದದ ಕರಾಳ ಬಾಹು ಚಾಚಿದೆ. ಇದನ್ನು ಹಿಮ್ಮೆಟ್ಟಿಸುವಲ್ಲಿ ಶ್ರಮಿಸಿದ ಆರ್. ವಿ. ಭಂಡಾರಿ ಮೊದಲಾದವರು ಬಂಡಾಯ ಸಾಹಿತ್ಯದ ಮೂಲಕ ವೈಚಾರಿಕ ಮರುಹುಟ್ಟಿಗೆ ಕಾರಣವಾಗಿದ್ದು ಇತಿಹಾಸದ ಪುನರಾವರ್ತನೆಯನ್ನು ತೋರಿಸಿದೆ .ಅವರ ಹೆಸರಿನಲ್ಲಿ ಹೊಸ ತಲೆಮಾರಿನ ಕುರಿತು ಪ್ರತಿ ವರ್ಷ ಸಮ್ಮೇಳನ ನಡೆಸುತ್ತಿರುವುದು ಶ್ಲಾಘನೀಯ ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾದ ಖ್ಯಾತ ಕವಯತ್ರಿ ಡಾ. ಕೆ. ಷರೀಫಾ ಮಾತನಾಡಿ ಈ ಆಧುನಿಕ ಯುಗದಲ್ಲೂ ಮರ್ಯಾದಾ ಹತ್ಯೆ ಅತ್ಯಾಚಾರ, ಹೆಣ್ಣಿನ ಮಾರಾಟ, ದೇವದಾಸಿ ಪದ್ಧತಿ ಮುಂದುವರಿದು ಹೆಣ್ಣು ಘನತೆಯಿಂದ ಬದುಕುವುದೆ ಕಷ್ಟವಾಗಿದೆ. ರಾಜಕೀಯ, ಮತೀಯ ಶಕ್ತಿಗಳು ಅವಳನ್ನು ಶೋಷಿಸುತ್ತಿದ್ದಾರೆ' ಎಂದು ಹೇಳಿದರು. ಇವತ್ತಿನ ಒಟ್ಟು ಮಹಿಳೆಯರ ಸ್ಥಿತಿಗತಿ ಕುರಿತು ಮಾತನಾಡುತ್ತ ಐಟಿ-ಬಿಟಿಯಲ್ಲಿನ ಇತ್ತೀಚಿಗಿನ ಮಹಿಳೆಯರ ಕೆಲಸ ಹಾಗೂ ಗಾರ್ವೆಂಟ್ - ಅಂಗನವಾಡಿ- ಬಿಸಿಯೂಟದ ಇನ್ನಿತರೆ ಅಸಂಘಟಿತ ವಲಯದ ಮಹಿಳೆಯರ ಬವಣೆಗಳನ್ನು ವಿವರಿಸಿದರು. ಜಾಗತಿಕರಣದಲ್ಲಿ ಮಹಿಳೆಯರ ಅಂಗಾಗ ಮಾರಾಟಕ್ಕೆ ಮುಂದಾದುದರ ಭಯಾನಕತೆ, ಜಾತಿ ಪಂಚಾಯ್ತಿ, ಮುಸ್ಲಿಂ ಮಹಿಳೆಯರ ಪರದಾಟ ಎಲ್ಲೆಲ್ಲೂ ಮಹಿಳೆಯೇ ಬಂಡವಾಳ. ಘನತೆಯಿಂದ ಬದುಕುವ ಹಕ್ಕು ಮಹಿಳೆಗೆ ಮರೀಚಿಕೆಯಾಗುತ್ತಿದೆ' ಎಂದರು.

ನಾಡೋಜ ಶುಕ್ರಿ ಗೌಡ ಸಾಹಿತ್ಯೋತ್ಸವವನ್ನು ಉದ್ಘಾಟಿಸಿ 'ಹಿಂದಿನಿಂದಲೂ ಹೆಣ್ಣು ಕಷ್ಟದಲ್ಲಿಯೇ ಬದುಕುತ್ತಿದ್ದಾಳೆ,ಅವಳ ಬಗ್ಗೆ ಮಾತ ನಾಡುತ್ತಿರುವುದು ಸಂತೋಷವಾಗಿದೆ'ಎಂದು ಹೇಳಿ ಕಾರ್ಯಕ್ರಮಕ್ಕೆ ಶುಭ ಕೋರಿದರು. ಜಾನಪದ ಹಾಡುಗಳನ್ನು ಹಾಡಿದರು. ಸಹಯಾನದ ಕಾರ್ಯಾಧ್ಯಕ್ಷ ವಿಷ್ಣು ನಾಯ್ಕ ಸ್ವಾಗತಿಸಿದರು. ಕಾರ್ಯದರ್ಶಿ ವಿಠ್ಠಲ ಭಂಡಾರಿ ಪ್ರಾಸ್ತಾವಿಕ ಮಾತನಾಡಿದರು. ಕಿರಣ ಭಟ್ ನಿರ್ವಹಿಸಿದರು.

ಮಹಿಳೆ :ವೈಚಾರಿಕ ಸ್ಪಂದನ

'ಮಹಿಳೆ: ಸಾಹಿತ್ಯ, ಸಾಂಸತಿಕ ಆವರಣ ಮತ್ತು ಪರ್ಯಾಯದ ಹುಡುಕಾಟ' ವಿಷಯದ ಕುರಿತು ಮಂಗಳೂರು ವಿ.ವಿ. ಯ ಡಾ. ಸಬೀಹಾ ಭೂಮಿ ಗೌಡ, 'ಮಹಿಳೆ: ಸಾಮಾಜಿಕ, ಆರ್ಥಿಕ ಆವರಣ ಮತ್ತು ಪರ್ಯಾಯದ ಹುಡುಕಾಟ' ವಿಷಯದ ಕುರಿತು ಜನವಾದಿ ಮಹಿಳಾ ಸಂಘಟನೆಯ ಕೆ. ನೀಲಾ ಪ್ರಬಂಧ ಮಂಡಿಸಿದರು. ಐ.ಕೆ.ಛಾಯಾ ಕಾರ್ಯಕ್ರಮ ನಿರೂಪಿಸಿದರು.

ಮಹಿಳೆ : ಕಥಾ ಸ್ಪಂದನೆ

ಮಹಿಳೆಯರ ಆಯ್ದ ಕಥೆಗಳ ವಾಚನ-ವಿಶ್ಲೇಷಣೆ ಅತ್ಯಂತ ವಿಶಿಷ್ಟವಾಗಿ ನಡೆಯಿತು. ಕುಮಟಾದ ಡಾ. ಎಂ. ಜಿ. ಹೆಗಡೆ, ಈ ದಶಕದಲ್ಲಿ ಬಂದ ಮಹಿಳಾ ಕಥೆಗಳ ವೈಶಿಷ್ಟ್ಯವನ್ನು ಭಾಗೀರಥಿಹೆಗಡೆ, ವಿನಯಾ, ಸುನಂದಾ ಕಡಮೆ, ಬಿ.ಟಿಜಾಹ್ನವಿ, ನೀಲಾ,ಅನುಪಮಾ 'ಮುಂತಾದವರ ಕಥೆಗಳ ಹಿನ್ನೆಲೆಯಲ್ಲಿ ವಿವರಿಸಿದರೆ, ಡಾ. ಶ್ರೀಪಾದ ಭಟ್, ಕಿರಣ ಭಟ್, ಮಾಧವಿ ಭಂಡಾರಿ, ಕೆರೆಕೋಣ ಇವರು ಆಯ್ದ ಕಥೆಗಳನ್ನು ವಾಚಿಸಿದರು. ಈ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸತಿ ಇಲಾಖೆ, ಕಾರವಾರ ಇವರು ಪ್ರಯೋಜಿಸಿದ್ದರು.

ಮಹಿಳೆ: ಕವಿ ಸ್ಪಂದನೆ

ನಂತರ ನಡೆದ ಕವಿಗೋಷ್ಠಿಯಲ್ಲಿ ನಾಡಿನ ಹಿರಿ-ಕಿರಿಯ ಚಿಂತಕರು ಕವಿತೆ ಓದಿದರು. ಭಾಗೀರಥಿ ಹೆಗಡೆ, ಸುಬ್ರಾಯ ಮತ್ತಿಹಳ್ಳಿ, ಉಮೇಶ ಮುಂಡಳ್ಳಿ, ಜಯಶ್ರೀ ಹೆಗಡೆ ಕಣ್ಣ, ಬಸು ಬೇವಿನಗಿಡದ, ವಸುಮತಿ ಉಡುಪ, ರಮೇಶ ಹೆಗಡೆ, ನಿಸಾರ ಅಹಮ್ಮದ್, ಹೊಸದುರ್ಗ, ಮಾಧವಿ ಭಂಡಾರಿ ಕೆರೆಕೋಣ, ಜಗದೀಶ ಶಿರಹಟ್ಟಿ, ಮುಂತಾದವರು ಕವನ ವಾಚಿಸಿದರು. ಮುಖ್ಯ ಅತಿಥಿಯಾಗಿ ಸಾಮಾಜಿಕ ಕಾರ್ಯಕರ್ತೆ ಸತ್ಯ ಭಾಗವಹಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿ ಡಾ ವಸು ಮಾತನಾಡಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರು ಈ ಕಾರ್ಯಕ್ರಮವನ್ನು ಪ್ರಾಯೋಜಿಸಿದ್ದರು.

○

'ವಿಮೋಚನೆ ಬಯಸಿ ನಗರದತ್ತ ಮಹಿಳೆಯರು'

ಮುಕ್ತಾಯ ಸಮಾರಂಭದಲ್ಲಿ ಚಿಂತಾಮಣಿ ಕೊಡ್ಲಕೆರೆ

'ಶತಮಾನಗಳಿಂದ ಒಂದು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಬದುಕುತ್ತಿದ್ದ ಹಳ್ಳಿ ಹೆಣ್ಣು ಮಕ್ಕಳು ಕಾಯಾ-ವಾಚಾ-ಮನಸಾ ನಗರವನ್ನು ಬಯಸಿ ಹೋಗುತ್ತಿದ್ದಾರೆ. ಹಳ್ಳಿಯಿಂದ ಮುಕ್ತಿಯನ್ನು ಬಯಸುತ್ತಿದ್ದಾರೆ. ಆದರೆ ನಿಜವಾಗಿ ಮುಕ್ತಿ ಸಿಗುತ್ತದೆಯೇ ಎನ್ನುವುದು ಇಲ್ಲಿಯ ಪ್ರಶ್ನೆ. ಸಿಕ್ಕರೆ ತುಂಬಾ ಖುಷಿ. ಆದರೆ ಸಿಗುತ್ತಿಲ್ಲ ಎನ್ನುವುದೇ ಬೇಸರದ ನೋವಿನ ಸಂಗತಿ.'ಎಂದು ಕವಿ ಚಿಂತಾಮಣಿ ಕೊಡ್ಲಕೆರೆ ಹೇಳಿದರು.

ಮುಂದುವರಿದು 'ಶೋಷಿಸುತ್ತಿರುವ ಗಂಡು ಅಧಿಕಾರ, ಆರ್ಥಿಕ-ಸಾಮಾಜಿಕ, ಪ್ರಭುತ್ವ ಶಕ್ತಿಯಿಂದ ಬಂಡವಾಳ ಶಕ್ತಿ ಮಾಧ್ಯಮವನ್ನು ಉಪಯೋಗಿಸಿಕೊಂಡು ತನ್ನ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದಾನೆ. ಯಾವ ವ್ಯವಸ್ಥೆ ಹೆಣ್ಣಿಗೆ ಬಿಡುಗಡೆ, ಮುಕ್ತಿ ಕೊಡಬಹುದೆಂದುಕೊಂಡಿದ್ದೆವೋ ಆ ವ್ಯವಸ್ಥೆ ಅವಳ ಬಂಧನವನ್ನು ಇನ್ನಷ್ಟು ಬಿಗಿಗೊಳಿಸುತ್ತಲೇ ಹೋಗುತ್ತಿದೆ.' ಎಂದು ಮಹಿಳೆಯರನ್ನು ಕಾಡುತ್ತಿರುವ ವ್ಯವಸ್ಥೆಯ ಕುರಿತು ಡಾ. ವಸು. ಎಂ.ವಿ ವಿಷಾದ ವ್ಯಕ್ತಪಡಿಸಿದರು. ಮುಂದುವರಿದು' ಮಹಿಳಾವಾದವನ್ನು ಜೈವಿಕ ನೆಲೆಯಲ್ಲಿ ಮಾತ್ರ ನೋಡಬೇಕ' ಅವಳು ಬರೆದದ್ದರಿಂದ ಮಹಿಳಾ ಸಾಹಿತ್ಯ ಎನ್ನುವುದರ ಬದಲು ಒಂದು 'ಒಳಿತಿನ' ಹಂತವಾಗಿ ನೋಡಲು ಸಾಧ್ಯವಿಲ್ಲವೇ? ಎನ್ನುವಕಡೆ ಆಲೋಚಿಸಬೇಕಾಗಿದೆ' ಎಂದರು.

ಮುಖ್ಯ ಅತಿಥಿಗಳಾದ ಡಾ. ಮೀನಾಕ್ಷಿ ಬಾಳಿ, ಮಾತನಾಡಿ 'ಹೆಣ್ಣಿನ ಪರ ನಿಲುವು ಒಟ್ಟು ಜೀವಪರ ನಿಲುವಾಗಿರುತ್ತದೆ. ಹೆಣ್ಣಿನ ವಿರೋಧಿ ನಿಲುವು ಜೀವಪರ, ಸಮಾಜ ಪರ ಆಗಲು ಸಾಧ್ಯವಿಲ್ಲ' ಎಂದರು. ಮುಂದುವರಿದು 'ಪ್ರಭುತ್ವ ಕಾಲಕ್ಕೆ ತಕ್ಕಂತೆ ಹೆಣ್ಣಿನ ವಿರುದ್ಧ ಹೊಸ ಹೊಸ ವರಸೆಗಳನ್ನು ಬದಲಾಯಿಸಿಕೊಳ್ಳುತ್ತಿದೆ. ಮಹಿಳಾ ಚಳುವಳಿಯನ್ನು ಹತ್ತಿಕ್ಕುವಲ್ಲಿ ತಲ್ಲೀನರಾಗಿದ್ದಾರೆ. ಬದಲಾವಣೆಯ ಆಶಯ ಮತ್ತು ಅಪಾರ ಶಕ್ತಿಯುಳ್ಳ ಚಳುವಳಿಯ ದಿಕ್ಕು ತಪ್ಪಿಸಲು ಆಳುವವರು, ಧಾರ್ಮಿಕ ಮೂಲಭೂತ ವಾದಿಗಳು ಹೊರಟಿದ್ದಾರೆ. ಆದರೆ ನಾವು ಪ್ರಜ್ಞಾವಂತರು ಶಿಕ್ಷಣವಂತ ರೆನಿಸಿಕೊಂಡವರು ನಮ್ಮ ಜವಾಬ್ದಾರಿಗಳನ್ನು ಇನ್ನೊಬ್ಬರಿಗೆ ವರ್ಗಾಯಿಸುತ್ತಾ ಹೊರಟಿದ್ದೇವೆ ಎಂದು ಹೇಳುತ್ತಾ ವಚನ ಸಾಹಿತ್ಯದ ಪ್ರಜಾಸತ್ತಾತ್ಮಕತೆ, ಜೀವಪರ ನಿಲುವನ್ನು ಮತ್ತೆ ಮತ್ತೆ ನೆನಪಿಸಿಕೊಂಡು ಸಂಘಟನಾತ್ಮಕ ಪ್ರತಿರೋಧ ಒಡ್ಡಬೇಕಾಗಿದೆ' ಎಂದರು.

ಇಡೀ ದಿನದ ಸಾಹಿತ್ಯೋತ್ಸವದ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಮಾರೋಪದ ಮಾತುಗಳನ್ನಾಡಿದ ಡಾ. ವಸು. ಎಂ.ವಿ. ಅವರು 'ಇಂದು ಹೊಸ ತಲೆಮಾರಿನ ಎದುರು ಯಾವ ಐಡಿಯಾಲಜಿಯನ್ನು ಒಪ್ಪಿಕೊಳ್ಳಬೇಕು? ಯಾರನ್ನು ನಾಯಕರನ್ನಾಗಿ ಒಪ್ಪಿಕೊಳ್ಳಬೇಕು? ಎನ್ನುವ ಕುರಿತು ಸ್ಪಷ್ಟತೆಯಿಲ್ಲ. ಹಾಗೆಯೇ ಮಹಿಳಾ ಚಳುವಳಿಯು

ಪುಟ 13 ಕ್ಕೆ

ಯುಪಿಎ-2 ಸರಕಾರ ಎರಡು ವರ್ಷಗಳನ್ನು ಪೂರೈಸಿರುವ ಸಂಭ್ರಮದಲ್ಲಿದೆ. ವಾರ್ಷಿಕಾಚರಣೆಯ ಸಂದರ್ಭದ ಭಾಷಣದಲ್ಲಿ ಎಂದಿನಂತೆ 8.5-9 ಶೇ. ಬೆಳವಣಿಗೆಗೆ ಬೆನ್ನು ತಟ್ಟಿಕೊಳ್ಳುವುದರೊಂದಿಗೆ, ಈ ಬಾರಿ ಆಡಳಿತ ಕುರಿತ ಭಾಗದಲ್ಲಿ ಭ್ರಷ್ಟಾಚಾರ-ವಿರೋಧಿ ಕ್ರಮಗಳ ಪ್ರಸ್ತಾಪವಿದ್ದದ್ದು ಯುಪಿಎ-2 ಸರಕಾರದ ಎರಡನೇ ವರ್ಷದ ವೈಶಿಷ್ಟ್ಯವನ್ನು ತೋರಿಸಿದೆ. ಭ್ರಷ್ಟಾಚಾರದ ವಿರುದ್ಧ ದೃಢ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಪ್ರಧಾನಿಗಳು ಭರವಸೆ ಕೊಡುತ್ತಿದ್ದಂತೆಯೇ 2ಜಿ ಹಗರಣದ ಆರೋಪದಲ್ಲಿ ನ್ಯಾಯಾಂಗ ಕಸ್ಟಡಿಯಲ್ಲಿರುವ ಮಾಜಿ ದೂರಸಂಪರ್ಕ ಮಂತ್ರಿಗಳು ಮತ್ತು ಇತರರು ಜಾಮೀನು ಪಡೆಯಲು ಈ ತರಂಗಾಂತರ ಹಂಚಿಕೆಗೆ ಪ್ರಧಾನ ಮಂತ್ರಿ ಕಚೇರಿಯಿಂದಲೇ ಹಸಿರು ನಿಶಾನೆ ಇತ್ತು ಎಂಬ ವಾದ ಮುಂದಿಡುವ ಯೋಚನೆಯಲ್ಲಿದ್ದಾರೆ ಎಂದು ಸುದ್ದಿ ಬಂದಿದೆ.

- ಯುಪಿಎ-2 ಎರಡನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದ ಸಂದರ್ಭದಲ್ಲಿಯೂ ಅದು ತನ್ನ ಸಾಧನೆಯೆಂದು ಹೇಳಿಕೊಳ್ಳುತ್ತಿರುವ ಶಿಕ್ಷಣದ ಹಕ್ಕು ಕಾನೂನು ಇನ್ನೂ ಜಾರಿಗೆ ಬರುವ ಲಕ್ಷಣಗಳಿಲ್ಲ.
- ಆಹಾರ ಭದ್ರತಾ ಕಾನೂನಿನ ಕರಡು ಈಗಷ್ಟೇ ತಯಾರಾಗಿದೆಯಂತೆ.
- ಪೆಟ್ರೋಲ್ ಬೆಲೆಯೇರಿಕೆಯನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲವೆಂದು ಹಣಕಾಸು ಮಂತ್ರಿಗಳು ಸಾರಿದ್ದಾರೆ.
- ಅದೇ ವೇಳೆಗೆ ಈ ವರ್ಷ ದೇಶದ ಆಸ್ತಿಗಳಾದ ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟದ ಮೂಲಕ 40000ಕೋಟಿ ರೂ. ಗಳಿಸಿ ಸರಕಾರದ ಹಣಕಾಸು ಕೊರತೆಯನ್ನು ನೀಗಿಸಿಕೊಳ್ಳುವ ಯೋಜನೆ ಸಿದ್ಧವಾಗುತ್ತಿದೆ.
- ಈ ನಡುವೆ ಪಾಕಿಸ್ತಾನಕ್ಕೆ ಸಲ್ಲಿಸಿದ 'ಪಾತಕಿಗಳ ಪಟ್ಟಿ'ಯಲ್ಲಿ ಎಡವಟ್ಟು ಯುಪಿಎ ಸರಕಾರಕ್ಕೆ ಮುಜುಗರ ತಂದಿದೆ. ಪುರುಲಿಯ ಕೇಸಿನಲ್ಲೂ ಇದು ಮತ್ತೆ ಕಾಣಬರುತ್ತಿದೆ




ವೇದರಾಜ ಎನ್.ಕೆ.

ಆಹಾರ ಭದ್ರತಾ ಕಾನೂನು ಇನ್ನೂ ಇಲ್ಲ

ಯುಪಿಎ-2 ಸರಕಾರ ಎರಡು ವರ್ಷಗಳನ್ನು ಪೂರೈಸಿರುವ ಸಂಭ್ರಮದಲ್ಲಿದ್ದಾಗಲೇ ಯೋಜನಾ ಆಯೋಗ ಬಡತನದ ರೇಖೆ ಕುರಿತಂತೆ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಅಫಿಡವಿಟ್‌ನಲ್ಲಿ ನೀಡಿರುವ ಮಾಹಿತಿಯನ್ನು ವಿರೋಧಿಸಿ ಹೊಳೆಯುತ್ತಿರುವ ಭಾರತದ ರಾಜಧಾನಿಯಲ್ಲಿ ಪ್ರತಿಭಟನೆಗಳು ನಡೆಯುತ್ತಿದ್ದವು. ನಗರಗಳಲ್ಲಿ ದಿನಕ್ಕೆ 20ರೂ, ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 15ರೂ.ಗಿಂತ ಒಂದು ರೂಪಾಯಿ ಹೆಚ್ಚು ಆದಾಯವಿದ್ದರೂ ಅಂತವರು ಯುಪಿಎ-2 ಸರಕಾರದ ಪ್ರಕಾರ ಬಡವರಲ್ಲ. ಯೋಜನಾ ಆಯೋಗ ಸಲ್ಲಿಸಿರುವ ಅಫಿಡವಿಟ್‌ನ ಅರ್ಥ ಇದು. ಬಡತನದ ರೇಖೆಯ ಕೆಳಗಿರುವವರ ಪ್ರಮಾಣ ತೆಂಡುಲ್ಕರ್ ಸಮಿತಿ(2004-05)ಯ ಪ್ರಕಾರ 37%, ರಾಷ್ಟ್ರೀಯ ಅಸಂಘಟಿತ ವಲಯದ ಉದ್ದಿಮೆಗಳ ಆಯೋಗದ ಪ್ರಕಾರ 77%, ಯುಪಿಎ-1 ಆಳ್ವಿಕೆಯ ವೇಳೆಗೆ ಯೋಜನಾ ಆಯೋಗದ ಅಂದಾಜಿನ ಪ್ರಕಾರ 36%, ಈಗ ಅದು 27%ಕ್ಕೆ ಇಳಿದಿದೆ ಎಂಬುದು ಯುಪಿಎ-2 ಸರಕಾರದ ಯೋಜನಾ ಆಯೋಗದ ತರ್ಕ.

ಎರಡು ವರ್ಷಗಳ ಹಿಂದೆ ಅಧಿಕಾರ ವಹಿಸಿಕೊಂಡ ಕೂಡಲೇ ರಾಷ್ಟ್ರೀಯ ಆಹಾರ ಭದ್ರತಾ ಕಾನೂನಿನ ಒಂದು ಕರಡನ್ನು ಆಹಾರ ಸಚಿವಾಲಯದ ವೆಬ್‌ಸೈಟಿನಲ್ಲಿ ಪ್ರಕಟಿಸುವ ಭರವಸೆ ನೀಡಲಾಗಿತ್ತು. ಅದಿನ್ನೂ ಈಡೇರಿಲ್ಲ. ಇನ್ನೇನು ಸದ್ಯದಲ್ಲಿಯೇ ಅದು ಪ್ರಕಟವಾಗಲಿದೆಯಂತೆ, ಯುಪಿಎ-2 ಸರಕಾರ ಮತ್ತು ರಾಷ್ಟ್ರೀಯ ಸಲಹಾ ಮಂಡಳಿ(ಎನ್‌ಎಸಿ)ಯು ನಡುವೆ ದೀರ್ಘ ಜಟಾಪಟಿಯ ನಂತರ ಒಂದು 'ರಾಜಿ' ಕರಡು ಸಿದ್ಧವಾಗಿದೆಯಂತೆ. ಎನ್‌ಎಸಿಯ ಒಬ್ಬ ಪ್ರಮುಖ ಸದಸ್ಯ ಪ್ರೊ. ಜೀನ್ ಡ್ರೀಝ್ ಪ್ರಕಾರ ಯುಪಿಎ-2 ಸರಕಾರದ ಕಾಳಜಿಗಳು ಮತ್ತು ಆದ್ಯತೆಗಳ ಭಾರೀ ಪ್ರಭಾವಕ್ಕೊಳಗಾಗಿರುವ ಕರಡು ಇದು. ಇದು ಗೊಂದಲಮಯ, ಕಾರ್ಯರೂಪಕ್ಕೆ ತರಲಾಗದ, ವಿಭಜಕ ಚೌಕಟ್ಟು ಹೊಂದಿರುವ ಕರಡು ಎಂದು ಅವರು ಖೇದದಿಂದ ಹೇಳಿದ್ದಾರೆ.

ಸರಕಾರದ ಕಾಳಜಿ. ಆದ್ಯತೆಗಳೇನು? ಆಹಾರ ಸಬ್ಸಿಡಿಗೆ ಅರ್ಹರಾಗುವ ಜನರ ಪ್ರಮಾಣವನ್ನು ಸಾಧ್ಯವಾದಷ್ಟು ಇಳಿಸುವುದು ಅದರ ಮುಖ್ಯ ಕಾಳಜಿ ಎಂಬುದು ಯೋಜನಾ ಆಯೋಗದ ಅಧ್ಯಕ್ಷರ ಮಾತುಗಳಲ್ಲಿ ಕಾಣುತ್ತದೆ. ಪ್ರಧಾನ ಮಂತ್ರಿಗಳು ಸಹ ಎರಡನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸುಮಾರಾಗಿ ಅದನ್ನೇ ಹೇಳಿದ್ದಾರೆ. "ಹಣಕಾಸು ಮತ್ತು ರೆವಿನ್ಯೂ ಕೊರತೆಗಳನ್ನು ಇಳಿಸಬೇಕಾಗಿದೆ, ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕಾಗಿದೆ, ವ್ಯರ್ಥ ಸಬ್ಸಿಡಿಗಳನ್ನು ಕಡಿತ ಮಾಡಬೇಕಾಗಿದೆ" ಎಂದಿದ್ದಾರೆ. ವ್ಯರ್ಥ 'ಸಬ್ಸಿಡಿ'ಗಳಲ್ಲಿ ದೇಶದ ಶ್ರೀಮಂತರಿಗೆ ಕೊಡುವ ವಿವಿಧ ರಿಯಾಯ್ತಿಗಳು, ತೆರಿಗೆ ಕಡಿತಗಳು ಬರುವುದಿಲ್ಲ ಎಂಬುದು ಖಂಡಿತ. ಏಕೆಂದರೆ ಅವನ್ನು 'ಸಬ್ಸಿಡಿ'ಗಳೆಂದೇ ಪರಿಗಣಿಸಲಾಗುತ್ತಿಲ್ಲ.



ಬಡತನದ ರೇಖೆ

'ಅದನ್ನು ಕೆಳಗಿಳಿಸಿ. ಈ ಬಡಪಾಯಿ ಅದಕ್ಕಿಂತ ತುಸು ಮೇಲಿರಲಿ.'

ಇದು ಎರಡೂವರೆ ದಶಕಗಳ ಹಿಂದೆ ದೇಶದ ಪ್ರಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ.ಲಕ್ಷ್ಮಣ್ ರಚಿಸಿದ ವ್ಯಂಗ್ಯಚಿತ್ರ. ಅದು ರಾಜೀವ ಗಾಂಧಿ ಆಡಳಿತದ ಕಾಲದ-ನವಉದಾರವಾದದ ಅರುಣೋದಯದ ಕಾಲದ ರಚನೆ; ಬಂಡವಾಳಶಾಹಿ ಸರಕಾರಗಳ ಗೋಸುಂಬೆತನವನ್ನು ತೋರಿಸುವ ಒಂದು ರಚನೆ.

★

ಶಿಕ್ಷಣದ ಹಕ್ಕಿಗೂ ಅಪೌಷ್ಟಿಕತೆಯ ಬಾಧೆ!

ಯುಪಿಎ-2 ಸರಕಾರ ಒಂದು ವರ್ಷ ಪೂರೈಸಿದ ಮೇಲೆ ಶಿಕ್ಷಣದ ಹಕ್ಕು ಕಾನೂನನ್ನೇನೋ ತಂದಿತು. ಆದರೆ 2ನೇ ವಾರ್ಷಿಕೋತ್ಸವ ಆಚರಿಸುವ ವೇಳೆಗೂ ಅದಿನ್ನೂ ಭಾರತದ ಕೋಟ್ಯಂತರ ಬಡಮಕ್ಕಳ ಪಾಲಿಗೆ ಕನಸಾಗಿಯೇ ಉಳಿದಿದೆ.

"ಬಹುಪಾಲು ಭಾರತೀಯ ಮಕ್ಕಳಂತೆ ಈ ಕಾನೂನು ಕೂಡ ಅಪೌಷ್ಟಿಕತೆಗೆ ತುತ್ತಾಗಿದೆ" ಎನ್ನುತ್ತಾರೆ ಪ್ರಖ್ಯಾತ ಶಿಕ್ಷಣತಜ್ಞ ಪ್ರೊ. ಕೃಷ್ಣ ಕುಮಾರ್. ಈ ಕಾನೂನಿನಲ್ಲೇ ಅದರ ಅನುಷ್ಠಾನಕ್ಕೆ ಐದು ವರ್ಷಗಳ 'ಕಿಟಕಿ' ಒದಗಿಸಲಾಗಿದೆ. ಆದರೂ ಐದು ವರ್ಷಗಳ ನಂತರವೂ ಅದರ ಜಾರಿ ಬಿಸಿಲುಗುದುರೆಯಾಗಿಯೇ ಉಳಿಯಬಹುದು ಎನ್ನುತ್ತಾರೆ ಈ ಶಿಕ್ಷಣತಜ್ಞರು.

ಇವಕ್ಕೆ ಕಾರಣಗಳು ಹಲವು. ಮೊದಲನೆಯದಾಗಿ, ಶಿಕ್ಷಣ ರಾಜ್ಯಪಟ್ಟಿಯಲ್ಲಿದೆ. ಆದ್ದರಿಂದ ಕೇಂದ್ರ ನೈತಿಕ ಅಧಿಕಾರ ಚಲಾಯಿಸಬಹುದಷ್ಟೇ. ಅಂತಹ ಅಧಿಕಾರ ಯುಪಿಎ-2 ಸರಕಾರಕ್ಕೆ ಇದ್ದಂತಿಲ್ಲ. ಎರಡನೆಯದಾಗಿ, ಈ ಕಾನೂನು ಶಿಕ್ಷಣದ ಗುಣಮಟ್ಟದ ಮೇಲೆ ಒತ್ತು ನೀಡುತ್ತದೆ. ಇದರಲ್ಲಿ ಶಿಕ್ಷಕ-ವಿದ್ಯಾರ್ಥಿ ಅನುಪಾತ ಬಹಳ ಮಹತ್ವದ್ದು. ಅಂದರೆ ಈ ಕಾನೂನಿನ ಯಶಸ್ಸು ಶಿಕ್ಷಕರ ಸ್ಥಿತಿ-ಗತಿ, ಅವರ ತರಬೇತಿಯ ಮೇಲೆ ಅವಲಂಬಿಸಿರುತ್ತದೆ. ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿನ ಅತಿ ದೊಡ್ಡ ತೊಡಕು ಕೂಡ ಇದೇ. ಇದನ್ನು 'ತೊಡಕು' ಎನ್ನದೆ 'ಸವಾಲು' ಎನ್ನುತ್ತದೆ ಯುಪಿಎ-2 ಸರಕಾರ. ಆದರೆ ಈ ಪದಬಳಕೆ ಈ ಸಮಸ್ಯೆಯ ಪರಿಹಾರಕ್ಕೇನೂ ನೆರವಾಗದು ಎನ್ನುತ್ತಾರೆ ಪ್ರೊ.ಕೃಷ್ಣಕುಮಾರ್. ಹೆಚ್ಚಿನ ರಾಜ್ಯಗಳಲ್ಲಿ ಶಿಕ್ಷಕರ, ಅವರ ತರಬೇತಿಯ ಸ್ಥಿತಿ ಶೋಚನೀಯವಾಗಿದೆ. ಉದಾರೀಕರಣದ ಯುಗದಲ್ಲಿ ಆರಂಭವಾಗಿರುವ ಹೊರಗುತ್ತಿಗೆ(ಔಟ್ ಸೋರ್ಸಿಂಗ್) ಎಂಬ ಗೀಳು ಈ ಪರಿಸ್ಥಿತಿಯನ್ನು ಇನ್ನಷ್ಟು ಹಗದೆಡಿಸಿದೆ.

ಅಲ್ಲದೆ ಈ ಕಾನೂನು ಒಂದು ಪ್ರಮುಖ ವಿಷಯದಲ್ಲಿ ನ್ಯಾಯಾಲಯದ ಮೆಟ್ಟಿಲೇರಬೇಕಾಗಿ ಬಂದಿದೆ. ಶ್ರೀಮಂತರಿಗಾಗಿಯೇ ಇರುವ, ಉದಾರೀಕರಣದ ಯುಗದಲ್ಲಿ ಭಾರಿ ಲಾಭಗಿಟ್ಟಿಸುತ್ತಿರುವ 'ಇಂಟರ್ ನ್ಯಾಶನಲ್', 'ಪಬ್ಲಿಕ್ ಸ್ಕೂಲ್'ಗಳು ತಮ್ಮಲ್ಲಿನ 25% ಸೀಟುಗಳನ್ನು ಬಡಕುಟುಂಬಗಳ ಮಕ್ಕಳಿಗೆ

➡

ಈ ವರ್ಷದ ಶೇರು ಹಿಂಪಡಿಕೆ ಗುರಿ 40 ಸಾವಿರ ಕೋಟಿ ರೂ.ಗಳು

ಉಕ್ಕು ಪ್ರಾಧಿಕಾರ(ಸೇಯ್ಲ್), ತೈಲ ಮತ್ತು ನೈಸರ್ಗಿಕ ಅನಿಲ ಕಂಪನಿ(ಒಎನ್‌ಜಿಸಿ) ಸೇರಿದಂತೆ ಸಾರ್ವಜನಿಕ ವಲಯದ ಲಾಭದಲ್ಲಿರುವ ಘಟಕಗಳಲ್ಲಿನ ಸಾರ್ವಜನಿಕ ಹೂಡಿಕೆಗಳನ್ನು ಖಾಸಗಿಯವರಿಗೆ ಮಾರಿ ಒಟ್ಟು 40,000 ಕೊಟಿ ರೂ.ಗಳನ್ನು ಸಂಗ್ರಹಿಸುವ 'ರಸ್ತೆ ನಕಾಶೆ'ಯನ್ನು ಯುಪಿಎ-2 ಸರಕಾರದ ಹೂಡಿಕೆ ಹಿಂಪಡಿಕೆ ಇಲಾಖೆ ಅಂತಿಮಗೊಳಿಸಲಿದೆ ಎಂದು ಈ ಇಲಾಕೆಯ ಅಡಿಶನಲ್ ಕಾರ್ಯದರ್ಶಿ ಹೇಳಿದ್ದಾರೆ.

ಮುಂದಿನ ಮೂರು ವರ್ಷಗಳಲ್ಲಿ, ಅಂದರೆ ಯುಪಿಎ-2 ಸರಕಾರದ ಅಧಿಕಾರಾವಧಿ ಮುಗಿಯುವ ಮೊದಲು 95,000 ಕೋಟಿ ರೂ.ಗಳಷ್ಟು ಸಾರ್ವಜನಿಕ ಹೂಡಿಕೆಗಳನ್ನು ಮಾರುವ ಯೋಜನೆ ಸರಕಾರದ್ದು. ಅದರಲ್ಲಿ ಈ ವರ್ಷದ ಪಾಲು ಈ 40 ಸಾವಿರ ಕೋಟಿ. ಸಾರ್ವಜನಿಕ ವಲಯದಲ್ಲಿನ ಲಾಭಕಾರೀ ಘಟಕಗಳಲ್ಲಿನ ಸಾರ್ವಜನಿಕ ಹೂಡಿಕೆಗಳ ಮಾರಾಟದ ಪ್ರಕ್ರಿಯೆ 1991-92ರಲ್ಲಿ ಆರಂಭವಾದಂದಿನಿಂದ ಇದುವರೆಗೆ ಮಾರಿದ ಈ ಸಾರ್ವಜನಿಕ ಆಸ್ತಿಗಳ ಮೊತ್ತ 99,738.92 ಕೋಟಿ ರೂ.ಗಳು. ಹಿಂದೆ ನಷ್ಟದಲ್ಲಿದ್ದು, ಈಗ ನಷ್ಟವೇನೂ ಇಲ್ಲದೆ, ಕಳೆದ ಮೂರು ವರ್ಷಗಳಲ್ಲಿ ಲಾಭ ಮಾಡುತ್ತಿರುವ ಘಟಕಗಳ ಶೇರುಗಳನ್ನು ಕೂಡ ಮಾರುವ ಯೋಜನೆ ಈ 'ರಸ್ತೆ ನಕಾಶೆ'ಯಲ್ಲಿದೆಯಂತೆ.

ನಷ್ಟಗಳೆಲ್ಲ ಜನರಿಗೆ, ಲಾಭಗಳೆಲ್ಲ ಖಾಸಗಿಯವರಿಗೆ ಎಂಬುದು ನವ-ಉದಾರೀಕರಣದ ಧ್ಯೇಯವಾಕ್ಯ ತಾನೇ! ○


ಜನಶಕ್ತಿ
ಕನ್ನಡ ವಾರಪತ್ರಿಕೆ



ಗಣಿ ಲೂಟಿ: ಈಗ ಸೋಮಣ್ಣ ಮತ್ತು ಮಕ್ಕಳ ಹಗರಣ ಬೀದಿಗೆ

ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ



ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಹಗರಣಗಳು ಅಗೆದಷ್ಟು ಮುಗಿಯದ ಅಗಣಿತ ಸಂಪತ್ತಿನ ಅಕ್ಷಯ ಪಾತ್ರೆಯಂತಿದೆ. ಈಗ ಸರ್ಕಾರದ ಹಿರಿಮೆಯ ಕಿರಿಟಕ್ಕೆ ಮತ್ತೊಂದು ಗರಿ ಸಿಕ್ಕಿದೆ . ಇಗೋ ನೋಡಿ. ರಾಜ್ಯ ಬಿಜೆಪಿ ಸರ್ಕಾರದ ವಸತಿ ಸಚಿವ , ಪ್ರಸ್ತುತ ಬಿಜೆಪಿ ಸರ್ಕಾರದ ಉಳಿವಿಗಾಗಿ ಕತ್ತಿ ಹಿರಿದು ಹೋರಾಟಕ್ಕೆ ನಿಂತಿರುವ ಒಬ್ಬ ಪ್ರಮುಖ ಮುಖಂಡ ವಿ.ಸೋಮಣ್ಣ ಮತ್ತು ಮಕ್ಕಳ ಬಾನಾಗಡಿಗಳಿವು.

'ಮಾತಾ ಮಿನರಲ್ಸ್' ಎಂಬುದು ವಿ. ಸೋಮಣ್ಣ ಅವರ ಪುತ್ರ ಅರುಣ್ ಸೋಮಣ್ಣ, ನವೀನ್ ಸೋಮಣ್ಣ, ಅವರು ಪಾಲುದಾರರಾಗಿರುವ ಗಣಿ ಕಂಪನಿ. ಈ ಗಣಿ ಕಂಪನಿ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಕೊಂಡ್ಲಿ, ಮೂಡಲಪಾಳ್ಯ ಗ್ರಾಮಗಳಲ್ಲಿ ಖನಿಜ ಗಣಿಗಾರಿಕೆ ಗುತ್ತಿಗೆ ಪಡೆದಿತ್ತು. ಗುತ್ತಿಗೆ ಸಿಕ್ಕಮೇಲೆ ಇನ್ನೇನು? ಬಿಜೆಪಿ ದರ್ಬಾರ್, ಆರಂಭವಾಯಿತು. ಅನುಮತಿ ಇರುವ ಪ್ರದೇಶ ಮೀರಿ 37.30 ಎಕರೆ ಪ್ರದೇಶವನ್ನು ಒತ್ತುವರಿ ಮಾಡಿ ಅಕ್ರಮ ಗಣಿಗಾರಿಕೆ ನಡೆಸಲಾಗಿದೆ.

ರಾಜ್ಯದ ಬಿಜೆಪಿ ಸರ್ಕಾರದಲ್ಲಿ ಕಬ್ಬಿಣದ ಅದಿರು, ಖನಿಜಗಳನ್ನು ಯಾರು ಎಷ್ಟುತೋಡಿಕೊಂಡರೂ ಅದರಲ್ಲೇನು ತಪ್ಪಿಲ್ಲ. ಈ ಸಂಪನ್ಮೂಲಗಳನ್ನು ಎಷ್ಟೆಷ್ಟು ತೋಡಲಾಗಿದೆ ಎಂಬುದೇ ಈ ಸರ್ಕಾರದ 'ಅಭಿವೃದ್ದಿ' ಯ ಮಾನದಂಡವಲ್ಲವೇ?!

2006ರಲ್ಲಿ ಅನುಮತಿ ಗಳಿಸಿಕೊಂಡ ಕಂಪನಿಯ ಅಕ್ರಮಗಳು ಈ ಹಿಂದೆಯೇ ಗೊತ್ತಾಗಿ ಕಳೆದ ವರ್ಷವೇ ಈಲಾಖೆಯ ತನಿಖೆ ನಡೆದು ಕಂಪನಿ ಅಕ್ರಮ ಗಣಿಗಾರಿಕೆ ಮಾಡಿದೆ ಅಂತ ಸರ್ಟಿಫಿಕೇಟ್ ಸಿಕ್ಕಿದೆ.

ಆಹಾ ಮುಂದೇನಾಯಿತು?

ಕಂಪನಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕಾದ ಕಡೆ 'ಮೃದು' ಧೋರಣೆ ತೋರಿ ಕೇವಲ ಸಾಂಕೇತಿಕ ದಂಡ ವಿಧಿಸಲು ರಾಜ್ಯ ಬಿಜೆಪಿ ಸರ್ಕಾರ ನಿರ್ಧರಿಸಿದೆ ಮತ್ತು ಪ್ರಕರಣ ಹೊರಗೆ ಬಯಲಾಗದಂತೆಯೂ ಸರ್ಕಾರದ ಕಾಳಜಿ ವಹಿಸಿತು.

ಗಣಿ ಹಗರಣ ಪ್ರಕರಣಗಳ ಬಗೆಗೆ ಲೋಕಾಯುಕ್ತರಿಗೆ ಸಲ್ಲಿಸಲಾದ ವರದಿಯಲ್ಲಿಯೂ ಈ ಪ್ರಕರಣ ವಿವರ ನೀಡದೆ ಮುಚ್ಚಿ ಹಾಕುವ ಕಮಲ ಧೋರಣೆ... ಕ್ಷಮಿಸಿ 'ಕೋಮಲ ಧೋರಣೆ' ಯನ್ನೇ ಬಿಜೆಪಿ ಸರ್ಕಾರ ತೋರಿತು. ಈ ನಡುವೆ ಕಂಪನಿ ಅಕ್ರಮ ಖನಿಜ ತೋಡಿರುವ ಕಡೆ ಬೇರೆಡೆಯ ಕಲ್ಲು ಮಣ್ಣು ಇನ್ನೇನೋ ತುಂಬಿ ಗಣಿ ಹೊಂಡವನ್ನೇ ಮುಚ್ಚಿ ಹಾಕುವ ಸರ್ಕಸ್ಸು ನಡೆಸಿದೆ.

ಇಷ್ಟಾದ ಮೇಲೆ ಬಿಜೆಪಿ ಸರ್ಕಾರ ವಿಧಿಸಿದ 'ಕೋಮಲ ದಂಡ' ವನ್ನಾದರೂ ಯಾಕೆ ಕಟ್ಟಬೇಕು ಅನಿಸಿತೇನೋ ಪಾಪ ಸಚಿವರು, ಸಚಿವ ಪುತ್ರರತ್ನರಿಗೆ. 16.35 ಲಕ್ಷ ದಂಡವನ್ನು ತೆರಲಿಲ್ಲ.

ಈ ಪ್ರಕರಣ ಬೀದಿಗೆ ಬಿದ್ದಿದೆ. ಲೋಕಾಯುಕ್ತ ಈಗ ಈ ಅಕ್ರಮದ ತನಿಖೆ ಆರಂಭಿಸಿದೆ. ನೋಡೋಣ ಮುಂದೆ ಏನಾಗುತ್ತದೋ...?

○

ಕ್ರೂರಿಗಳು

ಬಂಡವಾಳ ಶಾಹಿಗಳಿಗೆ ಬೇಕಾದುದೇನು
ಹಣ ಮಾತ್ರ ಎಂಬುದನು ಬಲ್ಲೆಯಾ ನೀನು?
ಹೀಗಾಗಿ ಅಡಗಿಸಲು ಕಾರ್ಮಿಕರ ಸದ್ದ
ಯಾವುದೇ ಕ್ರೌರ್ಯಕ್ಕೆ ಈ ಜನರು ಸಿದ್ಧ

-ವಿಡಂಬಾರಿ

ಮೀಸಲಿರಿಸಬೇಕು ಎಂದು ಈ ಕಾನೂನು ಹೇಳುತ್ತದೆ. ಇದಕ್ಕೆ ಇಂತಹ ಪ್ರಭಾವಿ 'ಪಬ್ಲಿಕ್ ಸ್ಕೂಲು'ಗಳ ಒಂದು ಗುಂಪು ನ್ಯಾಯಾಲಯದಲ್ಲಿ ಸವಾಲು ಹಾಕಿದೆ. ಹರಕಲು ಬಟ್ಟೆಯ ಬಡಮಕ್ಕಳನ್ನು ಸೂಟುಬೂಟಿನ ಶ್ರೀಮಂತ ಮಕ್ಕಳ ಪಕ್ಕದಲ್ಲೇ ಕೂರ್ಲಿಸುವುದೇ? ಇದನ್ನು ಈ 'ಕುಲೀನ' ಶ್ರೀಮಂತ ಸ್ಕೂಲುಗಳಿಗೆ ಊಹಿಸಲೂ ಸಾಧ್ಯವಿಲ್ಲ. ಹೆಚ್ಚೆಂದರೆ, ಅವರಿಗೆಂದೇ ಪ್ರತ್ಯೇಕ 'ಮಧ್ಯಾಹ್ನದ ಶಿಫ್ಟ್' ಆರಂಭಿಸಬಹುದು, ಅವರ 'ಅರ್ಹತೆ'ಯನ್ನು ಪರೀಕ್ಷಿಸಿ ಸೇರಿಸಿಕೊಳ್ಳಬಹುದು ಎಂದು ಇನ್ನು ಕೆಲವು 'ಪಬ್ಲಿಕ್ ಸ್ಕೂಲು'ಗಳ ವಾದ. ಆದರೆ ಇದಕ್ಕೆ ಈ ಕಾನೂನಿನಲ್ಲಿ ಅವಕಾಶವಿಲ್ಲ. ಇಂತಹ ಮೀಸಲು ಸೀಟುಗಳಿಗೆ ಸರಕಾರ ಸಬ್ಸಿಡಿ ಕೊಡುತ್ತದೆ. ಆದರೆ ಈ ಮೊತ್ತ ಸರಕಾರ ಒಟ್ಟಾಗಿ ಶಿಕ್ಷಣಕ್ಕಾಗಿ ಮಾಡುವ ತಲಾ ಖರ್ಚಿನಷ್ಟೇ. ಇದು ಈ ಖಾಸಗಿ ಲಾಭಕೋರರಿಗೆ ಎಳ್ಳಷ್ಟೂ ಸಾಲದು.

'ನವ-ಉದಾರೀಕರಣ' ತತ್ವಕ್ಕೆ 'ಮಾನವೀಯ ಮುಖ' ತೊಡಿಸುವ ಯುಪಿಎ-2 ಸರಕಾರದ 'ಕಾಳಜಿ'ಗೊಂದು ಉದಾಹರಣೆ ಈ ಶಿಕ್ಷಣ ಹಕ್ಕು ಕಾನೂನಿನ ಜಾರಿಯ ಪರಿ.

★

ಪೆಟ್ರೋಲ್ ಬೆಲೆಯೇರಿಕೆ: ಮತ್ತೆ ಅದೇ ಕಟ್ಟುಕಥೆ

ಕಳೆದ ವಾರ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ಪ್ರಕ್ರಿಯೆ ಮುಗಿದ ದಿನವೇ ಪ್ರಕಟಿಸಿದ ಬೆಲೆಯೇರಿಕೆಯನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಹಣಕಾಸು ಮಂತ್ರಿಗಳು 'ಖಡಾಖಂಡಿತವಾಗಿ' ಹೇಳಿದ್ದಾರೆ. ಇದಕೆ ಸಮರ್ಥನೆಯಾಗಿ ಅದೇ 'ಸಬ್ಸಿಡಿ'ಯ ಹಳೆಯ ಕಟ್ಟುಕಥೆಯ ಪುರಾಣವನ್ನು ಮತ್ತೊಮ್ಮೆ ಬಿಚ್ಚಿದ್ದಾರೆ. ಕಳೆದ ವರ್ಷ ಸುಮಾರು ಒಂದು ಲಕ್ಷ ಕೋಟಿ ರೂ.ಗಳ 'ಸಬ್ಸಿಡಿ'ಯನ್ನು ಸರಕಾರ ತೆರಬೇಕಾಗಿ ಬಂದಿದೆ ಎಂದಿರುವ ಅವರು, ಈ ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಗಳಿಂದ ಸರಕಾರ ಗಿಟ್ಟಿಸಿದ ಹೆಚ್ಚಿನ ತೆರಿಗೆ-ಸುಂಕಗಳ ಪ್ರಮಾಣ ಎಷ್ಟು ಎಂದು ಹೇಳಿಲ್ಲ.

ಅಂತರ್‍ರಾಷ್ಟ್ರೀಯವಾಗಿ ಕಚ್ಚಾತೈಲ ಬೆಲೆಗಳು ಏರುತ್ತಿವೆಯೆಂಬುದು ಜನತೆಗೂ ತಿಳಿದಿದೆ. ಇದು ಕೂಡ ಯುಪಿಎ-2 ಸರಕಾರ ಅತ್ಯಂತ ವಿಧೇಯತೆಯಿಂದ, ಸಂತೋಷದಿಂದ ಅನುಸರಿಸುತ್ತಿರುವ ನವ-ಉದಾರವಾದಿ ಧೋರಣೆಗಳ ಫಲ ಎಂಬುದು ಒತ್ತಟ್ಟಿಗಿರಲಿ. ಈ ಸರಕಾರ ತನ್ನ ಬಜೆಟುಗಳಲ್ಲಿ ಶ್ರೀಮಂತ ವಿಭಾಗಗಳ ಮೇಲಿನ ತೆರಿಗೆ-ಸುಂಕಗಳನ್ನು ಕಡಿತ ಮಾಡಿ ಸ್ವೇಚ್ಛೆಯಿಂದ 'ಆದಾಯವನ್ನು ಬಿಟ್ಟುಕೊಡಲು' ಸಿದ್ಧವಿರುವಾಗ, ಹೆಚ್ಚಿದ ಪೆಟ್ರೋಲಿಯಂ ಬೆಲೆಗಳಿಂದ ಬರುವ ಹೆಚ್ಚಿನ ತೆರಿಗೆಗಳನ್ನಾದರೂ 'ಬಿಟ್ಟುಕೊಡಬೇಕು' ಎಂಬ ಬೇಡಿಕೆಯನ್ನು ಏಕೆ ಪರಿಗಣಿಸುತ್ತಿಲ್ಲ ಎಂಬುದು ಜನಸಾಮಾನ್ಯರ ಪ್ರಶ್ನೆ.

★

ಎಡವಟ್ಟು ತಂದ ಮುಜುಗರ

ಪಾಕಿಸ್ತಾನದ ನೆಲದಲ್ಲಿ ಅಮೆರಿಕಾ ಒಸಾಮ ಬಿನ್ ಲಾಡೆನನ್ನು ಮುಗಿಸಿ ಬಿಡಲು ನಡೆಸಿದಂತಹ ಕಾರ್ಯಾಚರಣೆಯನ್ನು ನಡೆಸುವ ಸಾಮರ್ಥ್ಯ ಭಾರತಕ್ಕೂ ಇದೆ ಎಂಬ ಭಾವನೆ ಮೂಡಿಸುವ ಹೇಳಿಕೆಗಳ ನಂತರ ಯುಪಿಎ-2 ಸರಕಾರ ಪಾಕಿಸ್ತಾನದಲ್ಲಿರುವ, ವಿಚಾರಣೆಗೆ ಬೇಕಾಗಿರುವ 'ಪಾತಕಿಗಳ ಪಟ್ಟಿ'ಯನ್ನು ಪಾಕಿಸ್ತಾನ ಸರಕಾರಕ್ಕೆ ಸಲ್ಲಿಸಿದೆ. ಅದರಲ್ಲಿ ಇಬ್ಬರು ಆಗಲೇ ಭಾರತದ ಜೈಲುಗಳಲ್ಲಿಯೇ ಇದ್ದಾರೆ ಎಂಬ ಸಂಗತಿ ಭಾರತ ಸರಕಾರಕ್ಕೆ ಬಹಳಷ್ಟು ಮುಜುಗರ ತಂದಿದೆ.

ಇದು ಮುಜುಗರ ತಂದ ಸಂಗತಿ ಎಂದು ಯುಪಿಎ-2 ಗೃಹಮಂತ್ರಿಗಳು ಕೂಡ ಒಪ್ಪಿಕೊಳ್ಳಬೇಕಾಗಿ ಬಂದಿದೆ. ಜತೆಗೆ ಇದಕ್ಕೆ ಯಾರ ಬಳಿಯೂ ಕ್ಷಮೆ ಕೇಳುವ ಅಗತ್ಯವಿಲ್ಲ ಎಂದಿರುವ ಅವರು, ಇದು ಭಾರತದ ಭದ್ರತೆಗೆ ಸಂಬಂಧಪಟ್ಟ ಸಂಸ್ಥೆಗಳಿಗೆ ಒಂದು ಎಚ್ಚರಿಕೆಯ ಕರೆ ಎಂದೂ ಹೇಳಿದ್ದಾರೆ.

ಗೃಹ ಸಚಿವಾಲಯದ ಅಡಿಯಿರುವ ಸಿಬಿಐನ ಎಡವಟ್ಟು ಇಷ್ಟೇ ಅಲ್ಲ. ಪುರುಲಿಯ ಶಸ್ತ್ರಾಸ್ತ್ರ ಉದುರಿಕೆ ಕೇಸಿನ ಆಪಾದಿತ ಕಿಮ್ ಡೇವಿಯನ್ನು ವಿಚಾರಣೆಗೆ ಭಾರತಕ್ಕೆ ಒಪ್ಪಿಸಬೇಕೆಂಬ ಕೋರಿಕೆಯಲ್ಲೂ ಇಂತಹುದೇ ಎಡವಟ್ಟು ಕಾಣಬಂದಿದೆ. ಡೆನ್ಮಾರ್ಕಿನ ಕೋರ್ಟಿನಲ್ಲಿ ಕಳೆದ ವಾರ ನಡೆದ ಇದರ ವಿಚಾರಣೆಯ ಸಂದರ್ಭದಲ್ಲಿ ಸಲ್ಲಿಸಿದ್ದ ವಾರಂಟಿನ ಕಾಲಾವಧಿ ಆದಾಗಲೇ ಮೀರಿ ಹೋಗಿತ್ತು. ಇದರಿಂದ ಭಾರತದ ಪ್ರತಿನಿಧಿಗಳು ಡೆನ್ಮಾರ್ಕಿನ ನ್ಯಾಯಾಲಯದಲ್ಲಿ ತಲೆ ತಗ್ಗಿಸುವಂತಾಗಿದೆ. ಇದು ಮುಜುಗರದ ಸಂಗತಿ ಎಂದು ಗೃಹಮಂತ್ರಿಗಳು ಹೇಳಿಲ್ಲ. ಹಾಗಿದ್ದರೆ ಈ ಪ್ರಕರಣದಲ್ಲಿ ಉನ್ನತ ವಲಯದ ವ್ಯಕ್ತಿಗಳಿಗೆ ಏನನ್ನಾದರೂ ಮರೆಮಾಚುವ ಅಗತ್ಯ ಬಂದಿದೆಯೇ ಎಂಬ ಸಂದೇಹ ಬಲಗೊಳ್ಳುತ್ತದೆ. ಇತ್ತೀಚೆಗಷ್ಟೇ ಈ ಕಿಮ್ ಡೆವಿ ಅಲಿಯಾಸ್ ನೀಲ್ಸ್ ಹೋಲ್ಕ್ ತಾನು ಭಾರತದಿಂದ ಹೇಗೆ ಪರಾರಿಯಾದೆ ಎಂದು ಹೊರಗೆಡಹಿದ್ದರೂ ಸಿಬಿಐ ಆತ ಹೆಸರಿಸಿದ ವ್ಯಕ್ತಿಗಳ ಪಾತ್ರದ ವಿಚಾರಣೆ ನಡೆಸಲು ಮುಂದಾಗಿಲ್ಲ.

ಈ ಹಿನ್ನೆಲೆಯಲ್ಲಿ ಪುರುಲಿಯದ ಸಮಸ್ತ ಪ್ರಕರಣದ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ. 'ಪಾತಕಿಗಳ ಪಟ್ಟಿ'ಯಲ್ಲಿ ಎಡವಟ್ಟು ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು, ದೇಶದ ಭದ್ರತೆಯ ವಿಷಯಗಳನ್ನು ಈ ರೀತಿ ನಿರ್ಲಕ್ಷ್ಯದಿಂದ ಕಾಣುವುದಿಲ್ಲ ಎಂಬ ಭರವಸೆಯನ್ನು ಯುಪಿಎ-2 ಸರಕಾರ ದೇಶಕ್ಕೆ ಕೊಡಬೇಕಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

○

ಕೂಗುಮಾರಿ ಬಿಜೆಪಿ....

ಪುಟ 9 ರಿಂದ

ಅಗತ್ಯಕ್ಕಿಂತ ಹೆಚ್ಚು ಸಂಖ್ಯೆಯ ಬಹುಮತ ಇಟ್ಟುಕೊಳ್ಳಲು ಯತ್ನಿಸಿದರು. ಇದರಿಂದಾಗಿ ಪ್ರತಿ ಆರು ತಿಂಗಳಿಗೊಮ್ಮೆ ಒಂದಲ್ಲೊಂದು ಉಪಚುನಾವಣೆಯನ್ನು ಜನತೆ ನೋಡಬೇಕಾಯಿತು. ಚನ್ನಪಟ್ಟಣ ಕ್ಷೇತ್ರದಲ್ಲಂತು 3 ವರ್ಷದಲ್ಲಿ ಮೂರು ಚುನಾವಣೆ ನಡೆದಿವೆ.

ಸುಪ್ರೀಂ ಖಂಡನೆಗೆ ಸ್ಪೀಕರ್: ಇದೇ ಪಕ್ಷಾಂತರ ನಿಷೇಧ ಕಾನೂನು ಮತ್ತು 1986ರ ಕರ್ನಾಟಕ ವಿಧಾನಸಭಾ (ಪಕ್ಷಾಂತರ ಆಧರಿಸಿ ಸದಸ್ಯರ ಅನರ್ಹತೆ) ನಿಯಮಾವಳಿಗಳನ್ನು ಉಲ್ಲಂಘಿಸಿ ಸಭಾಧ್ಯಕ್ಷರು ತನ್ನ ಅಧಿಕಾರ ಮೀರಿ 11 ಬಿಜೆಪಿ ಶಾಸಕರನ್ನು ಅನರ್ಹಗೊಳಿಸಿದ್ದಾರೆ ಎಂದು ಸುಪ್ರೀಂಕೋರ್ಟ್ ಮೇ 13 ರಂದು ತನ್ನ ತೀರ್ಪಿನಲ್ಲಿ ಹೇಳಿದೆ. 2010 ಅಕ್ಟೋಬರ್ 6 ರಂದು ಸಿಎಂ ಯಡಿಯೂರಪ್ಪ ಸಲ್ಲಿಸಿದ ಅರ್ಜಿಯ ಮೇರೆಗೆ 7 ರಂದು ನೋಟೀಸ್‌ಗಳನ್ನು ಶಾಸಕರ ಕೊಠಡಿ ಬಾಗಿಲಿಗೆ ಅಂಟಿಸಿ, 10ರೊಳಗೆ ಕಾರಣ ತಿಳಿಸಲು ಹೇಳಿ ಅಂದು ತಮ್ಮ ಮುಂದೆ ಹಾಜರಾಗಲು ನೀಡಿದ್ದ ಸಂಜೆ 5 ರ ವೇಳೆಯನ್ನು ಏಕಾಏಕಿ ಮಧ್ಯಾಹ್ನ 3 ಕ್ಕೆ ಹಿಂದೂಡಿಕೊಂಡು, ಹಾಜರಾಗಲು ಬಂದ ಶಾಸಕರ ವಕೀಲರಿಗೆ ಅವಾಗ ಅರ್ಜಿ ಮತ್ತು ಅದಕ್ಕೆ ಆಧಾರವಾದ ದಾಖಲೆಗಳನ್ನು ನೀಡಿ, ಅಂದೆ ಅನರ್ಹಗೊಳಿಸಿರುವ ಸಭಾಧ್ಯಕ್ಷರ ವರ್ತನೆಯನ್ನು ಸುಪ್ರೀಂಕೋರ್ಟ್ ಖಂಡಿಸಿದೆ.

ಸ್ಪೀಕರ್: ಪ್ರಖಾಂಡ ಪಾಂಡಿತ್ಯ: ಸಭಾಧ್ಯಕ್ಷರು ನ್ಯಾಯಾಧೀಕರಣಗಳ ನ್ಯಾಯಾಧೀಶರಿದ್ದಂತೆ, ಅಂತಹವರು ನಿಯಮದಂತೆ 7 ದಿನಗಳ ನೋಟೀಸ್ ನೀಡದೆ, ಶಾಸಕರ ಉತ್ತರಕ್ಕೆ ಕಾಲಾವಕಾಶ ನೀಡದೇ, ಸಹಜ ನ್ಯಾಯದ ನೀತಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಶಾಸಕರನ್ನು ಅನರ್ಹಗೊಳಿಸಲು ಅವರ ಆದೇಶದಲ್ಲಿ ದೇಶದ ಸುಪ್ರೀಂಕೋರ್ಟ್ ವಿವಿಧ ರಾಜ್ಯಗಳ ಹೈಕೋರ್ಟ್ ಮಾತ್ರವಲ್ಲ, ಅಂತರರಾಷ್ಟ್ರೀಯ ಮಟ್ಟದ ವಿವಿಧ ದೇಶಗಳ ನ್ಯಾಯಾಲಯಗಳ ತೀರ್ಪುಗಳನ್ನು ಉಲ್ಲೇಖಿಸಿ, ಆಧಾರವಾಗಿಸಿಕೊಂಡಿದ್ದಾರೆ. 2010 ಅಕ್ಟೋಬರ್ 10 ರಂದು ಮಧ್ಯಾಹ್ನ 3ಕ್ಕೆ ವಿಚಾರಣೆ ನಡೆಸಿ, ಅಂದೇ ಇಂತಹ ವಿಸ್ತೃತ ಆದೇಶ ನೀಡಿರುವುದಕ್ಕೆ ಸುಪ್ರೀಂಕೋರ್ಟ್ ಎಂತಹ ಪಾಂಡಿತ್ಯ ಇವರದು ಎಂಬಂತೆ ತನ್ನ ಸೋಜಿಗವನ್ನು ವ್ಯಕ್ತಪಡಿಸಿದೆ.

ಮಾತ್ರವಲ್ಲ ಮುಂದುವರಿದು ಈ ಹಿಂದೆ ರವಿನಾಯಕ್ ಮತ್ತು ಭಾರತ ಸರ್ಕಾರ, ಜಗಜಿತ್ ಸಿಂಗ್ ಮತ್ತು ಹರಿಯಾಣ ಸರ್ಕಾರ, ರಾಜೇಂದ್ರಸಿಂಗ್ ರಾಣಾ ಮತ್ತಿತರರ ಪ್ರಕರಣ, ಕಹೋಟ ಹೋಲನ್ ಮುಂತಾದ ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್ ತೀರ್ಪುಗಳಲ್ಲಿನ ತಮಗೆ ಅನುಕೂಲಕರವಾದ ವ್ಯಾಖ್ಯಾನಗಳನ್ನು ಆಧರಿಸಿ ತೀರ್ಪು ನೀಡಿದ್ದಾರೆ ಎಂದಿದೆ.

ಬಿಸಿ ಆತುರ..ಯಾರಿಗಾಗಿ ಪ್ರಶ್ನೆ: ರಾಜ್ಯಪಾಲರು ನೀಡಿದ್ದ ವಿಶ್ವಾಸಮತ ಯಾಚನೆಗಾಗಿನ ಗಡುವು ಮುಖ್ಯಮಂತ್ರಿಗಳಿಗಿಂತ ಸ್ಪೀಕರ್ ಅವರನ್ನು ಹೆಚ್ಚು ಕಾಡಿರುವಂತಿದೆ. ಹಾಗಾಗಿ ಸುಡುವುದನ್ನು ಬಾಯಿಗೆ ಹಾಕಿಕೊಂಡಾಗ ತೋರುವ ಆತುರದಂತೆ ಸಭಾಧ್ಯಕ್ಷರು, ತಮ್ಮ ಸ್ಥಾನದ ಗೌರವವನ್ನು ಕಡೆಗಣಿಸಿ ಬಿಸಿ ಆತುರದಲ್ಲಿ ಶಾಸಕರನ್ನು ಅನರ್ಹಗೊಳಿಸಿದ್ದಾರೆ ಎಂದಿದೆ ಸುಪ್ರೀಂಕೋರ್ಟ್.

ಪಕ್ಷದ ಹಂಗಿನಲ್ಲಿ: ಮತ್ತೆ ಮುಂದುವರಿದು ಪಕ್ಷಾಂತರ ನಿಷೇಧ ಕಾನೂನಿನ ಅಡಿ ಸಂವಿಧಾನವು ಸಭಾಧ್ಯಕ್ಷರಿಗೆ ಸಂರಕ್ಷಣೆ ನೀಡಿ, ಅದರ ವ್ಯಾಪ್ತಿಯಿಂದ ಹೊರಗುಳಿಸುವ ಮೂಲಕ ಯಾವುದೇ ಪಕ್ಷದ ಹಂಗಿಲ್ಲದೆ ಪಕ್ಷಾತೀತವಾಗಿ ನಡೆದುಕೊಳ್ಳಲು ಅನುವುಗೊಳಿಸಿದೆ. ಆದರೆ ಶಾಸಕರನ್ನು ಅನರ್ಹಗೊಳಿಸುವಾಗ ಅಗತ್ಯ ಸಾಕ್ಷಿ, ಪುರಾವೆ ಇಲ್ಲದ ಮುಖ್ಯಮಂತ್ರಿಯವರ ಅರ್ಜಿ, ಬಿಜೆಪಿ ಅಧ್ಯಕ್ಷರ ಪ್ರಮಾಣಪತ್ರ ಆಧರಿಸಿ ಆದೇಶಿಸಿರುವುದು ಸರಿಯಲ್ಲ ಎಂದಿದೆ ತೀರ್ಪು. ಭಿನ್ನಮತವನ್ನೇ ಪಕ್ಷಾಂತರ ಎಂದು ಪರಿಭಾವಿಸುವುದು ಸರಿಯಲ್ಲ. ತಮ್ಮ ಪಕ್ಷಕ್ಕೆ ಮತ ನೀಡಬಲ್ಲ ಇಬ್ಬರು ಶಾಸಕರು ರೇಣುಕಾಚಾರ್ಯ ಮತ್ತು ನರಸಿಂಹನಾಯಕ್ ರವರನ್ನು ಅನರ್ಹಗೊಳಿಸಲು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ, ಅವರು ವಿಶ್ವಾಸಮತ ಯಾಚನೆಯಲ್ಲಿ ಮತ ಚಲಾಯಿಸಬಹುದು ಎಂದು ಆದೇಶದಲ್ಲಿಯೇ ಬರೆದಿರುವ ಸಭಾಧ್ಯಕ್ಷರು, ಇತರರನ್ನು ಅನರ್ಹಗೊಳಿಸುವಾಗ ಬಳಸಿರುವ ಮಾನದಂಡ ಪಕ್ಷಾತೀತವಾಗಿಲ್ಲ. ಮುಖ್ಯಮಂತ್ರಿಗಳ ಮತ್ತು ತಾನು ಸೇರಿದ್ದ ಪಕ್ಷದ ಹಿತವೇ ಪ್ರಧಾನವಾಗಿ ಸಭಾಧ್ಯಕ್ಷರನ್ನು ಕಾಡಿರುವಂತಿದೆ ಎಂದಿದೆ ಸುಪ್ರೀಂ ತೀರ್ಪು.

ಸಭಾಧ್ಯಕ್ಷರು ಹಾಗೂ ಪರೋಕ್ಷವಾಗಿ ಮುಖ್ಯಮಂತ್ರಿ ಮತ್ತು ಬಿಜೆಪಿ ರಾಜ್ಯಾಧ್ಯಕ್ಷರು ಇಡೀ ಪ್ರಕರಣದಲ್ಲಿ ನಡೆದುಕೊಂಡಿರುವ ರೀತಿಯ ಬಗ್ಗೆ ಸುಪ್ರೀಂಕೋರ್ಟ್ ತೀವ್ರವಾಗಿ ಟೀಕಿಸಿದ್ದರೂ, ಸಹಾ, ಬಿಜೆಪಿ ಪಕ್ಷ, ಮುಖ್ಯಮಂತ್ರಿ ಮತ್ತು ಸಭಾಧ್ಯಕ್ಷರು ತಮ್ಮ ಕ್ರಮಗಳನ್ನು ಸಮರ್ಥಿಸಿಕೊಳ್ಳುತ್ತಿರುವ ರೀತಿ ಮಾತ್ರ ಆಘಾತಕಾರಿ.

ಪ್ರಜಾಪ್ರಭುತ್ವ, ಸಂವಿಧಾನದ ಮೌಲ್ಯಗಳ ಬಗ್ಗೆ ಉದ್ದುದ್ದ ಬೊಬ್ಬೆ ಹೊಡೆಯುವ, ಬಿಜೆಪಿ ಮತ್ತದರ ನಾಯಕರು ಅದೆಷ್ಟು ಭಾರಿ ಪಶ್ಚಿಮಬಂಗಾಳದ ಎಡರಂಗ ಸರ್ಕಾರವನ್ನು ವಜಾಗೊಳಿಸಲು, ರಾಷ್ಟ್ರಪತಿ ಆಡಳಿತ ಹೇರಲು ಒತ್ತಾಯಿಸಿದ್ದರೋ ಅವರಿಗೆ ಗೊತ್ತಿರಲಿಕ್ಕಿಲ್ಲ. ಆದರೆ ಕೇಂದ್ರ ಸರ್ಕಾರ ರಾಜ್ಯಪಾಲರ ಶಿಫಾರಸ್ಸನ್ನು ತಿರಸ್ಕರಿಸಲು ರಾಜ್ಯಸಭೆಯಲ್ಲಿ ಬಹುಮತ ಪಡೆಯಲು ಅಡ್ಡಿಯಾಗಬಹುದಿದ್ದ (ಪರಿಚ್ಛೇದ 356ರ ದುರ್ಬಳಕೆ ಆಧರಿಸಿದ) ಎಡರಂಗದ ಪ್ರತಿನಿಧಿಗಳ ವಿರೋಧವು ಸಹಾ ಪ್ರಧಾನ ಪಾತ್ರವಹಿಸಿದೆ ಎಂಬುದನ್ನು ಮಾತ್ರ ಅವರು ನೆನಪಿನಲ್ಲಿ ಇಟ್ಟುಕೊಳ್ಳಲೇಬೇಕು.

ರಾಜೀನಾಮೆ ಸಲ್ಲಿಸಬೇಕು

ಬಿಜೆಪಿ ಪಕ್ಷವು ಪ್ರಜಾಪ್ರಭುತ್ವಕ್ಕೆ ಬದ್ಧತೆ ಮತ್ತು ಸಂವಿಧಾನಕ್ಕೆ, ನ್ಯಾಯಾಲಯಕ್ಕೆ ಗೌರವ ಎಂಬುದನ್ನು ಕನಿಷ್ಠ ಪ್ರಮಾಣದಲ್ಲಿ ಉಳಿಸಿಕೊಂಡಿದ್ದಲ್ಲಿ ಸಭಾಧ್ಯಕ್ಷರಾದ ಬೋಪಯ್ಯ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪನವರ ರಾಜೀನಾಮೆಯನ್ನು ಕೂಡಲೇ ಪಡೆಯಬೇಕು.

ಜನಾದೇಶ ಇಲ್ಲದಿದ್ದರೂ ಜನಾದೇಶ ತಯಾರಿಸಲು ಪ್ರಜಾಪ್ರಭುತ್ವ ವಿರೋಧಿ "ಆಪರೇಷನ್ ಕಮಲ" ನಡೆಸಿ, ಸ್ವಜನ ಪಕ್ಷಪಾತ, ಭ್ರಷ್ಟಾಚಾರದ ವಿರುದ್ಧ ನಿಂತರು ಎಂಬುದಕ್ಕಾಗಿ ತನ್ನದೆ ಪಕ್ಷದ ಶಾಸಕರನ್ನು ಅನರ್ಹಗೊಳಿಸಿದ ಕ್ರಮ; ಬೆಂಬಲ ನೀಡಿದ ಪಕ್ಷೇತರರನ್ನು ಅನರ್ಹಗೊಳಿಸಿದ ಅಕ್ರಮ; ಏನಾದರೂ ಮಾಡಿ ಅಧಿಕಾರದಲ್ಲಿ ಉಳಿಯಬೇಕೆಂಬ ಅವರ ಬಯಕೆ, ಅದಕ್ಕಾಗಿ ಅವರು ನಡೆಸಿರುವ ಕೂಗು ಮಾರಿ ಯತ್ನಗಳು ರಾಜ್ಯದಲ್ಲಿನ ಪ್ರಜಾಪ್ರಭುತ್ವವನ್ನು ಹೊಲಸು ಮಾಡಿದೆ. ಈ ಕೂಗುಮಾರಿ ಬಿಜೆಪಿ ಅಧಿಕಾರದಲ್ಲಿ ಇರುವವರೆಗೆ ಪ್ರಜಾಸತ್ತೆ ಮಾತ್ರ ಅಪಾಯದಲ್ಲಿಯೇ ಇರಲಿದೆ.

ಆಧುನಿಕ ಭಾರತ.....

ಪುಟ 8 ರಿಂದ

ಅಧಿಕಾರ ವಿಕೇಂದ್ರೀಕರಣದ ಮೂಲಕ ತಳಮಟ್ಟಕ್ಕೆ ಅಧಿಕಾರವನ್ನು ಕೊಂಡೊಯ್ದದ್ದು, ಈ ದಶಕದ ನಂತರ ಸಂವಿಧಾನಕ್ಕೆ ಪಂಚಾಯಿತಿ ರಾಜ್ ತಿದ್ದುಪಡಿ ಮಾಡಿದ್ದು, ಇದು ನಮ್ಮ ಪ್ರಜಾಪ್ರಭುತ್ವದ ಪ್ರಮುಖ ವಾಹಿನಿಗೆ ಇದುವರೆಗೂ ಆಸ್ತಿ ಹೀನರಾಗಿ ತುಳಿತಕ್ಕೊಳಗಾದ ಜನತೆಯನ್ನು ತರುವಲ್ಲಿ ಸಫಲವಾಯಿತು.


ಇವತ್ತಿನ ಪರಿಸ್ಥಿತಿಯಲ್ಲಿ ನವಉದಾರವಾದಿ ಸುಧಾರಣೆಗಳೊಂದಿಗೆ ಒಂದರಿಂದ ಮತ್ತೊಂದು ಬೇರ್ಪಟ್ಟಿರುವ ಎರಡು ಭಾರತಗಳ ಸೃಷ್ಟಿಯನ್ನು ಮುಂದುವರೆಸುತ್ತಿವೆ. ಮತ್ತು ಒಂದು ರಾಷ್ಟ್ರವಾಗಿ ಮತ್ತು ಜನತೆಯ ನೈಜ ಶಕ್ತಿಯಾಗಿ ಭಾರತವನ್ನು ದೊಡ್ಡ ಭ್ರಷ್ಟಾಚಾರ ಕೊಳ್ಳೆ ಹೊಡೆಯುತ್ತಿದ್ದು, ಎಡರಂಗ ಮಾತ್ರವೆ ನಿರಂತರವಾಗಿ, ತಡೆಗೋಡೆಯಾಗಿ ಅಡ್ಡ ನಿಂತಿದೆ. ಎಡರಂಗವು ದೀರ್ಘ ಪಯಣವನ್ನು ಕ್ರಮಿಸಿದೆ. ಮತ್ತು ಈ ಪಯಣದ ಹಾದಿಯಲ್ಲಿ ತಪ್ಪುಗಳೂ ಸಂಭವಿಸಿವೆ. ಇವುಗಳನ್ನು ಗುರುತಿಸಿ, ಸರಿಪಡಿಸಿ ಮತ್ತೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಇದು ಎಡರಂಗದ ಧ್ಯೇಯವಾಗಿ ಮುಂದುವರೆಯುತ್ತದೆ. ಇದೊಂದು ತೀವ್ರ ಯುದ್ಧವಾಗಿದ್ದು, ಬಂಗಾಳದಲ್ಲಿ ವರ್ಗ ಹೋರಾಟವಾಗಿದ್ದು, ಚುನಾವಣಾ ಫಲಿತಾಂಶ ಬಂದ 48 ಗಂಟೆಗಳಲ್ಲಿ ಈಗಾಗಲೇ ನಮ್ಮ ಮೂವರು ಸಂಗಾತಿಗಳನ್ನು ಬಲಿ ತೆಗೆದುಕೊಂಡಿದೆ. ಒಂದು ನಾಗರಿಕತೆ ಮತ್ತು ಜನತೆಯಾಗಿ ನಮ್ಮ ನೈಜ ಶಕ್ತಿಯನ್ನು ಕಂಡುಕೊಳ್ಳುವಲ್ಲಿ ಸಹಕಾರಿಯಾಗುವಂತಹ ಒಂದು ಉತ್ತಮ ಭಾರತದ ಸೃಷ್ಟಿಗಾಗಿ ಇದು ಕಠಿಣ ಮತ್ತು ದೀರ್ಘ ಪಯಣವಾಗಿದೆ. ಎಡರಂಗ ಇಲ್ಲದೆ ಪೂರ್ಣಗೊಳಿಸಲಾಗದ ಪಯಣ ಇದಾಗಿದೆ.

ಹಿರಿಯ ಕಮ್ಯೂನಿಸ್ಟ್ ಮುಖಂಡ ಎಂ.ಹೆಚ್.ಕೃಷ್ಣಪ್ಪನವರು ಇನ್ನಿಲ್ಲ

'ಎಂ.ಹೆಚ್' ಎಂದೇ ಕರೆಯಲ್ಪಡುತ್ತಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಕಮ್ಯುನಿಸ್ಟ್ ಮುಖಂಡರಾದ ಎಂ.ಹೆಚ್.ಕೃಷ್ಣಪ್ಪನವರು ಮೇ 16,2011 ಸೋಮವಾರ ಮಂಗಳೂರಿನಲ್ಲಿ ಅಲ್ಪ ಅಸ್ವಸ್ಥತೆಯ ಬಳಿಕ ಕೊನೆಯುಸಿರೆಳೆದರು. ಅವರಿಗೆ 88 ವಯಸ್ಸಾಗಿತ್ತು.

'ರಾಯಲ್ ಇಂಡಿಯನ್ ನೇವಿ'ಯಲ್ಲಿ ಸೇವೆ ಸಲ್ಲಿಸುತ್ತಿದ್ದ ಎಂ.ಹೆಚ್. ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾಗಿ ಧುಮುಕಿದರು. ಸ್ವಾತಂತ್ರ್ಯ ನಂತರದಲ್ಲಿಯೂ ಕರಾವಳಿಯಲ್ಲಿ ರೈತರನ್ನು ಸಂಘಟಿಸಲು ಸಕ್ರಿಯ ನೇತೃತ್ವ ವಹಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಬಲವರ್ಧನೆಗೆ ಶ್ರಮಿಸಿದರು. ಭೂ ಸುಧಾರಣೆ ಕಾಯ್ದೆ ಸೂಕ್ತ ಜಾರಿಗಾಗಿ 'ಅನ್ಯಾಯ' ದಬ್ಬಾಳಿಕೆಗಳು ರೈತರ ಮೇಲೆ ಆದಾಗ ಭೂಮಾಲೀಕರ ದಾಳಿಗಳ ವಿರುದ್ಧ ಹೋರಾಟ ನಡೆಸಿದವರು. ಮುಂದೆ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಯಾಗಿಯೂ (ತುರ್ತು ಸ್ಥಿತಿಯಲ್ಲಿ 1978 ರವರೆಗೆ) ಕಾರ್ಯ ನಿರ್ವಹಿಸಿದ್ದರು. ಅವರು ಉತ್ತಮ ಲೇಖಕ, ಅನುವಾದಕರೂ ಆಗಿದ್ದರು. 1978ರ ನಂತರ ಅವರ ಧೋರಣೆ ಭಿನ್ನವಾಯಿತು.

ಇವರಿಗೆ ನಾಲ್ವರು ಪುತ್ರರು, ಮೂವರು ಪುತ್ರಿಯರಿದ್ದು, AILU ಖ್ಯಾತ ವಕೀಲರಾದ ಯಶವಂತ ಮರೋಳಿ ಅವರ ಮಕ್ಕಳಲ್ಲೊಬ್ಬರು. ಅವರ ನಿಧನಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಶ್ರದ್ಧಾಂಜಲಿ ಸಲ್ಲಿಸಿದೆ. ಹಾಗೂ ಮೇ 20 ರಂದು ನಡೆದ ಸಿಪಿಐ(ಎಂ) ರಾಜ್ಯ ಸಮಿತಿ ಸಭೆ ಶ್ರದ್ಧಾಂಜಲಿ ಸಲ್ಲಿಸಿತು. ಹಾಗೂ ನಿಧನರಾದಂದು ಸಿಪಿಐ(ಎಂ)ನ ಹಿರಿಯ ನಾಯಕರಾದ ಕೆ.ಆರ್.ಶ್ರೀಯಾನ್, ಬಿ.ಮಾಧವ ಮುಂತಾದ ಸಂಗಾತಿಗಳು ಭಾಗವಹಿಸಿ ಅಂತಿಮ ಗೌರವ ಸಲ್ಲಿಸಿದರು.



ಮಂಗಳೂರಿನಲ್ಲಿ ಬಿರುಸಿನ ಹೋರಾಟಗಳು.....

ಪುಟ 6 ರಿಂದ

ರದ್ದುಪಡಿಸಿರುವುದು ಬೆಳಕಿಗೆ ಬಂತು. ಯಾವುದೇ ಸೂಚನೆ ನೀಡದೆ ಸಭೆ ರದ್ದುಪಡಿಸಿದ್ದರಿಂದ ಆಕ್ರೋಶಗೊಂಡ ಬೀದಿಬದಿ ವ್ಯಾಪಾರಿಗಳು ಸಂಘದ ಮುಖಂಡರ ನೇತೃತ್ವದಲ್ಲಿ ಧರಣಿ ನಡೆಸಿದರು. ಮೇ 26 ರಂದು ಮೇಯರ್ ಮತ್ತು ಆಯುಕ್ತರು ಸಭೆ ನಡೆಸುವರು ಎಂದು ಜಂಟಿ ಆಯುಕ್ತರು ತಿಳಿಸಿದ ಮೇರೆಗೆ ಧರಣಿಯನ್ನು ಕೈಬಿಡಲಾಯಿತು.

'ಟೈಗರ್' ಕಾರ್ಯಾಚರಣೆಯನ್ನು ಮಂಗಳೂರು ಮಹಾನಗರ ಪಾಲಿಕೆ ಮುಂದುವರೆಸಿದ್ದು, ಅದಕ್ಕೆ ಸಡ್ಡುಹೊಡೆದು ಹೋರಾಡುವ ಛಲವನ್ನು ಬೀದಿ ಬದಿ ವ್ಯಾಪಾರಸ್ಥರು ಸಿಐಟಿಯು ನೇತೃತ್ವದಲ್ಲಿ ಪ್ರಕಟಪಡಿಸುತ್ತಿದ್ದಾರೆ.

★

ಪೆಟ್ರೋಲ್ ಬೆಲೆಯೇರಿಕೆ ಖಂಡಿಸಿ ಪ್ರತಿಭಟನೆಗಳು:

ಕಾಂಗ್ರೆಸ್ ನೇತೃತ್ವದ ಕೇಂದ್ರ ಯುಪಿಎ ಸರ್ಕಾರ ಪೆಟ್ರೋಲ್ ಬೆಲೆ ಏರಿಸಿರುವುದನ್ನು ಖಂಡಿಸಿ ಸಿಪಿಐ ಮತ್ತು ಸಿಪಿಐ(ಎಂ) ಜಿಲ್ಲಾ ಘಟಕಗಳು ಜಂಟಿಯಾಗಿ ಮೇ 17 ರಂದು ದ.ಕ. ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಿದವು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ ದ.ಕ. ಜಿಲ್ಲಾ ಕಾರ್ಯದರ್ಶಿ ಪಿ.ಸಂಜೀವ ಮತ್ತು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಮಾತನಾಡಿದರು. ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಮುಖಂಡರಾದ ಜೆ.ಬಾಲಕೃಷ್ಣಶೆಟ್ಟಿ, ಕೆ.ಯಾದವಶೆಟ್ಟಿ, ಯು.ಬಿ.ಲೋಕಯ್ಯ, ಕೃಷ್ಣಪ್ಪ ಸಾಲಿಯಾನಾ, ಸುನೀಲ್‌ಕುಮಾರ್ ಬಜಾಲ್, ಎಸ್.ಎಂ. ಶಿವಕುಮಾರ್, ರಾಮಣ್ಣ ವಿಟ್ಲ, ಎಲ್.ಟಿ.ಸುವರ್ಣ ಮೊದಲಾದವರು ಹಾಜರಿದ್ದರು. ಸಿಪಿಐ(ಎಂ) ಮುಖಂಡರಾದ ವಸಂತ ಆಚಾರಿ ಸ್ವಾಗತಿಸಿದರು. ಸಿಪಿಐ(ಎಂ) ಶೇಖರ್ ವಂದಿಸಿದರು.

ಬೆಳ್ತಂಗಡಿ : ಬೆಳ್ತಂಗಡಿ ತಾಲ್ಲೂಕು ಕಛೇರಿ ಎದುರು ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯರಾದ ಬಿ.ಎಂ.ಭಟ್ ಮಾತನಾಡಿದರು.

ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಬೆಳ್ತಂಗಡಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಎಸ್.ಎಂ.ಶಿವಕುಮಾರ್, ಶೇಖರ್ ಎಲ್. ವಸಂತ ನಡ, ನಬಿಸಾ ಮೊದಲಾದವರು ವಹಿಸಿದ್ದರು.

★

ನಿರ್ವಸಿತ ಕೊರಗರಿಂದ ಧರಣಿ

ಸುರತ್ಕಲ್-ಬಿ.ಸಿ.ರೋಡ್ ಚತುಷ್ಪಥ ರಸ್ತೆ ನಿರ್ಮಾಣಕ್ಕಾಗಿ ಮಂಗಳೂರು ನಗರದ ಸಂತೂರು ಹೈ ಪಾಯಿಂಟ್ ಜಂಕ್ಷನ್‌ನಲ್ಲಿ ಮನೆ ಕಳೆದುಕೊಂಡ ಆದಿವಾಸಿ ಕೊರಗ ಸಮುದಾಯದ 6 ಕುಟುಂಬದ ನಿರ್ವಸಿತರು ಸಿಪಿಐ(ಎಂ)ನ ಆದಿವಾಸಿ ಹಕ್ಕು ಸಮನ್ವಯ ಸಮಿತಿಯ ನೇತೃತ್ವದಲ್ಲಿ ಮೇ 23 ರಂದು ಬೈಕಂಪಾಡಿಯ ವಿಶೇಷ ಭೂ ಸ್ವಾಧೀನಾಧಿಕಾರಿಯ ಕಛೇರಿ ಮುಂದೆ ಧರಣಿ ನಡೆಸಿದರು.

ಇಲ್ಲಿನ ಕೊರಗ ಸಮುದಾಯದ ಕುಟುಂಬಸ್ಥರನ್ನು ಒಕ್ಕಲೆಬ್ಬಿಸಿ ಬಾಡಿಗೆ ಮನೆಯಲ್ಲಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಆದರೆ ಬಾಡಿಗೆ ಹಣವನ್ನು ನೀಡುವುದಾಗಿ ಭರವಸೆ ನೀಡಿದ್ದರೂ ಅಧಿಕಾರಿಗಳು ಹಣ ನೀಡದೆ ಸತಾಯಿಸುತ್ತಿದ್ದರು. ಅಲ್ಲದೆ ನಗರದ ಸಂಪಳ್ಳ ಎಂಬಲ್ಲಿ ಭೂಮಿ ಕೊಡುವುದಾಗಿ ತಿಳಿಸಿದ್ದರೂ ಇನ್ನೂ ಭೂಮಿ ಮಂಜೂರಾತಿ ಯಾಗಿರುವುದಿಲ್ಲ. ಜಿಲ್ಲಾಧಿಕಾರಿಯ ಸೂಚನೆಯಂತೆ ಮಂಗಳೂರು ಸಹಾಯಕ ಆಯುಕ್ತರು ಕೆಐಎಡಿಬಿ ಅಧಿಕಾರಿಗಳ ಸಮ್ಮುಖ ನಾಲ್ಕು ಬಾರಿ ಸಭೆ ನಡೆಸಿದ್ದರೂ ಯಾವುದೇ ಪ್ರಯೋಜನ ಕಂಡುಬಂದಿಲ್ಲ. ಈ ಹಿನ್ನೆಲೆಯಲ್ಲಿ ನಿರ್ವಸಿತ ಕೊರಗರು ಧರಣಿ ಸತ್ಯಾಗ್ರಹ ನಡೆಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ಆದಿವಾಸಿ ಹಕ್ಕುಗಳ ಜಿಲ್ಲಾ ಸಮನ್ವಯ ಸಮಿತಿಯ ಸಂಚಾಲಕ ಲಿಂಗಪ್ಪ ನಂತೂರು, ಮಂಗಳೂರು ನಗರ ಆದಿವಾಸಿ ಹಕ್ಕು ಸಮನ್ವಯ ಸಮಿತಿ ಸಂಚಾಲಕ ಜಯಕುಮಾರ್, ಕಿಶೋರ್ ಪೊಕೋಣಡಿ, ತಿಮ್ಮಯ್ಯ ಕೊಂಚಾಡಿ, ಮಾಧವ ತಣ್ಣೀರು ಬಾವಿ, ಕವಿತಾ, ಅಮಿತಾ ಮತ್ತಿತರರು ಭಾಗವಹಿಸಿದ್ದರು. ○

ಕಾಗದದ ಸಂವಿಧಾನ

ದುಡಿಸುವವ ಮಾತ್ರವೇ ಕೋಟ್ಯಾಧಿಪತಿ
ದುಡಿವವಗೆ ಇಲ್ಲಿಲ್ಲ ಗಂಜಿಗೂ ಗತಿ
ಸಮಾನತೆ ಸಂವಿಧಾನ ಕಾಗದದಿ ಉಂಟು
ಬಡವನಿಗೆ ಅದು ನೋಡಿ ಕನ್ನಡಿಯ ಗಂಟು

-ವಿಡಂಬಾರಿ

'ವಿಮೋಚನೆ ಬಯಸಿ ನಗರದತ್ತ ಮಹಿಳೆಯರು'.....

ಪುಟ 11 ರಿಂದ

ಮಹಿಳೆಯರಿಂದಲೇ ನಡೆಯಬೇಕಾಗಿಲ್ಲ. ಈವರೆಗೆ ಹಾಗೆ ನಡೆದಿಲ್ಲ. ಮಹಿಳಾ ಚಳುವಳಿ ಎಂದರೆ ಪುರುಷರನ್ನು ವಿರೋಧಿಸುವುದಲ್ಲ. ಒಂದು ಕಾಲದಲ್ಲಿ ಸ್ತ್ರೀವಾದ ಆರಂಭವಾದಾಗ ಸಮಾನತೆಗಾಗಿ, ಸಮಾನ ಕೆಲಸ-ಸಮಾನ ವೇತನಕ್ಕಾಗಿ ಹೋರಾಟ ನಡೆಯಿತು. ಅಲ್ಲಿ ರಾಜಕೀಯ ಆಸಕ್ತಿ ಇತ್ತು. ಭಾರತದಲ್ಲಂತೂ ಮಹಿಳಾ ಪರ ಹೋರಾಟ ಜ್ಯೋತಿಬಾ ಫುಲೆಯಂತಹ ಪುರುಷರಿಂದಲೇ ನಡೆದಿದೆ. ಇಲ್ಲಿ ಸಾವಿತ್ರಿ ಫುಲೆ, ಜ್ಯೋತಿಬಾ ಫುಲೆ ಮೊದಲ ಬಾರಿಗೆ ಮಹಿಳೆಯರಿಗೆ ಶಿಕ್ಷಣ ಕೊಡಲು ಪ್ರಾರಂಭಿಸಿದರು' ಎಂದರು.


'ಚಳುವಳಿ ಎಂದರೆ ತನ್ನ ವ್ಯಕ್ತಿತ್ವವನ್ನು ಮನುಷ್ಯಪರವಾದ, ಪ್ರಗತಿಯ ಪರವಾದ ವಿಚಾರಗಳಿಗೆ ಅರ್ಪಿಸಿಕೊಳ್ಳುವುದೇ ಆಗಿದೆ' ಎಂದರು. ಹೆಣ್ಣನ್ನು ಒಂದು ಪೌಲ್ಟ್ರಿ ಕೋಳಿಯಂತೆ ಬೆಳೆಸಲಾಗುತ್ತಿದೆ. ಅವಳಿಗೆ ಕುಟುಂಬ, ಬಂಜೆತನ ಮತ್ತು ವ್ರತ, ಬಾಗೀನ ಕೊಡುವುದೇ ಮುಂತಾದ ಧಾರ್ಮಿಕ ಕ್ರಿಯೆಗಳಿಗೆ ದೂಡಲಾಗುತ್ತಿದೆ. ಇದು ಅವಳ ಆಯ್ಕೆಯಲ್ಲ. ಅವಳ ಮೇಲೆ ಹೇರಲ್ಪಟ್ಟದ್ದು. ಕೋಮುವಾದದ ನೆಲೆಯಲ್ಲಿ ಧರ್ಮದ ಹೆಸರಿನಲ್ಲಿ ದೇಶದೊಳಗಡೆ ನಡೆಯುತ್ತಿರುವ ಹುನ್ನಾರ ಒಂದುಕಡೆಯಾದರೆ ಇಡೀ ಜಾಗತಿಕ ಮಟ್ಟದಲ್ಲಿ ಬಂಡವಾಳಗಾರರು ಭಾರತದ ಜನರನ್ನು ಕಾರ್ಮಿಕರಾಗಿ ದುಡಿಯುವ ಒಂದು ವರ್ಗವನ್ನು ಸೃಷ್ಟಿಸುತ್ತಿದ್ದಾರೆ. ನಮ್ಮ ಆಲೋಚನೆ, ಚಳುವಳಿ ಇದರ ವಿರುದ್ಧ ನಿಲ್ಲುವ ಸ್ಥಿತಿಯಲ್ಲಿ ನಾವಿಲ್ಲ. ಆದರೆ ಇದನ್ನು ಹೇಗೆ ಈ ವ್ಯವಸ್ಥೆ ರೂಪಿಸುತ್ತದೆಯೋ ಅದರ ಮೂಲವನ್ನು, ಆಳವನ್ನು ಗುರುತಿಸಿಕೊಂಡು ಒಟ್ಟು ಮಾನವ ಪರವಾದ ಯೋಜನೆಗಳನ್ನು ಹೋರಾಟದ ನೆಲೆಯಲ್ಲಿಯೇ ನಾವು ರೂಪಿಸಿಕೊಳ್ಳಬೇಕಾಗಿದೆ.' ಎಂದರು. ನಾಗರಾಜ ಧಾರೇಶ್ವರ ಕಾರ್ಯಕ್ರಮವನ್ನು ರೂಪಿಸಿದರು.

ಇಡೀ ದಿನದ ಉತ್ಸವದಲ್ಲಿ ಹಿರಿಯ ಲೇಖಕರಾದ ಡಾ. ಎಸ್. ಆರ್. ನಾಯಕ, ಶಾಂತಿ ನಾಯಕ, ಎನ್.ಕೆ. ವಸಂತರಾಜ್, ಶ್ರೀಮತಿ, ಕೆ. ಮಹಾಂತೇಶ್, ಲತಾ, ಕೋಲ್ಲಿರ್ಸಿ ಕನ್ನೇಶ, ಬಿ.ವಿ.ಭಂಡಾರಿ, ಪ್ರೊ. ಮೋಹನ ಹಬ್ಬು ಪ್ರೊ. ಭೂಮಿಗೌಡ, ವಿಡಂಬಾರಿ ಮುಂತಾದವರು ಭಾಗವಹಿಸಿದ್ದರು. ○

ರಂಜಿಸಿದ ಮಕ್ಕಳ ನಾಟಕ

ಮುಖ್ಯಾಯ ಸಮಾರಂಭದ ನಂತರ ಚಿಂತನ ರಂಗ ಅಧ್ಯಯನ ಕೇಂದ್ರವು ಪ್ರಸ್ತುತ ಪಡಿಸಿದ 'ಮಕ್ಕಳ ರವೀಂದ್ರ' ನಾಟಕವು ಎಲ್ಲಾ ಪ್ರೇಕ್ಷಕರ ಮನ ಮುಟ್ಟುವಲ್ಲಿ ಯಶಸ್ವಿಯಾಯಿತು. ಸುಧಾ ಆಡುಕಳ ಅವರು ರಚಿಸಿದ, ಕಿರಣ ಭಟ್ ಮತ್ತು ಶ್ರೀಪಾದ ಭಟ್ ನಿರ್ದೇಶಿಸಿದ ಈ ನಾಟಕಕ್ಕೆ ರಂಗ ಸಜ್ಜಿಕೆ ರೂಪಿಸಿದವರು ದಾಮೋದರ ನಾಯ್ಕ. ಪ್ರಸಾದನ ಚಂದ್ರು ಉಡುಪಿ. ಈ ನಾಟಕವನ್ನು ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಪ್ರಾಯೋಜಿಸಿತ್ತು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ನೂರು ವರ್ಷವಾಗಿರುವ ಸಂದರ್ಭದಲ್ಲಿ 'ಸಹಯಾನ'ದ ಈ ಅರ್ಥಪೂರ್ಣ ಕಾರ್ಯಕ್ರಮ ನಾಡಿನ ಗಮನ ಸೆಳೆಯಿತು.



ಡಾ: ಸಬೀಹಾ ಭೂಮಿಗೌಡ ಮಾತನಾಡುತ್ತಿರುವುದು, ವಸು, ಕೆ.ನೀಲಾ ಜೊತೆಗೆ

ಗಮನ ಸೆಳೆದ ಜಾನಪದ ಕಲೋತ್ಸವ

ಇದು ಈ ವರ್ಷದ ವಿಶೇಷ. ಬಹುತೇಕವಾಗಿ ಹೆಣ್ಣು ಮಕ್ಕಳ ನೋವು ನಲಿವಿನ ಕುರಿತು ಜಾನಪದ ಅಭಿವ್ಯಕ್ತಿ ಇಲ್ಲಿತ್ತು. ಜಾನಪದ ಹಾಡುಗಾರ್ತಿ ಹನುಮಿ ಗೌಡ, ಗುಣವಂತೆ ಇವರು ಗಾಮೊಕ್ಕಲ ಭಾರತದ ಕೆಲವು ಹಾಡುಗಳನ್ನು ಹಾಡಿದರು. ನಾಡೋಜ ಶುಕ್ರಿ ಗೌಡ ಕೆಲವು ಹಾಡುಗಳ ಮೂಲಕ ತನ್ನ ಕಂಠಸಿರಿಯನ್ನು ಹೊರಗೆಡಹಿದರು. ಮಾಧವಿ ಭಂಡಾರಿ,ಕೆರೆಕೋಣ,ದೇವಾನಂದ ಗಾಂವ್ಕರ,ಶ್ರೀಪಾದ ಭಟ್ಟ ಅವರ ದನಿ ಜಾನಪದ ಮಹಿಳಾ ಲೋಕವನ್ನು .. ತೆರೆದಿಟ್ಟವು.ಸಿದ್ದಿ ಹೆಣ್ಣು ಮಕ್ಕಳ ತಂಡದಿಂದ ಡಮಾಮಿ ಕುಣಿತ, ಸುಗ್ಗಿ ಕುಣಿತ ಮತ್ತು ಶಿವ ಭಂಡಾರಿ, ಪರಮೇಶ್ವರ ಭಂಡಾರಿ, ಗಣೇಶ ಭಂಡಾರಿ ಇವರ ತಂಡದಿಂದ ಪಂಚವಾದ್ಯದ ಕಾರ್ಯಕ್ರಮ ನಡೆದು ಉತ್ಸವಕ್ಕೆ ಅರ್ಥಪೂರ್ಣ ಮೆರಗು ತಂದವು. ಯಮುನಾ ಗಾಂವ್ಕರ ಕಾರ್ಯಕ್ರಮವನ್ನು ನಿರ್ವಹಿಸಿದರು.ಈ ಜಾನಪದ ತಂಡಗಳ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರು ಪ್ರಾಯೋಜಿಸಿದ್ದರು. ○

JANASHAKTHI KANNADA VARA PATRIKE JUNE 05, 2011 Price : Rs. 5/- RNI No. KARKAN /2006/17926 Posted on every Saturday Postal Reg. No. RNP/KA/BGS/2018/2010-12
Posted at MBC Bangalore GPO



ಪುಟ್ಟಕ್ಕನ ಹೈವೇಗುಂಟ ನಾಕ್ಹೆಜೆ

ಅಭಿವೃದ್ಧಿಯ ಮಂತ್ರಪಠಣೆಯ ಉಗುಳಿನಲ್ಲಿ ಕೊಚ್ಚಿಹೋದ ಜನರ ಬದುಕಿನ ಕಿರು ನೋಟ ಕಟ್ಟಿಕೊಡುವ ಬಿ.ಸುರೇಶ್ ರವರ ಪುಟ್ಟಕ್ಕನ ಹೈ ವೇ ಇಂದಿನ ಅಭಿವೃದ್ಧಿಯ ಮಾದರಿಗೆ ಹಿಡಿದ ಕನ್ನಡಿ. ನಾಗರೀಕತೆಯ ಬೆಳವಣಿಗೆ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಪರ್ಕ, ಹಳ್ಳಿಯಿಂದ ದಿಲ್ಲಿಗೆ ಸಂವಹನಗಳ ಅಗತ್ಯವಿದೆ ಎಂಬುದನ್ನು ಒಪ್ಪಿಕೊಳ್ಳುತ್ತಲೇ ಅದಕ್ಕಾಗಿ ವ್ಯಯಿಸುವ ವೆಚ್ಚ,ಕಿತ್ತುಕೊಳ್ಳುವ ಬದುಕು ಮತ್ತು ಅದರ ಫಲಾನುಭವಿಗಳು ಯಾರು? ಎಂಬುದನ್ನು ಸೂಕ್ಷ್ಮವಾಗಿ ಅವಲೋಕಿಸುತ್ತದೆ ಬಿ.ಸುರೇಶ್ ರ ಪುಟ್ಟಕ್ಕ.

ಊರಿಗೆ ಹೈ-ವೇ ಬರುತ್ತದೆ ಅದರಿಂದ ಒಂದಿಷ್ಟು ಸಂಪಾದನೆ ಮಾಡಿಕೊಳ್ಳುವವನೇ ಬುದ್ಧಿವಂತ ಎಂಬ ವ್ಯವಹಾರಿಕ ಚತುರತೆಯನ್ನು ಪ್ರಸ್ತಾಪಿಸುತ್ತ ಮನಸ್ಸುಗಳ ವಾಣಿಜ್ಯೀಕರಣವಾಗುತ್ತಿರುವುದನ್ನು ಪುಟ್ಟಕ್ಕ ಗುರುತಿಸುತ್ತದೆ. ಅಂತಹ ವ್ಯವಹಾರ ಚತುರನನ್ನೂ ಕೂಡ ಊರಿನ ಶ್ರೀಮಂತ ತನ್ನ ಚಾಣಾಕ್ಷತೆಯಿಂದ ಹೇಗೆ ಯಾಮಾರಿಸಬಲ್ಲ ಎಂಬುದನ್ನು ಹೈ-ವೇ ತನ್ನ ಜಮೀನಿನ ಪಕ್ಕದಲ್ಲಿ ಹೋಗದ ಜಾಗವನ್ನೇ ಅರಸಿ ಹೋಟೆಲ್ ಇಡಲು ಮಾರಾಟ ಮಾಡುವ ಪರಿ ಬಿಡಿಸಿ ಇಡುತ್ತದೆ. ಇಂದಿನ ಜಗಮಗ ಜಗತ್ತಿನಲ್ಲಿ ಜಾಹಿರಾತು ಎಷ್ಟು ಪ್ರಭಾವ ಹೊಂದಿದೆ, ಹೋಟೆಲ್ ಹೆಸರು "ಇಗ್ನೇಸ್ವರ' ಆದರೂ ಚಿತ್ರ ಬಾಬ್ ಕಟ್ ಹುಡುಗಿಯದೇ ಬೇಕು!

ಮೂಲದಲ್ಲಿ ಬಂದ ಡ್ಯಾಮ್ ಬದುಕಿದ ನೆಲವನ್ನು ಬಿಡಿಸಿತು . ಆದರೆ ಆಗ ಇನ್ನೊಂಡೆ ಬದುಕಿಗೆ ತಾಣವಿತ್ತು.ಯಾಕೆಂದರೆ ನೀರಿಗೆ ಅಡ್ಡಲಾಗಿ ಕಟ್ಟಿದ ಕಟ್ಟು ಎಲ್ಲೊ ಒಂದು ಕಡೆ ಕೃಷಿಗೆ, ಭೂಮಿಗೆ ಮತ್ತು ಜನಸಾಮಾನ್ಯರ ಬದುಕಿಗೆ ನೆರವಾಗುವ ನೆಲೆಯಲ್ಲಿದ್ದುದರಿಂದ ಅಲ್ಲಿ ಬದುಕಿಗೆ ಅವಕಾಶವಿದೆ.ಆದರೆ ಹೊಗೆಯುಗುಳುತ್ತ ರೊಂಯ್ಯೆಂದು ಶರವೇಗದಲ್ಲಿ ಓಡಾಡುವ ಮೋಟಾರುಗಳಿಗೆ "ನೈಸ್" ಆಗಿರಬೇಕಾದ ರಸ್ತೆ ಜನಸಾಮಾನ್ಯರ ಬದುಕನ್ನು ಹುಡಿಮಾಡುವ ಬಗ್ಗೆ ಸುರೇಶ್ ಮಾತನಾಡುತ್ತಾರೆ.ರಸ್ತೆ ಬೇಕು ಆದರೆ ಅದು ಬದುಕುಗಳ ಮಧ್ಯೆ ಗೋಡೆಯಾಗಿಯಲ್ಲ.ಬದಲಿಗೆ ಬದುಕುಗಳ ಮಧ್ಯೆ ಒಂದು ಜಗತ್ತಿನಿಂದ ಇನ್ನೊಂದು ಜಗತ್ತಿಗೆ ಸಂಪರ್ಕ,ಸಂಬಂಧ ಕಲ್ಪಿಸುವ ಹೈ-ವೇ ಆಗಬೇಕಲ್ಲವೇ? ಆದರೆ ಇಂದು ಸೃಷ್ಟಿಯಾಗುತ್ತಿರುವ ಹೈ-ವೇಗಳು ದೊಡ್ಡ ಗೋಡೆಗಳಮೇಲೆ ಆಗುತ್ತಿವೆ ಎಂಬುದನ್ನು ಪ್ರಸ್ತಾಪಿಸುತ್ತ ಈಚಿನವರು ಆಚಿನವರ ಮಧ್ಯೆ ಕಟ್ಟುವ ಗೋಡೆಯಾಗಿ ರಸ್ತೆಗಳ್ಳು ನಿರ್ಮಾಣವಾಗುತ್ತಿದೆ ಎಂಬ ಮಾತುಗಳು ಉಳ್ಳವರ ಮತ್ತು ಇಲ್ಲದವರ ಮಧ್ಯೆ ಜಾಗತೀಕರಣ ಹೆಚ್ಚಿಸುತ್ತಿರುವ ಅಂತರವನ್ನು ಪ್ರಸ್ತಾಪಿಸುತ್ತಾರೆ. ಹೈ-ವೇಯನ್ನು ಉಳ್ಳವರು ಎಷ್ಟು "ನೈಸ್" ಆಗಿ ತಮ್ಮಪರ ಮಾಡಿಕೊಳ್ಳಬಲ್ಲರೆಂದು ನೈಸಾಗಿಯೇ ಸಿನಿಮಾ ಮಾತನಾಡುತ್ತದೆ. ಜಿಲ್ಲಾಧಿಕಾರಿಗಳಿಗೆ ಮನವಿ ಕೊಡಲು ಮಹಿಳೆ ಮತ್ತು ಬಡವಳಾದ ಪುಟ್ಟಕ್ಕಳನ್ನು ಬಳಸಿಕೊಳ್ಳುವ ಸ್ಟಂಟ್ ಮಾಡುವ ಊರಿನ ಪುಡಾರಿಗಳು ಕಾಪಾಡಿಕೊಂಡಿದ್ದು ತಮ್ಮ ಜಮೀನನ್ನು ಮಾತ್ರ!

ನೆಲದ ನಂಟನ್ನು ಕಳೆದು ಕೊಳ್ಳುವುದು ,ಅದರೊಂದಿಗಿನ ಭಾವನಾತ್ಮಕ ಸಂಬಂಧದಿಂದ ದೂರ ಸಾಗಿಬಿಡುವುದು ಅಷ್ಟು ಸುಲಭದ ಮಾತಲ್ಲ.ಆದರೆ ಥಳುಕು ಬಳುಕಿನ ಜಗತ್ತಿನ ಬೆರಗಿಗೆ ತೆರೆಸಿ ಜಮೀನು ಮಾರಿದ ಹಣದಲ್ಲಿ ಪರ್ಯಾಯ ಬದುಕಿನ ಮಾರ್ಗಕ್ಕೆ ದಾರಿ ತೋರಿಸದೇ ಕಾರು ಕೊಳ್ಳುವ ಐಷಾರಾಮೀ ಜೀವನಕ್ಕೆ ಮನಸೋಲುವ, ಕೊನೆಯಲ್ಲಿ ಭಿಕಾರಿಗಳಾಗಿ ಕೂಲಿ ಕೆಲಸವೇಗತಿಯಾಗುವ ಮಟ್ಟಕ್ಕೆ ರೈತರು ಬಂದಿಳಿದ ಅಂಶ "ಅಭಿವೃದ್ಧಿ"ಯ ಈ ಮಾದರಿಯಿಂದ ಅಂಚಿಗೆ ತಳ್ಳಲ್ಪಟ್ಟ ಜನಸಮುದಾಯದ ವಾಸ್ತವ ಸ್ಥಿತಿ.ಜಾಗತೀಕರಣದ ಯುಗದಲ್ಲಿ ಭೂಮಿಗೆ ಸ್ವರ್ಗ ತಂದಿಳಿಸುವ ಕನಸು ಬಿತ್ತಿ ಜನಸಾಮಾನ್ಯರನ್ನು ನಿರಾಶ್ರಿತರನ್ನಾಗಿಸಿ, ಬದುಕನ್ನು ನರಕ ಸದೃಶ್ಯಮಾಡುವುದರಲ್ಲಿ ಇಂತಹ ಹೆದ್ದಾರಿಗಳ ಪಾತ್ರವೂ ಇದೆ.ಈ ಅಂಶವನ್ನೆ ಮುಖ್ಯವಾಗಿಟ್ಟುಕೊಂಡು ತೆಗೆದ ಸಿನಿಮಾ ಅದರ ಹಿಂದೆ ಮುಂದೆ ಆಗುತ್ತಿರುವ ಬದುಕಿನ ಪಲ್ಲಟಗಳನ್ನು ಬಿಚ್ಚುತ್ತ ಹೋಗುತ್ತದೆ.

ಗಂಡನನ್ನು ಕಳೆದುಕೊಂಡೂ ಧೃತಿಗೆಡದ, ತಾನು ಅಳುತ್ತ ಕುಳಿತರೆ ಬದುಕು ಹೇಗೆ?ಎಂದು ಪ್ರಶ್ನಿಸುವ ಪುಟ್ಟಕ್ಕ ಅವಳ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳುವ ಯಾರ ಪ್ರಯತ್ನಗಳಿಗೂ ಬಲಿಯಾಗುವದಿಲ್ಲ.ಹತಾಶೆಯ ನಡೆಯಲ್ಲಿ ಕಾಲಿಗೆ ತೊಡರಿ ಹಣ ತೋರಿಸಿ ಕರೆಯುವ ಲಾರೀ ಡ್ರೈವರ್, ಅವಕಾಶ ಸಿಕ್ಕಾಗೆಲ್ಲ ಅವಳನ್ನು ಬಯಸುವ ಶನಿಕಥೆ ಕೃಷ್ಣ ನನ್ನು ಬೈಯುತ್ತಲೇ ದೂರ ನಿಲ್ಲಿಸುತ್ತಾಳೆ.ಆದರೆ ಪಟ್ಟಣಕ್ಕೆ ಹೋಗುವಾಗ ಅವನ ಸಹಾಯ ತೆಗೆದುಕೊಳ್ಳುವದು ಹಳ್ಳಿಯ ಸಹಬಾಳ್ವೆಯ ಬದುಕಿನ ಸೂಕ್ಷ್ಮತೆಯನ್ನು ತೋರಿಸುತ್ತದೆ. ನಾಗರೀಕತೆ ಬೆಳೆದಂತೆಲ್ಲ "ಮೂಢ ನಂಬಿಕೆ ಮರೆಯಾಗಬೇಕೆಂಬ" ನಿರ್ದೇಶಕರ ಆಶಯ ಶನಿಕಥೆ ಕೇಳುವವರೆ ಇಲ್ಲ ಹಾಗಾಗಿ ಹೆದ್ದಾರಿಯ ಚೆಕ್ ಪೋಸ್ಟ ಕಾವಲುಗಾರ ಕೆಲಸಕ್ಕೆ ಸೇರಿಕೊಂಡೆ ಎನ್ನುವ ಮೂಲಕ ತೋರಿಸಲು ಪ್ರಯತ್ನಿಸಿದ್ದಾರೆ. ಎಂದು ಕೊಳ್ಳುತ್ತೇನೆ.. ಜಮೀನು ಕಳೆದುಕೊಂಡ ಸಂದರ್ಭದಲ್ಲಿ ಹೋರಾಟಕ್ಕೆ ಇಳಿದ ವ್ಯಕ್ತಿ ಕೊನೆಗೆ ಹೆದ್ದಾರಿಯ ಕೂಲಿ ಕೆಲಸಕ್ಕೆ ಇಡೀ



ಕುಟುಂಬವನ್ನೆ ತೊಡಗಿಸುವ ಪರಿ, ಹಳ್ಳಿಗಳನ್ನು ನುಂಗಿ ಹಾಕಿದ ಹೆದ್ದಾರಿಗಳು ಮಹಿಳೆಯರನ್ನು ಮೈಮಾರಿಕೊಳ್ಳುವ ದಂಧೆಗೆ ನೂಕುವುದು.ಹೀಗೆ,ಜಾಗತೀಕರಣ ತಂದೊಡುತ್ತಿರುವ ಎಲ್ಲಾ ಅಪಾಯಗಳನ್ನು ಒಟ್ಟಿಗೆ ತೋರಿಸುವ ಪ್ರಯತ್ನವನ್ನು ಪುಟ್ಟಕ್ಕನಲ್ಲಿ ನಾವು ಕಾಣಬಹುದು.

ಮೂಲದಲ್ಲಿ ನೆಲ, ನೆಲೆ ಕಳೆದುಕೊಂಡು ನಿರ್ವಸಿತರಾಗಿ ಬಂದವರಿಗೆ ಇನ್ನೊಂದೆಡೆ ಬದುಕು ರೂಪಿಸಿಕೊಳ್ಳಲು ಅವಕಾಶ ಸಿಕ್ಕಿತೇನೋ ನಿಜ.ಹತ್ತಾರು ವರ್ಷಗಳಿಂದ ಅಲ್ಲಿ ಬೆಳೆ ಬೆಳೆದು ಬದುಕು ಕಟ್ಟಿಕೊಂಡಿದ್ದು ವಾಸ್ತವ.ಆದರೆ ಆ ನೆಲದ ಹಕ್ಕುದಾರಿಕೆ ಅವರದಲ್ಲ. ಇದು ವಾಸ್ತವದ ಹಿಂದಿನ ಕಠೋರ ಸತ್ಯ. ಈ ಸತ್ಯವನ್ನು ಬಹಳ ನಾಜೂಕಾಗಿ ಮರೆಮಾಚಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಮತ್ತು ತನ್ನ ಎಲ್ಲ ಕುಕೃತ್ಯಗಳಿಗೆ ಕಣ್ಣಿಗೆ ಕಾಣದ "ಶಿವ" ನನ್ನು ತೋರಿಸಿ ಜನರನ್ನು ವಂಚಿಸುವ ಪಾತ್ರ ಇಂದಿನ ಬೆಂಗಳೂರು ಸುತ್ತ ರೈತರ/ಬಗರ್ ಹುಕುಮ್ ಸಾಗುವಾಳಿದಾರರ ಬದುಕಿನ ನೈಜ ಸ್ಥಿತಿ.ಮತ್ತು ಜನರನ್ನು ದೇವರು,ಮಠ ಗಳ ಹೆಸರಿನಲ್ಲಿ ವಂಚಿಸುತ್ತಿರುವ ನೇತಾಗಳ ಚಿತ್ರಣವಾಗಿಯೇ ನಾನು ಗ್ರಹಿಸಿದ್ದು.

ಶೃತಿಯುವರ ಅಭಿನಯ ಉತ್ತಮವಾಗಿದೆ ಉತ್ತಮ ಛಾಯಾಗ್ರಹಣ, ಅಲ್ಲಲ್ಲಿ ಪ್ರಕೃತಿಯಲ್ಲಿ ಸಹಜವಾಗಿ ಬದುಕುತ್ತಿರುವ ಕೀಟಾಣುಗಳನ್ನು ಸೆರೆಹಿಡಿದು ಸಜೆಸ್ಟೀವ್ ಪಾತ್ರಗಳನ್ನಾಗಿಸಿದ್ದು, ಸಖತ್ತಾಗಿದೆ ರಸ್ತೆ ಎಂದು ಉದ್ಗರಿಸುವ ನೈಸ್ ರಸ್ತೆಯ ಗರ್ಭದಲ್ಲಿ ಅಡಗಿಕೊಂಡಿರುವ ಕ್ರೌರ್ಯವನ್ನು ಸೆರೆಹಿಡಿದ ಕ್ಯಾಮೆರ , ಸಿನಿಮಾಕ್ಕೆ ಮೆರಗು ನೀಡಿದೆ.

ಹೊಸ ತಲೆಮಾರಿನ ನಿರ್ದೇಶಕರು ಪರಿಹಾರ ಸೂಚಿಸ ಬಯಸುವುದಿಲ್ಲ ನಿಜ.ಪ್ರೇಕ್ಷಕರ ವಿವೇಚನೆಗೆ ಬಿಡುತ್ತಾರೆ. ಆದರೆ ಇಂತಹ ಸಿನಿಮಾಗಳ ಮೂಲಕ ಮಾತನಾಡುವಾಗ ನಿಮಗೆ ಬಿಟ್ಟಿದ್ದು ಎಂದು ಬಿಟ್ಟರೆ ಎಲ್ಲ ಅಭಿವೃದ್ಧಿ ಕಾರ್ಯಗಳು ಜನವಿರೋಧಿ ಎಂಬ ಅಭಿಪ್ರಾಯವನ್ನು ಮೂಡಿಸಿಬಿಡುವ ಅಪಾಯವುಂಟು.ಹಾಗಾಗಿ ನಾಗರೀಕತೆ,ನಗರೀಕರಣಗಳ ಅನಿವಾರ್ಯತೆಯ ಸಂದಭದಲ್ಲಿ ಅಂಚಿನ ಜನಸಮುದಾಯಕ್ಕೆ ಬದುಕು ಕಟ್ಟಿಕೊಡುವುದನ್ನು ಜವಾಬದಾರಿ ಹೊತ್ತವರು ಮರೆತರೆ ಜನ ನೆನಪಿಸುತ್ತಾರೆ ಎಂಬ ಮಾತು ಬೇಕು.ಅಲ್ಲಲ್ಲಿ ತೋರಿಸುವ ಸಣ್ಣ ಮಟ್ಟದ ಪ್ರತಿಭಟನೆಗಳು ಜನ ಚಳುವಳಿಯ ಸಂಕೇತವೇ ಆಗಿದ್ದರೂ ಯಾವ ಚಳುವಳಿಯೂ ಏನನ್ನೂ ಮಾಡಲಾರದು ಎಂಬ ನೈರಾಶ್ಯ ಭಾವವನ್ನು ಸೂಚಿಸುವ ಸಂಕೇತವೂ ಆಗಿಬಿಡಬಹುದು. ಇದಾಗಬಾರದು. ಪರಿಹಾರವಲ್ಲದಿದ್ದರೂ ಪರ್ಯಾಯಗಳಿವೆ ಎಂಬುದು ಬರಬೇಕಾದುದು ಅಗತ್ಯ.

ಅಭಿನಂದನೆ

ಪುಟ್ಟಕ್ಕನ ಹೈವೆ ಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿರುವುದಕ್ಕೆ ನಿರ್ದೇಶಕ ಬಿ.ಸುರೇಶ್ ಹಾಗೂ ಇಡೀ ತಂಡಕ್ಕೆ ಅಭಿನಂದನೆಗಳು



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH